ಶುಕ್ರವಾರ, ಮಾರ್ಚ್ 28, 2025 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪೆನ್‌ಡ್ರೈವ್ ಸಹಿತ ಡಿಜಿಪಿಗೆ ದೂರು ಸಲ್ಲಿಸಿದ ರಾಜೇಂದ್ರ

ಕೊಲೆಗೆ ಸುಪಾರಿ: ದೂರು

ಪ್ರಜಾವಾಣಿ ವಾರ್ತೆ

ರಾಜೇಂದ್ರ

ಬೆಂಗಳೂರು: 'ಮಗಳ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಶಾಮಿಯಾನ ಹಾಕಲು ಬಂದಿದ್ದ ಇಬ್ಬರು, ನನ್ನ ಕೊಲೆಗೆ ಪ್ರಯತ್ನಿಸಿದ್ದರು. ಅವರು ₹5 ಲಕ್ಷಕ್ಕೆ ಸುಪಾರಿ ಪಡೆದಿದ್ದಾರೆ' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಪುತ್ರ, ವಿಧಾನ ಪರಿಷತ್ ಸದಸ್ಯ ಆರ್. ರಾಜೇಂದ್ರ ರಾಜಣ್ಣ ಅವರು ಡಿಜಿಪಿ ಅಲೋಕ್ ಮೋಹನ್ ಅವರಿಗೆ ಗುರುವಾರ ದೂರು ಸಲ್ಲಿಸಿದರು.

ದೂರಿನ ಪ್ರತಿಯಲ್ಲಿ ಯಾರೊಬ್ಬರ ಹೆಸರು ಹಾಗೂ ದೂರವಾಣಿ ಸಂಖ್ಯೆ ಉಲ್ಲೇಖಿಸಿಲ್ಲ. ಆದರೆ, ಪೆನ್‌ಡ್ರೈವ್‌ವೊಂದನ್ನು ದೂರಿನ ಪ್ರತಿಯೊಂದಿಗೆ ನೀಡಿದ್ದಾರೆ ಎಂಬುದು ಗೊತ್ತಾಗಿದೆ.

ಡಿಜಿಪಿ ಅವರು ದೂರು ಸ್ವೀಕರಿಸಿದ ಬಳಿಕ ರಾಜೇಂದ್ರ ಅವರೊಂದಿಗೆ ಸ್ವಲ್ಪ ಸಮಯ ಚರ್ಚಿಸಿದರು. ಘಟನೆಯು ತುಮಕೂರಿನಲ್ಲಿ ನಡೆದಿರುವ ಕಾರಣಕ್ಕೆ ಅಲ್ಲಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಲಿಖಿತ ದೂರು ಸಲ್ಲಿಸುವಂತೆ ಅವರು ಸೂಚಿಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ರಾಜೇಂದ್ರ, 'ಹನಿಟ್ರ್ಯಾಪ್ ಯತ್ನದ ಬಗ್ಗೆ ಸಚಿವ ಕೆ.ಎನ್.ರಾಜಣ್ಣ ಅವರು ಗೃಹ ಸಚಿವರಿಗೆ ಲಿಖಿತ ದೂರು ನೀಡಿದ್ದಾರೆ. ನನ್ನ ಮೇಲೆ ಹನಿಟ್ರ್ಯಾಪ್ ಆಗಿಲ್ಲ. ದೂರವಾಣಿ ಕರೆ ಮೂಲಕ ಯತ್ನ ನಡೆಯುತ್ತಿತ್ತು. ಆದರೆ, ನನ್ನ ಹತ್ಯೆಗೆ ಯತ್ನ ನಡೆದಿತ್ತು' ಎಂದು ಹೇಳಿದರು.

'ನವೆಂಬರ್ 16ರಂದು ತುಮಕೂರಿನ ಮನೆಯಲ್ಲಿ ನನ್ನ ಮಗಳ ಜನ್ಮದಿನದ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಹಿಂದಿನ ದಿವಸ ಶಾಮಿಯಾನ ಹಾಕಲು ಬಂದವರು ಕೊಲೆಗೆ ಯತ್ನಿಸಿದ್ದರು. ಅಂದು ಅವರ ಯೋಜನೆ ವಿಫಲವಾಗಿತ್ತು. ಜನವರಿಯಲ್ಲಿ ನನಗೆ ದೊರೆತ ಆಡಿಯೊದಿಂದ ಸುಪಾರಿ ನೀಡಿದ್ದ ಮಾಹಿತಿ ಲಭಿಸಿತ್ತು' ಎಂದು ಹೇಳಿದರು. 'ತುಮಕೂರಿನ ಸೋಮ ಹಾಗೂ ಭರತ್ ಎಂಬುವವರ ಬ್ಯಾಂಕ್ ಖಾತೆಗೆ ₹5 ಲಕ್ಷ ಜಮೆ ಮಾಡಿ, ಕೊಲೆಗೆ ಸುಪಾರಿ ನೀಡಲಾಗಿದೆ. ಆಡಿಯೊದಲ್ಲಿ ಅದು ದಾಖಲಾಗಿದೆ' ಎಂದು ತಿಳಿಸಿದರು.

ಮಧುಬಲೆ: ಸಿಐಡಿ ವಿಚಾರಣೆ ಆರಂಭ

ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಮಧುಬಲೆಗೆ ಕೆಡವಲು ಪ್ರಯತ್ನಿಸಿದ ಪ್ರಕರಣದ ಕುರಿತು ಪ್ರಾಥಮಿಕ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಸಿಐಡಿಗೆ ಸೂಚಿಸಲಾಗಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಂದ ಸೂಚನೆ ಬಂದ ಬೆನ್ನಲ್ಲೇ ಸಿಐಡಿ ಪೊಲೀಸರು ಪ್ರಕರಣದ ವಿಚಾರಣೆ ಆರಂಭಿಸಿದ್ದಾರೆ. ಸಿಐಡಿಯ ಐಜಿಪಿ ವಂಶಿಕೃಷ್ಣ ಅವರ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಈ ತಂಡವು ಗುರುವಾರ ಪ್ರಾಥಮಿಕ ಮಾಹಿತಿ ಕಲೆ ಹಾಕಿದೆ.

'ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ರಾಜ್ಯ ಸರ್ಕಾರದಿಂದ ಸಿಐಡಿಗೆ ಅಧಿಕೃತ ಆದೇಶ ಬಂದಿಲ್ಲ. 14 ದಿನಗಳ ಒಳಗೆ ಪ್ರಾಥಮಿಕ ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಸೂಚನೆ ಬಂದಿದೆ. ಸಚಿವರು ಸಲ್ಲಿಸಿದ ದೂರಿನ ಪ್ರತಿ ಆಧರಿಸಿ, ಕೆಲವರನ್ನು ವಿಚಾರಣೆಗೆ ಒಳಪಡಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಕೆಎಎಸ್: ಮುಖ್ಯ ಪರೀಕ್ಷೆ ದಿನಾಂಕ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಮೇ 3, 5, 7 ಮತ್ತು 9ರಂದು ಮುಖ್ಯ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದೆ.

ಡಿ. 29ರಂದು ನಡೆದ ಪೂರ್ವಭಾವಿ ಮರು ಪರೀಕ್ಷೆಯಲ್ಲಿ 1:15ರ ಅನುಪಾತದಲ್ಲಿ ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಕೆಪಿಎಸ್‌ಸಿ ಈಗಾಗಲೇ ಬಿಡುಗಡೆ ಮಾಡಿದೆ. ಮುಖ್ಯಪರೀಕ್ಷೆಯನ್ನು ಇದೇ 28, 29 ಮತ್ತು ಏಪ್ರಿಲ್ 1, 2ರಂದು ನಡೆಸಲು ಕೆಪಿಎಸ್‌ಸಿ ನಿರ್ಧರಿಸಿತ್ತು.

ಪ್ರಶ್ನೆಪತ್ರಿಕೆಯಲ್ಲಿ ಭಾಷಾಂತರ ಲೋಪಗಳು ಕಂಡುಬಂದ ಕಾರಣ ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆಗೆ ಆಗ್ರಹಿಸಿ ಕೆಲ ಅಭ್ಯರ್ಥಿಗಳು ಕೆಎಟಿ ಮೆಟ್ಟಿಲೇರಿದ್ದರು. ಹೀಗಾಗಿ, ಪರೀಕ್ಷೆಯನ್ನು ಮುಂದೂಡಲಾಗಿತ್ತು. ಪ್ರಕರಣವನ್ನು ಕೆಎಟಿ ವಿಲೇವಾರಿ ಮಾಡಿದ ಕಾರಣ ಹೊಸ ದಿನಾಂಕವನ್ನು ಕೆಪಿಎಸ್‌ಸಿ ನಿಗದಿಪಡಿಸಿದೆ.

ಮುಖ್ಯ ಪರೀಕ್ಷೆಯ ವೇಳಾಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ (http://kpsc.kar.nic.in) ಪ್ರಕಟಿಸಲಾಗಿದೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ರಮಣದೀಪ್ ಚೌಧರಿ ತಿಳಿಸಿದ್ದಾರೆ.

ಆರ್‌ಎಸ್‌ಎಸ್‌ನ ಕಚೇರಿಗೆ ಮಾ. 30ಕ್ಕೆ ಮೋದಿ ಭೇಟಿ

ಮುಂಬೈ/ನಾಗ್ಪುರ: ಡಾ. ಕೇಶವ್ ಬಲಿರಾಮ್ ಹೆಡಗೇವಾರ್ ಹಾಗೂ ಮಾಧವ್ ಸದಾಶಿವರಾವ್ ಗೋಲ್ವಾಲ್ಕರ್ ಅವರಿಗೆ ಗೌರವ ನಮನ ಸಲ್ಲಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಾ. 30ರಂದು ನಾಗ್ಪುರದ ಆರ್‌ಎಸ್‌ಎಸ್ ಮುಖ್ಯ ಕಚೇರಿಗೆ ಭೇಟಿ ನೀಡಲಿದ್ದಾರೆ. ಇದೇ ವೇಳೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರನ್ನೂ ಭೇಟಿ ಮಾಡಲಿದ್ದಾರೆ

ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪ್ರಧಾನಿಯೊಬ್ಬರು ಆರ್‌ಎಸ್‌ಎಸ್ ಮುಖ್ಯ ಕಚೇರಿಗೆ ಭೇಟಿ ನೀಡಲಿದ್ದಾರೆ.

ನಾಮಮಾತ್ರದ ಶಾಲೆ: ಪರೀಕ್ಷೆಗಿಲ್ಲ ಅವಕಾಶ

ನವದೆಹಲಿ (ಪಿಟಿಐ): ನಾಮಮಾತ್ರದ ಶಾಲೆಗಳಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ 12ನೇ ತರಗತಿಯ ಪರೀಕ್ಷೆಯನ್ನು ಬರೆಯಲು ಅವಕಾಶ ಇಲ್ಲ ಎಂದು ಸಿಬಿಎಸ್‌ಇ ಅಧಿಕಾರಿಗಳು ತಿಳಿಸಿದ್ದಾರೆ. ಇಂತಹ ಶಾಲೆಗಳಿಗೆ ಪ್ರವೇಶ ಪಡೆದಿದ್ದರೆ ಅದಕ್ಕೆ ವಿದ್ಯಾರ್ಥಿಗಳು ಮತ್ತು ಪಾಲಕರೇ ಹೊಣೆ ಎಂದು ಮಂಡಳಿ ಸ್ಪಷ್ಟಪಡಿಸಿದೆ.

ನಾಮಮಾತ್ರದ ಶಾಲೆಗಳ ವಿರುದ್ಧ ಕ್ರಮ ಜರುಗಿಸುವುದರ ಭಾಗವಾಗಿ ಮಂಡಳಿಯು, ಅಂತಹ ಶಾಲೆಗಳ ವಿದ್ಯಾರ್ಥಿಗಳು ಮಂಡಳಿ ನಡೆಸುವ ಪರೀಕ್ಷೆಯಲ್ಲಿ ಹಾಜರಾಗುವುದನ್ನು ತಡೆಯಲು ಪರೀಕ್ಷಾ ಉಪನಿಯಮಗಳಿಗೆ ಬದಲಾವಣೆ ತರುವ ಚಿಂತನೆ ನಡೆಸಿದೆ. ಆಗ ಆ ವಿದ್ಯಾರ್ಥಿಗಳು ಎನ್‌ಐಒಎಸ್ ಪರೀಕ್ಷೆ ಬರೆಯಬೇಕಾಗುತ್ತದೆ.

'ವಿದ್ಯಾರ್ಥಿಗಳು ಶಾಲೆಗೆ ಬರುತ್ತಿಲ್ಲದಿದ್ದರೆ ಅಥವಾ ಮಂಡಳಿ ನಡೆಸುವ ದಿಢೀರ್ ತಪಾಸಣೆ ಸಂದರ್ಭದಲ್ಲಿ ಗೈರಾಗಿದ್ದರೆ, ಅಂತಹ ವಿದ್ಯಾರ್ಥಿಗಳಿಗೆ ಮಂಡಳಿಯ ಪರೀಕ್ಷೆ ಬರೆಯಲು ಅವಕಾಶ ಸಿಗದಿರಬಹುದು' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ನಿರ್ಧಾರವನ್ನು 2025–26ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲು ಶಿಫಾರಸು ಮಾಡಲಾಗಿದೆ. ಪರೀಕ್ಷೆಗೆ ಹಾಜರಾಗಬೇಕು ಎಂದಾದರೆ ಶೇ 75ರಷ್ಟು ಹಾಜರಾತಿ ಹೊಂದಿರುವುದು ಕಡ್ಡಾಯ. ಇಲ್ಲದಿದ್ದರೆ, ವಿದ್ಯಾರ್ಥಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ಸಿಗದಿರಬಹುದು ಎಂದಿದ್ದಾರೆ.

ನಾಮಮಾತ್ರದ ಶಾಲೆ ಅಂದರೆ

ಮಂಡಳಿ ಪರೀಕ್ಷೆ ಬರೆಯಲು ಅವಕಾಶ ನೀಡುವ ಏಕೈಕ ಉದ್ದೇಶದಿಂದ ಪ್ರವೇಶ ನೀಡಿ, ತರಗತಿಗೆ ಹಾಜರಾಗುವುದರಿಂದ ಸಂಪೂರ್ಣವಾಗಿ ವಿನಾಯಿತಿ ನೀಡುವ ಶಾಲೆಗಳೇ ನಾಮಮಾತ್ರದ ಶಾಲೆಗಳು.

ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ ಸಿದ್ಧತೆ ನಡೆಸುವ ಹಲವು ವಿದ್ಯಾರ್ಥಿಗಳು ಇಂತಹ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತಾರೆ. ಅವರು ಶಾಲೆಗೆ ಹಾಜರಾಗದೆ ತಮ್ಮ ಪೂರ್ತಿ ಸಮಯವನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವುದಕ್ಕೆ ವಿನಿಯೋಗಿಸುತ್ತಾರೆ. ಈ ಶಾಲೆಗಳು ಅವರಿಗೆ ನೇರವಾಗಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡುತ್ತವೆ.

ಪತ್ನಿ ಕೊಂದು ಟ್ರಾಲಿಬ್ಯಾಗ್‌ನಲ್ಲಿ ಮೃತದೇಹ ತುಂಬಿದ್ದ ಪತಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯನ್ನು ಕೊಲೆ ಮಾಡಿ ಮೃತದೇಹವನ್ನು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿಟ್ಟು ಪತಿ ಪರಾರಿ ಆಗಿರುವ ಘಟನೆ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡ ಕಮ್ಮನಹಳ್ಳಿಯಲ್ಲಿ ನಡೆದಿದೆ.

ಕೃತ್ಯ ನಡೆದಿರುವ ಬಗ್ಗೆ ಗುರುವಾರ ಸಂಜೆ ಗೊತ್ತಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮಹಾರಾಷ್ಟ್ರದ ಗೌರಿ ಅನಿಲ್ ಸಾಂಬೆಕರ್ (32) ಕೊಲೆಯಾದವರು. ಪರಾರಿಯಾಗಿದ್ದ ಪತಿ ರಾಕೇಶ್ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು.

ಗುರುವಾರ ರಾತ್ರಿ ಆರೋಪಿ ರಾಕೇಶ್‌ನನ್ನು ವಶಕ್ಕೆ ಪಡೆದಿರುವುದಾಗಿ ಪುಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ. ಅಲ್ಲಿಗೆ ನಮ್ಮ ತಂಡ ತೆರಳಿದೆ. ಆರೋಪಿಯನ್ನು ಕರೆತಂದು ವಿಚಾರಣೆಗೆ ಒಳಪಡಿಸಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ದೊಡ್ಡ ಕಮ್ಮನಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರ ಬಳಿಯ ಮನೆಯಲ್ಲಿ ಆರೋಪಿ ಕೃತ್ಯ ಎಸಗಿದ್ದಾನೆ. ಶ್ವಾನದಳ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪೊಲೀಸರಿಗೆ ಕರೆ ಮಾಡಿ ಮಾಹಿತಿ: 'ಆರೋಪಿಯು ಎರಡು ದಿನಗಳ ಹಿಂದೆ ಕೃತ್ಯ ಎಸಗಿ ಮುಂಬೈಗೆ ತೆರಳಿದ್ದ. ಗುರುವಾರ ಮಧ್ಯಾಹ್ನ ಮುಂಬೈ ಪೊಲೀಸರಿಗೆ ಕರೆ ಮಾಡಿ, ಬೆಂಗಳೂರಿನಲ್ಲಿ ಪತ್ನಿಯನ್ನು ಕೊಲೆ ಮಾಡಿ ಮೃತದೇಹವನ್ನು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿ ಇಟ್ಟಿರುವುದಾಗಿ ಹೇಳಿದ್ದ. ಮಹಾರಾಷ್ಟ್ರ ಪೊಲೀಸರು, ಹುಳಿಮಾವು ಪೊಲೀಸರನ್ನು ಸಂಪರ್ಕಿಸಿ ಮಾಹಿತಿ ನೀಡಿದ್ದರು. ಗೌರಿ ಅವರ ಪೋಷಕರಿಗೂ ವಿಷಯ ತಿಳಿಸಿದ್ದರು. ಮಾಹಿತಿ ತಿಳಿದ ಕೆಲವೇ ಕ್ಷಣಗಳಲ್ಲಿ ಸ್ಥಳೀಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮನೆಯ ಬಾಗಿಲು ಒಡೆದು ಪರಿಶೀಲಿಸಿದಾಗ ಮಹಿಳೆಯನ್ನು ಕೊಲೆ ಮಾಡಿ ಮೃತದೇಹವನ್ನು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿಟ್ಟಿರುವುದು ಪತ್ತೆಯಾಯಿತು' ಎಂದು ಮೂಲಗಳು ತಿಳಿಸಿವೆ.



ಆರೋಪಿ ರಾಕೇಶ್ ಹಾಗೂ ಕೊಲೆಯಾದ ಗೌರಿ

6 ತಿಂಗಳಲ್ಲಿ ಎರಡನೇ ಪ್ರಕರಣ

ನಗರದ ಮಲ್ಲೇಶ್ವರದ ಪೈಪ್‌ಲೈನ್‌ನ ಕೆ.ವಿ. ರಸ್ತೆಯ ಬಾಡಿಗೆ ಮನೆಯಲ್ಲಿ ನೆಲಸಿದ್ದ ಮಹಾಲಕ್ಷ್ಮಿ ಎಂಬುವವರನ್ನು ಸೆಪ್ಟೆಂಬರ್‌ನಲ್ಲಿ 50ಕ್ಕೂ ಹೆಚ್ಚು ತುಂಡುಗಳನ್ನಾಗಿ ಕತ್ತರಿಸಿ, ಫ್ರಿಜ್‌ನಲ್ಲಿ ಬಚ್ಚಿಟ್ಟಿದ್ದ ಪ್ರಕರಣದ ಮಾದರಿಯಲ್ಲೇ ಈ ಕೊಲೆಯೂ ನಡೆದಿದೆ. ಮಹಾಲಕ್ಷ್ಮಿ ಅವರನ್ನು ಕೊಲೆ ಮಾಡಿದ ಬಳಿಕ ಆರೋಪಿ ಹೊರ ರಾಜ್ಯಕ್ಕೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿದ್ದ.

'ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ದಂಪತಿ, ಒಂದೂವರೆ ತಿಂಗಳ ಹಿಂದಷ್ಟೇ ದೊಡ್ಡ ಕಮ್ಮನಹಳ್ಳಿಯಲ್ಲಿ ಮೂರನೇ ಮಹಡಿಯಲ್ಲಿ ಬಾಡಿಗೆ ಮನೆ ಪಡೆದುಕೊಂಡಿದ್ದರು. ಮನೆಯಿಂದಲೇ ಕೆಲಸ ಮಾಡಲು ಕಂಪನಿ ಅವಕಾಶ ಕಲ್ಪಿಸಿದ್ದರಿಂದ ದಂಪತಿ ಮನೆಯಲ್ಲೇ ಇರುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಕೊಲೆಗೆ ಕಾರಣ ಗೊತ್ತಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಶವಾಗಾರಕ್ಕೆ ಮೃತದೇಹ ರವಾನೆ: 'ಗೌರಿ ಅವರ ಪೋಷಕರಿಗೆ ಮಾಹಿತಿ ನೀಡಲಾಗಿದೆ. ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹ ಇಡಲಾಗಿದೆ. ಪೋಷಕರು ನಗರಕ್ಕೆ ಬಂದ ಬಳಿಕ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ಮಾಜಿ ಸಚಿವೆ ಲಲಿತಾ ನಾಯಕ್‌ಗೆ ಸಂತ ಸೇವಾಲಾಲ್ ಪ್ರಶಸ್ತಿ

40 ಮಂದಿ ಸಾಧಕರಿಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ವತಿಯಿಂದ ವಿವಿಧ ಕ್ಷೇತ್ರದ 40 ಸಾಧಕರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ 2024ನೇ ಸಾಲಿನ ಪ್ರಥಮ ಸಂತ ಸೇವಾಲಾಲ್ ಪ್ರಶಸ್ತಿಯನ್ನು ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಅವರಿಗೆ ಪ್ರದಾನ ಮಾಡಲಾಯಿತು. 2023–24ನೇ ವರ್ಷದ ಗೌರವ ಪ್ರಶಸ್ತಿ ಮತ್ತು 2022– 2024ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಲಲಿತಾ ನಾಯಕ್, 'ಕಲಿತ ವಿದ್ಯೆಯನ್ನು ಮೂಢನಂಬಿಕೆ ಬಿತ್ತಲು ಬಳಸಿದರೆ ಅದಕ್ಕೆ ಅರ್ಥವಿರುವುದಿಲ್ಲ. ದೇಶದ ವಿವಿಧೆಡೆ ನೆಲಸಿರುವ ಸಮುದಾಯದ ಜನರು ಪ್ರತಿಯೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಸಾಧನೆ ಮಾಡಬೇಕು' ಎಂದರು.

'ನನಗೆ ಪ್ರಶಸ್ತಿ ಕೊಟ್ಟಿರುವುದಕ್ಕೆ ಹಲವರಿಗೆ ಅಸಮಾಧಾನ ಇದೆ. ಸಮುದಾಯದ ಇತರೆ ಸಾಧಕರನ್ನು ಪರಿಗಣಿಸುವಂತೆ ಹೇಳಿದ್ದೆ. ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸುವ ಮೂಲಕ ಜನ್ಮದಿನ ಆಚರಿಸಿಕೊಳ್ಳಲು ನಿರ್ಧರಿಸಿದ್ದೇನೆ' ಎಂದು ತಿಳಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, ರಿಜಿಸ್ಟ್ರಾರ್ ಡಿ.ಎಂ. ರವಿಕುಮಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್. ಮುಕುಂದ ರಾಜ್, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ ಉಪಸ್ಥಿತರಿದ್ದರು.

ಸಂತ ಸೇವಾಲಾಲ್ ಪ್ರಶಸ್ತಿಯನ್ನು ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಅವರಿಗೆ ಪ್ರದಾನ ಮಾಡಲಾಯಿತು. ಕಾಂತ ನಾಯಕ್, ರವಿಕುಮಾರ್, ಪ್ರೊ. ಖಂಡೋಬಾ, ಚೆನ್ನಪ್ಪ ಕಟ್ಟಿ, ಎಲ್.ಎನ್. ಮುಕುಂದ್ ರಾಜ್, ಎ.ಆರ್. ಗೋವಿಂದಸ್ವಾಮಿ, ಪುಟ್ಟಣ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

Rajya Vokkaligara Sangha
Vokkaligara Sangha Dental College & Hospital
(Affiliated to RGUHS & Recognised by DCI)
K.R.Road, V.V. Puram Bangalore - 560 004

RVS/Admn/2110/24-25 Date:27.03.2025

Applications are invited from eligible candidates as per RGUHS /DCI norms for the post of Lecturer/Assistant Professor.

Required Post	Specialty	No.of post
Lecturer/ Assistant Professor	Conservative Dentistry	02
	Periodontics	01
	Orthodontics	01
	Dental Hygienist	01

Candidates Possessing requisite qualification may submit their application to The Principal, VSDCH (or) via Dental College mail vsdchbangalore@gmail.com on or before 05-04-2025.
Interview Date: 12-04-2025 at 11:00 am, Saturday.
Place:2nd floor, Sangha Meeting Hall, Rajya Vokkaligara Sangha, K.R.Road, V.V.Puram, Bangalore-04.

Sd/- President RVS | Sd/- Vice Presidents RVS | Sd/- General Secretary RVS | Sd/- Joint Secretary RVS | Sd/- Treasurer RVS | Sd/- Chairman VSDCH | Sd/- Principal VSDCH

PERSONAL

Change of Name

KUSHI HARISH REDDY #486/B, 15th Main, 15th B Cross, HSR Sector-4, Bengaluru-102, Have changed my name to KUSHI REDDY vide affidavit dated-27/03/2025

CHANGE OF NAME
I, **Yousuf Khan Ghouse,** residing at # 8, Berlie Street, Langford Town, Shanthinagar, Bengaluru-560025, have changed my name to **YOUSUF KHAN** vide affidavit dated 26-03-2025, sworn before Notary A Idinabba, Bengaluru. Henceforth I Shall be called **YOUSUF KHAN** only

CHANGE OF NAME
I, **Praveena Suresh Chathoth,** residing at No.99, Ferns Residency, K. Narayanapura, Kothanur, Bengaluru - 560 077, have changed my name to **PRAVEENA SURESH** vide affidavit dated 27-03-2025, sworn before Notary S.I. Balaguru, Bengaluru. Henceforth I shall be called **PRAVEENA SURESH** only

CHANGE OF NAME
I, **GAGAN RAJ R** & **GAGAN RAJU** S/o Raju Boregowda, residing at #39, Sajju Veedu, 3rd Main, Malagala, Nagarabhavi 2nd Stage, Bengaluru-91, declare that above names pertain to me only. Vide affidavit dt: 26.03.2025 before Notary Devaraja E, Bengaluru. Henceforth I shall be called as **GAGAN RAJ R** only

PROPERTY CORNER



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900

CHANGE OF NAME
I, **GEETA,** D/o. Chandrashekhar Goled, R/a Flat 412, Sumukha Vridhi, Central Excise layout, Tejaswini Nagar, Doddakamannahalli Main Road, Bengaluru, Karnataka, India-560076, and currently residing in London UK, declare that **GEETA, GEETA C, GEETA CHANDRASHEKHAR,** all the above names refer to one and the same person, i.e., myself only, and have changed my name to **GEETA C GOLED,** vide affidavit dated 10.04.2018 before the Notary, Devika Kumari, Bengaluru.

BUSINESS

Business to Business

Finance

AVAILABLE FOR All Types of Lands Karnataka & other States Wanted Investors For Properties 9739627282

RENTAL PROPERTIES

Accommodation Available

Commercial

AVAILABLE FOR-RENT on 1st, 2nd and 3rd floor 3300 sft each floor on 100 feet ring road Banashankari 3rd stage. Contact: 9886080699, 7795058346

REAL ESTATE SELLING

Sites

Srirampura

SALE 30X100, Plot, 1st cross, North facing, 2 mins metro, single owner, 17000/sqft. Ph. 9739732433

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

PUBLIC NOTICE

PUBLIC NOTICE
Public are hereby informed that my client intends to purchase from 1) Mr. Aravind Kumar B.S. 2) Mr. Ravikumar S. 3) Mrs. Nalina. 4) Mrs. Haristha P 5) Smt. Shashikala 6) Smt. Sahana B.S. 7) Smt. Nirmala K 8) Smt. Meena K 9) Master. Dyuthin K 10) Smt. Srilakshmi H.K. 11) Mr. Amith Sagar Naidu 12) Miss. Thanmyee 13) Mr. Shreerangaiah 14) Smt. Sunanda R. 15) Smt. Kavyashree R. 16) Ms. Nandita R 17) Miss. Anindita Aravind 18) Miss. Yashmita Aravind and others residential building built on and including the site on which it is built bearing old CITB No. 40, new Municipal No. 2, composite Municipal No. 40/2, BBMP PID No. 62-29-2, new BBMP E-Asthi No. 2814845559, 1st B cross, Lakkasandra, Bangalore 560 030, coming with the limits of ward No. 145/ Hombegowda Nagara of BBMP If anybody has got any claim on the schedule property, they are required to lodge their claim in writing with supporting documents with the undersigned within One Week from the date of publication of this notice, failing which my clients will proceed with the purchase of the schedule property from them on the premise that there are no claims on the said property and claims if any, made thereafter will not be entertained.

SCHEDULE PROPERTY
All that piece and parcel of immovable property being a residential building having a ground floor measuring 949 square feet and first floor measuring 249.84 Square feet built on and including the site on which it is built bearing old CITB No. 40, new Municipal No. 2, composite Municipal No. 40/2, BBMP PID No. 62 – 29 – 2, new BBMP E- Asthi No.2814845559 1st B cross, Lakkasandra , Bangalore 560 030 measuring East to West 55 feet and North to South 45 feet and bounded on the **East by:** Road, **West by:** Property No. 35, **North by:** property No. 41 and **South by :** property No. 39.

B.N. JAYADEVA, Advocate,
Unit No.203, II Floor,
1st Floor, Seshadripuram,
Bangalore-560 0020.

DH DECCAN HERALD Classifieds
More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA
+ PRAJAVANI BENGALURU CITY
ON WEDNESDAY + SUNDAY
@ 2481/-* FOR 15 WORDS
www.dhclassifieds.com
BOOK NOW
For more details contact:
+91 9901641752 | +91 9845114560 | +91 9886213331
*Conditions apply

ಶುಕ್ರವಾರ, ಮಾರ್ಚ್ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 87 | ಪುಟ 18
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತವರು ಸೇರಿದ ಪ್ರಾಚೀನ ಕಲಾಕೃತಿ

642 ಕಳೆದ 11 ವರ್ಷಗಳಲ್ಲಿ ವಿವಿಧ ದೇಶಗಳಿಂದ ಭಾರತಕ್ಕೆ ಮರಳಿರುವ ಕಲಾಕೃತಿಗಳು

13 1955ರಿಂದ 2014ರವರೆಗೆ ಸ್ವದೇಶಕ್ಕೆ ಮರಳಿದ್ದ ಕಲಾಕೃತಿಗಳ ಸಂಖ್ಯೆ

ಯಾವ ದೇಶ? ಸಿಂಗಪುರ, ಆಸ್ಟ್ರೇಲಿಯಾ, ಜರ್ಮನಿ, ಬ್ರಿಟನ್ ಮತ್ತು ನೆದರ್ಲೆಂಡ್ಸ್

(ರಾಜ್ಯಸಭೆಗೆ ಕೇಂದ್ರ ಸರ್ಕಾರದ ಮಾಹಿತಿ)

ಆಳ-ಅಗಲ
ಜನಸಾಮಾನ್ಯನಿಗೆ ಬೆಲೆಯೇರಿಕೆ ಬಿಸಿ

ಸ್ಪೀಕರ್‌ಗೆ 'ಇಂಡಿಯಾ' ಕೂಟದ ದೂರು 9

'ಬಿಜೆಪಿ ಭಿನ್ನಮತೀಯರ ಸಭೆ ಇಂದು' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,606	23,591	₹93,060 (ಬೆಂಗಳೂರು)	₹1.05 ಲಕ್ಷ (ಬೆಂಗಳೂರು)	85.74

ಹಾಲು 'ಬಿಸಿ': ವಿದ್ಯುತ್ ಶಾಕ್

ಏ. 1ರಿಂದ ಅನ್ವಯವಾಗುವಂತೆ ಹಾಲು ಹಾಗೂ ವಿದ್ಯುತ್ ದರ ಏರಿಕೆಯಾಗಲಿದೆ. ಪ್ರತಿ ಯೂನಿಟ್‌ಗೆ ಇಷ್ಟು ಪೈಸೆಯಂತೆ ಏರಿಕೆ ಮಾಡಲಾಗುತ್ತಿದ್ದ ಪದ್ಧತಿಯ ಬದಲು, ಗ್ರಾಹಕರ ಕೆ.ವಿ ಸಾಮರ್ಥ್ಯ ಆಧರಿಸಿ ದರ ಹೆಚ್ಚಳವಾಗಲಿದೆ.

ಹಾಲು, ಮೊಸರು ಲೀಟರ್‌ಗೆ ₹4 ಹೆಚ್ಚಳ

ಬೆಂಗಳೂರು: ನಂದಿನಿ ಹಾಲು ಮತ್ತು ಮೊಸರಿನ ಮಾರಾಟ ದರ ಏಪ್ರಿಲ್ 1ರಿಂದ ಪ್ರತಿ ಲೀಟರ್‌ಗೆ ₹4 ಹೆಚ್ಚಳ ಆಗಲಿದೆ.

ದರ ಪರಿಷ್ಕರಿಸುವಂತೆ ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಸಲ್ಲಿಸಿದ್ದ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಗುರುವಾರ ಒಪ್ಪಿಗೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, 'ಹೆಚ್ಚಳ ಮಾಡಿದ ಸಂಪೂರ್ಣ ಮೊತ್ತವನ್ನು ಹಾಲು ಉತ್ಪಾದಕರಿಗೆ ನೇರವಾಗಿ ನೀಡಲಾಗುವುದು' ಎಂದರು.

ಸದ್ಯ ರೈತರಿಗೆ ಪ್ರತಿ ಲೀಟರ್ ಹಾಲು ಶೇಖರಣೆಗೆ ಕೆಎಂಎಫ್ ₹31.68 ದರ ನೀಡುತ್ತಿದೆ. ಹಾಲಿನ ಮಾರಾಟ ದರ ಪರಿಷ್ಕರಣೆಯ ನಂತರ ₹35.68 ಸಿಗಲಿದೆ. '2024ರ ಜೂನ್ 26ರಂದು ಪ್ರತಿ ಲೀಟರ್ ಹಾಲಿಗೆ ಹೆಚ್ಚುವರಿಯಾಗಿ 50 ಮಿಲಿಯಷ್ಟು ನೀಡಿ ದರವನ್ನು ₹2ರಂತೆ (₹42ರಿಂದ ₹44) ಹೆಚ್ಚಿಸಲಾಗಿತ್ತು. ಈ ಹೆಚ್ಚಳವನ್ನು ಹಿಂಪಡೆದು, ಮೊದಲಿದ್ದ ದರಕ್ಕೆ (₹42) ₹4 ಹೆಚ್ಚಿಸಲಾಗುವುದು' ಎಂದು ವೆಂಕಟೇಶ್ ತಿಳಿಸಿದರು.

'ಹಾಲು ಉತ್ಪಾದನಾ ವೆಚ್ಚ ಹೆಚ್ಚುತ್ತಿರುವ ಕಾರಣ ಮಾರಾಟ ದರ ಹೆಚ್ಚಿಸುವಂತೆ ರೈತರು ಬಹಳ ದಿನಗಳಿಂದ ಒತ್ತಡ ಹಾಕುತ್ತಿದ್ದರು. ಹಾಲು ಉತ್ಪಾದನೆ ಮತ್ತು ಸಂಸ್ಕರಣಾ ವೆಚ್ಚ ಪರಿಗಣಿಸಿ, ಹೈನೋದ್ಯಮಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ದರ ಪರಿಷ್ಕರಿಸುವಂತೆ ಹಾಲು ಒಕ್ಕೂಟಗಳೂ ಪ್ರಸ್ತಾವ ಸಲ್ಲಿಸಿದ್ದವು' ಎಂದರು.

8ನೇ ಪುಟ ನೋಡಿ

ವಿದ್ಯುತ್ ದರ: ಭಾರಿ ಭಾರ

ಗೃಹ ಬಳಕೆ ವಿದ್ಯುತ್ ದರವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಒಪ್ಪಿಗೆ ನೀಡಿದ್ದು, ಇದೇ ಏಪ್ರಿಲ್ 1ರಿಂದ ಪರಿಷ್ಕತ ದರ ಜಾರಿಗೆ ಬರಲಿದೆ.

'ಗೃಹ ಬಳಕೆ ವಿದ್ಯುತ್‌ನ ಪ್ರತಿ ಯೂನಿಟ್ ದರವನ್ನು ₹5.90ರಿಂದ ₹5.80ಕ್ಕೆ (10 ಪೈಸೆಗಳಷ್ಟು) ಇಳಿಕೆ ಮಾಡುತ್ತಿದ್ದೇವೆ' ಎಂದು ಕೆಇಆರ್‌ಸಿ ಹೇಳಿದೆ. ಒಂದೆಡೆ, ಗ್ರಾಹಕರಿಗೆ ಮಂಜೂರಾದ ಕೆ.ವಿ ಸಾಮರ್ಥ್ಯ ಆಧರಿಸಿ ನಿಗದಿತ ಶುಲ್ಕವನ್ನು ವಿಪರೀತ ಹೆಚ್ಚಿಸಿದ್ದು (ಪ್ರತಿ ಕೆ.ವಿಗೆ ₹25 ಏರಿಕೆ), ಇನ್ನೊಂದೆಡೆ ಪಿಂಚಣಿ ಮತ್ತು ಗ್ರ್ಯಾಚ್ಯುಟಿ ಹಣಕ್ಕೆ ಸಂಬಂಧಿಸಿದಂತೆ ಪ್ರತಿ ಯುನಿಟ್‌ಗೆ 36 ಪೈಸೆ ಶುಲ್ಕ ವಿಧಿಸಿದೆ. ಪರಿಣಾಮವಾಗಿ ವಿದ್ಯುತ್ ಬಳಕೆಯ ಶುಲ್ಕ ವಿಪರೀತ ಏರಿಕೆಯಾಗಲಿದೆ.

ಸದ್ಯ ಗೃಹಬಳಕೆ (ಎಲ್‌ಟಿ-1) ವಿದ್ಯುತ್ ಸಂಪರ್ಕದಲ್ಲಿ ಪ್ರತಿ ಕೆ.ವಿಗೆ ₹120 ನಿಗದಿತ ಶುಲ್ಕ ವಿಧಿಸಲಾಗುತ್ತಿತ್ತು. ಇದನ್ನು ₹145ಕ್ಕೆ ಹೆಚ್ಚಿಸಲಾಗಿದೆ. **ಉದಾಹರಣೆಗೆ:** ಮೂರು ಕೆ.ವಿಯ ಮಂಜೂರಾದ ಸಂಪರ್ಕಕ್ಕೆ ಈಗ ₹360 ನಿಗದಿತ ಶುಲ್ಕ ಪಾವತಿಸಬೇಕಿದೆ. ಪರಿಷ್ಕೃತ ದರ ಜಾರಿಯ ನಂತರ ₹435 ಪಾವತಿಸಬೇಕಾಗುತ್ತದೆ. ಪ್ರತಿ ಯೂನಿಟ್ ದರವನ್ನು 10 ಪೈಸೆ ಕಡಿಮೆ ಮಾಡಿರುವುದರಿಂದ 100 ಯೂನಿಟ್‌ನ ದರ ₹590ರಿಂದ ₹580ಕ್ಕೆ ಇಳಿಕೆಯಾಗುತ್ತದೆ. ಆದರೆ ಪ್ರತಿ ಯೂನಿಟ್‌ಗೆ 36 ಪೈಸೆಯ ಪಿಂಚಣಿ ಮತ್ತು ಗ್ರ್ಯಾಚ್ಯುಟಿ ವೆಚ್ಚ ಸೇರಿ ₹36ರಷ್ಟು ಏರಿಕೆಯಾಗುತ್ತದೆ. ಪರಿಣಾಮವಾಗಿ 100 ಯೂನಿಟ್‌ಗೆ ₹616 ಪಾವತಿಸಬೇಕಾಗುತ್ತದೆ.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಒಳಮೀಸಲಿಗೆ ಹೊಸ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿಗಾಗಿ ಪರಿಶಿಷ್ಟ ಜಾತಿಯಲ್ಲಿನ ಉಪ ಜಾತಿಗಳ ನಿಖರ ದತ್ತಾಂಶ ಸಂಗ್ರಹಿಸಲು ಹೊಸದಾಗಿ ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ದತ್ತಾಂಶ ಸಂಗ್ರಹ

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿ ಮಾಡಬೇಕು ಎಂದು 30 ವರ್ಷಗಳಿಂದ ಹೋರಾಟ ನಡೆಯುತ್ತಲೇ ಇದೆ. ಇತ್ತೀಚಿನ ದಿನಗಳಲ್ಲಿ ಈ ಹೋರಾಟ ಮತ್ತಷ್ಟು ತೀವ್ರಗೊಂಡಿತ್ತು.

10ನೇ ಪುಟ ನೋಡಿ

ಆಯೋಗದ ಶಿಫಾರಸುಗಳೇನು?

- ಪರಿಶಿಷ್ಟ ಜಾತಿಯಲ್ಲಿರುವ ಉಪಜಾತಿಗಳ ವೈಜ್ಞಾನಿಕ ವರ್ಗೀಕರಣ ಮಾಡಲು ಹೊಸ ಸಮೀಕ್ಷೆ ನಡೆಸಿ ದತ್ತಾಂಶ ಸಂಗ್ರಹಿಸಬೇಕು
- ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧನಗಳನ್ನು ಬಳಸಿ 30 ರಿಂದ 40 ದಿವಸಗಳೊಳಗೆ ಹೊಸ ಸಮೀಕ್ಷೆ ನಡೆಸಬಹುದು ಎಂಬುದು ತಜ್ಞರ ಅಭಿಪ್ರಾಯ
- ಹೊಸ ಸಮೀಕ್ಷೆ ನಡೆಸಲು ಅಗತ್ಯವಿರುವ ಪ್ರಶ್ನಾವಳಿಯನ್ನು ಸಿದ್ಧಪಡಿಸಬೇಕು, ಯಾವ ಸಂಸ್ಥೆಯಿಂದ ಸಮೀಕ್ಷೆ ನಡೆಸಬೇಕು, ಸಮೀಕ್ಷೆ ಮಾಡುವ ಸಿಬ್ಬಂದಿಗೆ ತರಬೇತಿ, ಅಗತ್ಯವಿರುವ ಸಂಪನ್ಮೂಲಗಳ ಕ್ರೋಢೀಕರಣಗಳ ಉಸ್ತುವಾರಿ ನೋಡಿಕೊಳ್ಳಲು ಉನ್ನತಮಟ್ಟದ ಸಮಿತಿಯೊಂದನ್ನು ರಚಿಸಬೇಕು
- ಹೊಸ ಸಮೀಕ್ಷೆಯಿಂದ ಸಂಗ್ರಹಿಸಿದ ದತ್ತಾಂಶದ ಆಧಾರದ ಮೇಲೆ ಈ ವರದಿಯಲ್ಲಿ ತಿಳಿಸಿರುವ ಮಾನದಂಡಗಳಂತೆ ಪರಿಶಿಷ್ಟ ಜಾತಿಯ ಉಪಜಾತಿಗಳ ವರ್ಗೀಕರಣ ಮಾಡಿ ಲಭ್ಯವಿರುವ ಮೀಸಲಾತಿ ಪ್ರಮಾಣವನ್ನು ಆದ್ಯತೆ ಮೇಲೆ ಹಂಚಿಕೆ ಮಾಡಬೇಕು

"ಹೊಸ ವರುಷಕೆ
ಹೊಸ ಹರುಷವು
ಹೊಸತು ಹೊಸತು ತರುತಿದೆ"
This Festive Season,
Try The New Exotic
Macadamia Nut @ Bolas.
MRP ₹285 ಮೌಲ್ಯದ
50ಗ್ರಾಂ ಪ್ಯಾಕ್
FREE*
ರೂ.400
ಅಥವಾ ಹೆಚ್ಚಿನ
ಖರೀದಿಯೊಂದಿಗೆ
ಮಾರ್ಚ್ 28 ರಿಂದ 30ರ ವರೆಗೆ
Bolas
Bolas®
AUSTRALIAN
MACADAMIA
DRY ROASTED
& SALTED NUTS
— THE EXOTIC COLLECTION —
*IMAGES ARE FOR ILLUSTRATION PURPOSE ONLY
UP TO
40%
OFF!*
FACTORY
PRICE
ADVANTAGE
*ಸ್ಟೋರ್ ಉತ್ಪನ್ನಗಳ ಮೇಲೆ
*ಷರತ್ತುಗಳು ಮತ್ತು ನಿಯಮಗಳು ಅನ್ವಯವಾಗುತ್ತವೆ. | 1. ಮೊದಲ 100 ಗ್ರಾಹಕರಿಗೆ ಮಾತ್ರ ಆಫರ್ ಲಭ್ಯ. | 2. ಆಫರ್ ಸ್ಟಾಕ್ ಇರುವವರೆಗೆ ಮಾತ್ರ ಮಾನ್ಯವಾಗಿರುತ್ತದೆ.
3. ಪ್ರತಿ ಗ್ರಾಹಕ ಒಮ್ಮೆಮಾತ್ರ ಆಫರ್ ಪಡೆಯಬಹುದು. | 4. ದುರುಪಯೋಗದ ಸಂದರ್ಭದಲ್ಲಿ ಕೊಡುಗೆ ನಿರಾಕರಿಸುವ ಹಕ್ಕನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ.
DRY FRUITS | NUTS | SWEETS & MORE
FACTORY PRICE ADVANTAGE
ಬೋಳಾಸ್ Bolas
ಚೆನ್ನಪಟ್ಟಣ-9483548777 | ಕನಕಪುರ-9019963559 | ತುಮಕೂರು-9364009426 | ಬನಶಂಕರಿ-9364016910 | ಬಾಣಸವಾಡಿ-9364016909 | ಬೆಂಗಳೂರು ಮೀನಾಕ್ಷಿಮಾಲ್-9606019779 | ಬೆಂಗಳೂರು ಟಿಸಿ ಪಾಳ್ಯ-9364016907 | ಬಸವೇಶ್ವರ ನಗರ-9364016904 | ಗಾಂಧಿ ಬಝಾರ್- 9364016908 | ಹರಳೂರು-6364863287 | ಎಚ್.ಎಸ್.ಆರ್-6364863283 | ಜಯನಗರ-6364863281 | ನೆಲಮಂಗಲ-9364016903 | ನ್ಯೂ ತಿಪ್ಪಸಂದ್ರ ಮೈನ್ ರೋಡ್-6364863285 | ಆಫ್ ಸರ್ಜಾಪುರ ರೋಡ್-6364863286 | ಆರ್ ಟಿ ನಗರ-6364863284 | ಸಂಪಿಗೆ ರೋಡ್ ಮಲ್ಲೇಶ್ವರಂ-9364016905 | ಉತ್ತರಹಳ್ಳಿ-9364016911 | ವಿದ್ಯಾರಣ್ಯಪುರ-9364016902 | ವಿಜಯನಗರ ಕ್ವಾರ್ಡ್ ರೋಡ್-9364016906 | ವಿಲ್ಸನ್ ಗಾರ್ಡನ್6364863282 | ಮತ್ತಿಕೆರೆ-9364016901 | ಕೆಂಗೇರಿ-9364016916 | ಬಿಟಿಎಂ ಲೇಔಟ್-9364016917
/bolas.outlet
www.bolas.co.in

Hero
ಈ ಬಾರಿ ಯುಗಾದಿಯಲ್ಲಿ
ಹೊಸ ಪ್ರಯಾಣಗಳಲ್ಲಿ ಸಂತೋಷದ ಸುಗ್ಗಿ ಪಡೆಯಿರಿ
ನಿಮ್ಮ ಹೀರೊ ಇಂದೇ ಮನೆಗೊಯ್ಯಿರಿ
Passion+
₹79,311*
HF 100
₹ 49,999*
*ಎಕ್ಸ್-ಶೋರೂಮ್ ಆರಂಭಿಕ ಬೆಲೆ
ವಿಶೇಷ ಬೆಲೆ ಮಾರ್ಚ್ 31ರ ವರೆಗೆ ಮಾನ್ಯವಾಗಿರುತ್ತದೆ!
ನಗದು ಡಿಸ್ಕೌಂಟ್ ₹3000**
ರೈತರಿಗಾಗಿ ಆಫರ್ ₹2000$
ಆಧಾರ್ ಮೇಲೆ ಆಧಾರಿತ ಸಾಲ ಮತ್ತು ನಗದು EMI^
₹60^ ಪ್ರತಿ ದಿನದ EMI
ಕ್ರೆಡಿಟ್ ಕಾರ್ಡ್ ಮೇಲೆ 5%## ಕ್ಯಾಶ್ ಬ್ಯಾಕ್
GOLD COIN
Hero GoodLife
ಪ್ರತಿ ದಿನ 1 ಚಿನ್ನದ ನಾಣ್ಯ ಗೆಲ್ಲಬಹುದಾದ ಅವಕಾಶವಿದೆ.
ಆಫರ್ ಮಾರ್ಚ್ 31ರ ವರೆಗೆ ಮಾನ್ಯ$$
INDIA'S FIRST 5 YEAR WARRANTY* *Conditions apply
TOLL FREE NO. 1800 266 0018
Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj - Phase -II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or call our toll-free no.: 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^Finance offer is at the sole discretion of the financier, subject to its respective T&Cs. Available at select dealerships. For more details, please visit your nearest authorized Hero outlet. **Cash discount upto ₹3,000 is only available on Passion+. ##The 5% cashback upto 5000- is applicable on minimum transaction of 40,000/- T&C apply. $Offer valid for Karnataka based farmers with Pahani/RTC or panchayat/tahsildar authorisation. Applicable on 100 cc motorcycles (excluding HF 100) with insurance and RTO life tax paid by 31st March 2025. $$ Offer valid only on purchase of new Hero two wheeler and Hero GoodLife enrolment on the corresponding purchase during the campaign period - 20th to 31st March 2025 in Karnataka State only. Ex - showroom price of HF 100 drum kick, Passion + Drum brake variant in Bengaluru.
AUTHORISED DEALERS: BENGALURU - HOSUR ROAD: RT KRISHNA HERO - 9289923177. LALBAGH ROAD: PRAKASH HERO - 9289922117. BYATARAYANAPURA: BIMAL HERO - 9289922863. PEENYA: SAI HERO - 9289922830. HOSUR ROAD: RT KRISHNA HERO - 9289923177. BANASHANKARI: SAI HERO - 9289922476. BANASWADI: BHAGATH HERO - 9289922738. MAGADI ROAD: POORNA HERO - 9289923212. MARATHALLI: VAAYURATHA HERO - 9289923811. RAJAJI NAGAR: MAX HERO - 9289923023. KOLAR: SAI BALAJI HERO - 9821745024. CHIKKABALLAPUR: MANJUNATH HERO - 9821751332. TUMKUR: SAI HERO - 9289922986. B.H. ROAD - SAI HERO - 7022752841. KAMAKSHIPALYA: POORNA MOTORS - 9606922534. JP NAGAR: SAI HERO - 9900236280. KANAKPURA ROAD: SAI HERO - 8904677394. HOSKOTE: BHAGATH HERO - 8884600051. K R PURAM: BHAGATH HERO - 7829488706. JIGANI: RT KRISHNA HERO - 8762860999. RT NAGAR: BIMAL HERO - 9535327710. TIPTUR: SAI HERO - 9164840456. KUNIGAL: SAI HERO - 7022752858. DODDABALLAPURA: BIMAL HERO - 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD - 9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA - 9449619920. SIRA - 9448417393. CHANDAPURA - 9481329064. VIDYARANYAPURA - 9606934533. MAGADI - 9482090890. Also Available at: DUNNASANDRA - 8310166369. HSR LAYOUT - 7428893265. MATHIKERE - 9035027951. DOMLUR - 7353919910- J.P. NAGAR - 9035024274. RT NAGAR - 9535327710. ATTIBELE - 8050609104. B NARAYANAPURA - 9945472149. VARTHUR - 9900877227. PAPAREDDYPALYA - 9916678309. ANEKAL - 9739519252. KONANKUNTE - 9886122251. SARJAPUR MAIN ROAD - 8762860999. BIDADI - 9844767719. RAMANAGARA - 9663399909. JIGANI - 9986498884. CHIKKANAYAKANAHALLI - 9880807399. TURUVEKERE - 9448403205. KORATAGERE - 9731713711. PERESANDRA - 9901502049. For Bulk deals/Corporate purchase - "bangalore@heromotocorp.com" & "kiran.kumart@heromotocorp.com" For Buy/Sell/Exchange Old any Vehicle contact VV PURAM, Bengaluru Olety Sai Hero Sure - 98450 74491
L&K | SAATCHI & SAATCHI

ಸಂಭ್ರಮಾಚರಣೆ
ದ್ವಿಗುಣಗೊಳಿಸಿ
HAPPY Ugadi
OFFER VALID TILL 31ST MARCH
Joyalukkas
World's favourite jeweller
ಚಿನ್ನ ಖರೀದಿಸಿ
ಮತ್ತು ಪಡೆಯಿರಿ
ಸಮತೂಕದ ಬೆಳ್ಳಿ
25%
ಕಡಿತ ವಜ್ರದ
ಮೌಲ್ಯಕ್ಕೆ
ಹಳೆಯ ಚಿನ್ನ ವಿನಿಮಯ ಮಾಡಿ,
916 HUID ಹಾಲ್‌ಮಾರ್ಕ್ ಆಭರಣ
ಪಡೆಯಿರಿ
KNOW MORE
*T&C Apply. Not applicable for Gold coins & bars.
BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY • KAMMANAHALLI • FORUM SOUTH BENGALURU,
PRESTIGE FALCON CITY • HSR LAYOUT | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANAGERE • KALABURAGI
INDIA • USA • UK • UAE • KSA • QATAR • BAHRAIN • KUWAIT • OMAN • SINGAPORE • MALAYSIA

ಸರ್ಕಾರಿ ಜಮೀನು ಒತ್ತುವರಿ ಆರೋಪ • ಬಲವಂತದ ಕ್ರಮಕ್ಕೆ ಮುಂದಾಗಬಾರದು: ನ್ಯಾಯಾಲಯ

ಕುಮಾರಸ್ವಾಮಿ ಅರ್ಜಿ: ಆದೇಶ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರ ಜಿಲ್ಲೆಯ ಬಿಡದಿ ಹೋಬಳಿಯ ಕೇತಗಾನಹಳ್ಳಿ ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಮನಗರ ತಹಶೀಲ್ದಾರ್ ಅವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ನೀಡಿರುವ ನೋಟಿಸ್ ಅನುಸಾರ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂಬ ಈ ಹಿಂದಿನ ಆದೇಶವನ್ನು ಹೈಕೋರ್ಟ್ ವಿಸ್ತರಿಸಿ ಆದೇಶಿಸಿದೆ.

ಈ ಸಂಬಂಧ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು, 'ಕರ್ನಾಟಕ ಭೂ ಕಂದಾಯ ಕಾಯ್ದೆ–1964ಕ್ಕೆ ತಿದ್ದುಪಡಿ ತರುವ ಮೂಲಕ ಸರ್ಕಾರಿ ಜಮೀನು ಒತ್ತುವರಿ ಕುರಿತಂತೆ ಒತ್ತುವರಿದಾರರಿಂದ ವಿವರಣೆ ಪಡೆದು ಮುಂದಿನ ಕ್ರಮ ಜರುಗಿಸಲು ತಹಶೀಲ್ದಾರ್‌ಗೆ ಅಧಿಕಾರ ಕಲ್ಪಿಸಲಾಗಿದೆ. ಅದರಂತೆಯೇ ಈ ಪ್ರಕರಣದಲ್ಲೂ ತಹಶೀಲ್ದಾರ್ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕುಮಾರಸ್ವಾಮಿ ಅವರಿಗೆ ನೋಟಿಸ್ ನೀಡಿದ್ದಾರೆ. ಹಾಗಾಗಿ, ಈ ಅರ್ಜಿ ವಜಾಗೊಳಿಸಬೇಕು' ಎಂದು ಮನವಿ ಮಾಡಿದರು.

ಎಚ್.ಡಿ. ಕುಮಾರಸ್ವಾಮಿ

ಇದಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, 'ತಹಶೀಲ್ದಾರ್ ನೋಟಿಸ್ ನೀಡುವುದಕ್ಕೆ ಅವಕಾಶ ಕಲ್ಪಿಸಿರುವ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ತರಲಾಗಿರುವ ತಿದ್ದುಪಡಿಯ ಸಿಂಧುತ್ವವನ್ನೇ ಪ್ರಶ್ನಿಸಲಾಗುವುದು. ಈ ಸಂಬಂಧ ಅರ್ಜಿಯನ್ನು ತಿದ್ದುಪಡಿ ಮಾಡುತ್ತೇವೆ. ಅದಕ್ಕಾಗಿ ಸಮಯಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂಬ ಮಧ್ಯಂತರ ಆದೇಶವನ್ನು ವಿಸ್ತರಿಸಿ ವಿಚಾರಣೆಯನ್ನು ಏಪ್ರಿಲ್ 1ಕ್ಕೆ ಮುಂದೂಡಿತು.

ನೋಟಿಸ್ ಏನು?: 'ಕೇತಗಾನಹಳ್ಳಿ ಸರ್ವೆ ನಂಬರ್ 7 ಮತ್ತು 8ರಲ್ಲಿ ಪೋಡಿ ದುರಸ್ತಿಯಾಗದ ಜಮೀನಿನಲ್ಲಿ ನೀವು ಅನಧಿಕೃತವಾಗಿ ಒತ್ತುವರಿ ಮಾಡಿ ಸ್ವಾಧೀನಾನುಭವ ಹೊಂದಿದ್ದೀರಿ. ಹಾಗಾಗಿ, ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 94ರ ಅಡಿಯಲ್ಲಿ ಏಕೆ ನಿಮ್ಮಿಂದ ದಂಡ ವಸೂಲಿ ಮಾಡಬಾರದು ಎಂಬುದಕ್ಕೆ ಸಮಜಾಯಿಷಿ ನೀಡಿ. ಈ ಕುರಿತಂತೆ ನಿಮ್ಮ ಬಳಿ ಇರುವ ದಾಖಲೆಗಳನ್ನು ಸಲ್ಲಿಸಿ. ಇಲ್ಲವಾದಲ್ಲಿ ಕಾನೂನು ರೀತ್ಯಾ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ರಾಮನಗರ ತಾಲ್ಲೂಕು ತಹಶೀಲ್ದಾರ್ ಅವರು ಕುಮಾರಸ್ವಾಮಿ ಅವರಿಗೆ ಇದೇ 18ರಂದು ಒತ್ತುವರಿ ತೆರವು ನೋಟಿಸ್ ನೀಡಿದ್ದರು.

ಸಂಕ್ಷಿಪ್ತ ಸುದ್ದಿ

ಬ್ಯಾಂಕ್ ನಿವೃತ್ತ ನೌಕರರ ಧರಣಿ ನಾಳೆ

ಬೆಂಗಳೂರು: ಪಿಂಚಣಿ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬ್ಯಾಂಕ್ ನಿವೃತ್ತರ ಒಕ್ಕೂಟಗಳ ಸಂಯುಕ್ತ ವೇದಿಕೆಯು ಇದೇ 29ರಂದು ಬೆಳಿಗ್ಗೆ 10 ಗಂಟೆಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಜಂಟಿ ಪ್ರಧಾನ ಕಾರ್ಯದರ್ಶಿ ಕೆ. ವಿಶ್ವನಾಥ ನಾಯ್ಕ್, 'ನಮ್ಮ ವೇದಿಕೆಯಡಿ ನಾಲ್ಕು ಲಕ್ಷ ನಿವೃತ್ತ ನೌಕರರಿದ್ದಾರೆ. 1995ರಿಂದ ಬಾಕಿ ಇರುವ ಬ್ಯಾಂಕ್ ನಿವೃತ್ತರ ಮೂಲ ಪಿಂಚಣಿಯಲ್ಲಿ ಪರಿಷ್ಕರಣೆ ಮಾಡಬೇಕು. ವಿಶೇಷ ಭತ್ಯೆಗಳ ಮೇಲೆ ಪಿಂಚಣಿ ನೀಡಬೇಕು. ಸೌಲಭ್ಯಗಳನ್ನು ಎಲ್ಲ ಬ್ಯಾಂಕ್‌ಗಳ ನಿವೃತ್ತರಿಗೂ ಸಮಾನವಾಗಿ ನೀಡಬೇಕು. ಆರೋಗ್ಯ ವಿಮೆ ಸೌಲಭ್ಯದಲ್ಲಿ ಸುಧಾರಣೆ ತಂದು, ಈ ವಿಮೆಯ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿನಾಯಿತಿ ನೀಡಬೇಕು' ಎಂದು ಕೇಂದ್ರ ಸರ್ಕಾರ ಹಾಗೂ ಭಾರತೀಯ ಬ್ಯಾಂಕ್‌ಗಳ ಸಂಘಕ್ಕೆ ಆಗ್ರಹಿಸಿದರು.

'ವಾಣಿಜ್ಯ ಬ್ಯಾಂಕ್‌ಗಳ ಪಿಂಚಣಿದಾರರಿಗೆ ಆಗುತ್ತಿರುವ ತಾರತಮ್ಯ ವನ್ನು ತಪ್ಪಿಸಬೇಕು. ಬ್ಯಾಂಕ್ ಉದ್ಯೋಗಕ್ಕೆ ರಾಜೀನಾಮೆ ನೀಡಿದವರಿಗೆ ಪಿಂಚಣಿ ನೀಡುವಲ್ಲಿ ಆಗುತ್ತಿರುವ ತೊಂದರೆಯನ್ನು ಆದಷ್ಟು ಬೇಗ ಬಗೆಹರಿಸಬೇಕು. ಈ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಡೆಸುತ್ತಿರುವ ಧರಣಿಯಲ್ಲಿ ಮೂರು ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ' ಎಂದರು.

FARNAZ

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/99
ದಿನಾಂಕ : 21–03–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗದಲ್ಲಿ ಇಂಟರ್‌ಲಾಕ್ಡ್ ಎಲ್‌ಸಿ ಗೇಟ್‌ಗಳಿಗಾಗಿ ಆಕ್ಸಿಲರಿ ಟ್ರಾನ್ಸ್‌ಫಾರ್ಮರ್ ಒದಗಿಸುವುದು – ಜಿಎಸ್‌ಯು ಕಾಮಗಾರಿ.	ರೂ. 79,91,283.48

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14–04–2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಮೈಸೂರು

ಪಿಯುಬಿ/872/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಚಿತ್ರಮಂದಿರದ ಕುರ್ಚಿ, ಗೇಟ್‌ಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಸನ್ನ ಚಿತ್ರಮಂದಿರದಲ್ಲಿ ಗುರುವಾರ 'ವಾಮನ' ಚಿತ್ರದ ಟ್ರೈಲರ್ ಬಿಡುಗಡೆ ವೇಳೆ ಅಭಿಮಾನಿಗಳು ಕುರ್ಚಿಗಳು, ಕಿಟಕಿ ಬಾಗಿಲು ಹಾಗೂ ಗೇಟ್‌ಗಳನ್ನು ಮುರಿದು ಹಾನಿ ಮಾಡಿದ್ದಾರೆ.

ನಟ ಧನ್ವೀರ್ ಗೌಡ ನಟನೆಯ 'ವಾಮನ' ಚಿತ್ರದ ಟ್ರೈಲರ್ ಕುರಿತು ದರ್ಶನ್ ಮಾತನಾಡಿರುವ ವಿಡಿಯೊವನ್ನು ಪ್ರದರ್ಶಿಸಲಾಯಿತು. 'ಡಿ ಬಾಸ್, ಡಿ ಬಾಸ್' ಎಂದು ಘೋಷಣೆ ಕೂಗಿದರು. ಈ ವೇಳೆ ತಳ್ಳಾಟ, ನೂಕಾಟ ನಡೆಯಿತು. ವೀಕ್ಷಣೆಗೆ ಬಂದಿದ್ದ ದರ್ಶನ್ ಅಭಿಮಾನಿಗಳು ಬಾಲ್ಕನಿ ಹಾಗೂ ಸೆಕೆಂಡ್ ಕ್ಲಾಸ್‌ನಲ್ಲಿ ಕುರ್ಚಿಗಳನ್ನು ಮುರಿದು ಹಾಕಿದರು.

'ಟ್ರೈಲರ್ ಬಿಡುಗಡೆಗೆ ದರ್ಶನ್ ಬರುತ್ತಾರೆ ಎಂಬ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಬಂದಿದ್ದರು. ಆದರೆ, ದರ್ಶನ್ ಬರಲಿಲ್ಲ. ಇದರಿಂದ ಕೋಪಗೊಂಡ ಅಭಿಮಾನಿಗಳು ಕುರ್ಚಿ, ಕಿಟಕಿ ಬಾಗಿಲು ಹಾಗೂ ಗೇಟ್‌ಗಳನ್ನು ಮುರಿದು ಹಾಕಿದ್ದಾರೆ. ಸುಮ್ಮನಿರುವಂತೆ ಮನವಿ ಮಾಡಿದರೂ ಕೇಳಲಿಲ್ಲ. ಲಕ್ಷಾಂತರ ರೂಪಾಯಿ ನಷ್ಟವಾಗಿದೆ' ಎಂದು ಚಿತ್ರಮಂದಿರದ ರಾಮಚಂದ್ರ ಬೇಸರ ವ್ಯಕ್ತಪಡಿಸಿದರು.

14ರಿಂದ ಮಕ್ಕಳ ಬೇಸಿಗೆ ಶಿಬಿರ

ಬೆಂಗಳೂರು: ಅಖಿಲ ಕರ್ನಾಟಕ ಮಕ್ಕಳ ಕೂಟವು ಏಪ್ರಿಲ್ 14ರಿಂದ ಮೇ 14ರವರೆಗೆ 57ನೇ ವರ್ಷದ ಮಕ್ಕಳ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡಿದೆ.

ಜ್ಞಾನಾರ್ಜನೆಯ ವಿಷಯಗಳನ್ನು ಕಲಿತು, ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಈ ಶಿಬಿರ ಸಹಕಾರಿಯಾಗಲಿದೆ. ಒಂದು ತಿಂಗಳು ನಡೆಯುವ ಶಿಬಿರದ ಅರ್ಜಿಗಳನ್ನು ನೀಡಲಾಗುತ್ತಿದ್ದು, ಆಸಕ್ತರು ಕೋಟೆಯಲ್ಲಿರುವ ಕೂಟದ ಕಚೇರಿಯನ್ನು ಸಂಜೆ 4.30ರಿಂದ 6.30ರ ಅವಧಿಯಲ್ಲಿ ಸಂಪರ್ಕಿಸಬಹುದು ಎಂದು ಕೂಟದ ಪ್ರಧಾನ ಕಾರ್ಯದರ್ಶಿ ಎಸ್.ವಿ. ವೆಂಕಟಾಚಲಂ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 26706109

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-373/3537/2024–25 ದಿನಾಂಕ: 27–03–2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015 ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಸಯಿದ ಮೂಸ ಮತ್ತು ಸಯಿರ್ ಮೂಸ	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಣ್ಣೂರು	3/1	1–01.50	ವ್ಯವಸಾಯ	ವಸತಿ
					3/2	1–01		
					ಒಟ್ಟು	2–02.50		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಸಿದ್ದರಾಮ ಚೈತನ್ಯ ಸ್ವಾಮೀಜಿ ಅಸಮಾಧಾನ

'ಕೆಂಪೇಗೌಡರ ಸ್ಮಾರಕ ನಿರ್ಲಕ್ಷ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಅವರ ಕೋಟೆ–ಕೊತ್ತಲ, ಸ್ಮಾರಕಗಳ ರಕ್ಷಣೆಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರಿದೆ. ಇದರಿಂದಾಗಿ ಅನೇಕ ತಾಣಗಳು ಅವಸಾನದ ಅಂಚಿನಲ್ಲಿವೆ' ಎಂದು ಒಕ್ಕಲಿಗ ಧರ್ಮ ಮಹಾಸಭಾದ ಸಂಸ್ಥಾಪಕರಾದ ಸಿದ್ದರಾಮ ಚೈತನ್ಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಇರುವ ಕೆಂಪೇಗೌಡರ ಕುರುಹು ನಾಶವಾಗುತ್ತಿವೆ. ಇತಿಹಾಸದ ಬಗ್ಗೆ ಅರಿವಿಲ್ಲದವರು ಪುರಾತತ್ವ ಇಲಾಖೆಯ ಎಲ್ಲ ನಿಯಮಗಳನ್ನು ಉಲ್ಲಂಘಿಸಿ, ಮಾಗಡಿಯಲ್ಲಿರುವ ಕೆಂಪೇಗೌಡರ ಕೋಟೆಯ ಕಂದಕಗಳನ್ನು ಮುಚ್ಚುತ್ತಿದ್ದಾರೆ. ಅವುಗಳನ್ನು ಸಂರಕ್ಷಿಸಿ, ಪ್ರವಾಸಿ ತಾಣವಾಗಿ ರೂಪಿಸಬೇಕಾಗಿದ್ದ ಸರ್ಕಾರ, ಈ ವಿಚಾರದಲ್ಲಿ ನಿರ್ಲಕ್ಷ್ಯ ತಾಳಿದೆ' ಎಂದು ಆರೋಪಿಸಿದರು.

'ಯಲಹಂಕ ಮತ್ತು ಮಾಗಡಿಯಲ್ಲಿ ಕೆಂಪೇಗೌಡರ ಕುರುಹುಗಳಿವೆ. ಮಾಗಡಿಯು ಕೆಂಪೇಗೌಡರ ನೈಜ ಇತಿಹಾಸವನ್ನು ಅನಾವರಣಗೊಳಿಸುವ ಪ್ರದೇಶವಾಗಿದೆ. ಇಲ್ಲಿನ ಕೆಂಪೇಗೌಡರ ಕೋಟೆ ಅವ್ಯವಸ್ಥೆಯ ಆಗರವಾಗಿದ್ದು, ಸುತ್ತಲಿನ ಕಂದಕಗಳು ಮಾಯವಾಗಿವೆ. ದಕ್ಷಿಣ ಭಾಗದಲ್ಲಷ್ಟೇ ಉಳಿದಿರುವ ಕಂದಕವನ್ನು ಮುಚ್ಚಿ, ಅದನ್ನು ನಾಮಾವಶೇಷ ಮಾಡಲು ಸ್ಥಳೀಯ ಪುರಸಭೆ ಮುಂದಾಗಿದೆ' ಎಂದರು.

'ಕೆ.ಆರ್. ಮಾರುಕಟ್ಟೆ ಬಳಿಯಿರುವ ಕೋಟೆಯನ್ನು ಕೆಂಪೇಗೌಡರ ಇತಿಹಾಸ ಸಾರುವ ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸಬೇಕು. ಈ ಕೋಟೆಯ ಮುಂಭಾಗ ಕೆಂಪೇಗೌಡರ ಸೊಸೆ ಲಕ್ಷ್ಮೀದೇವಿ ಅವರ ಪ್ರತಿಮೆ ನಿರ್ಮಿಸಬೇಕು. ಈ ಮೂಲಕ ಲಕ್ಷ್ಮೀದೇವಿ ಅವರ ಕೊಡುಗೆ ಜಗತ್ತಿಗೆ ತಿಳಿಯುವಂತೆ ಮಾಡಬೇಕು' ಎಂದು ಒತ್ತಾಯಿಸಿದರು.

ಮಾಗಡಿ ಕೆಂಪೇಗೌಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಎಂ. ಕೃಷ್ಣಮೂರ್ತಿ, 'ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಾಣ ಆಗುತ್ತಿರುವ ಕೆಂಪೇಗೌಡ ಅಧ್ಯಯನ ಕೇಂದ್ರದ ಕಾಮಗಾರಿ ಸ್ಥಗಿತವಾಗಿದೆ. ಈ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ನನೆಗುದಿಗೆ ಬಿದ್ದಿರುವ ಮಾಗಡಿ ಕೆಂಪಸಾಗರದ ಹಿರಿಯ ಕೆಂಪೇಗೌಡರ ಸಮಾಧಿಯ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಬೇಕು' ಎಂದು ಆಗ್ರಹಿಸಿದರು.

ಇತಿಹಾಸ ಸಂಶೋಧಕ ಶೇಖ್ ಮಸ್ತಾನ್, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಯುವ ಘಟಕದ ರಾಜ್ಯಾಧ್ಯಕ್ಷ ವಿನೋದ್ ಗೌಡ ಉಪಸ್ಥಿತರಿದ್ದರು.

ರನ್ಯಾ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬೈನಿಂದ ಚಿನ್ನವನ್ನು ಕಳ್ಳಸಾಗಣೆ ಮಾಡಿಕೊಂಡು ಬಂದಿದ್ದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟಿ ರನ್ಯಾ ಹರ್ಷವರ್ಧಿನಿ ರಾವ್ ಅವರ ಜಾಮೀನು ಅರ್ಜಿಯನ್ನು 64ನೇ ಸಿಸಿಎಚ್ ನ್ಯಾಯಾಲಯವು ಗುರುವಾರ ವಜಾ ಮಾಡಿತು.

ಮಂಗಳವಾರ ಜಾಮೀನು ಅರ್ಜಿಯ ವಿಚಾರಣೆ ನಡೆದು ವಾದ–ಪ್ರತಿವಾದ ಆಲಿಸಿದ್ದ ನ್ಯಾಯಾಧೀಶರು, ಆದೇಶವನ್ನು ಕಾಯ್ದಿರಿಸಿದ್ದರು.

ಮತ್ತೊಬ್ಬ ಆರೋಪಿ ತರುಣ್ ಕೊಂಡೂರು ರಾಜ್ ಅವರ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಪರ ವಕೀಲರು ಸಮಯ ಕೇಳಿದ್ದು, ವಿಚಾರಣೆಯನ್ನು ಮಾರ್ಚ್ 29ಕ್ಕೆ ಮುಂದೂಡಲಾಗಿದೆ.

'ಆರೋಪಿ ರನ್ಯಾ ರಾವ್ ಅವರಿಗೆ ಪ್ರಭಾವಿಗಳ ನಂಟಿರುವುದು ತನಿಖೆ ವೇಳೆ ಗೊತ್ತಾಗಿದೆ. ಜಾಮೀನು ಮಂಜೂರು ಮಾಡಿದರೆ ತನಿಖೆಯ ಹಾದಿ ತಪ್ಪಿಸುವ ಸಾಧ್ಯತೆಯಿದೆ. ಸಾಕ್ಷ್ಯ ನಾಶಪಡಿಸಿ, ವಿದೇಶಕ್ಕೂ ಪರಾರಿಯಾಗುವ ಸಾಧ್ಯತೆಯಿದೆ' ಎಂದು ಡಿಆರ್‌ಐ ಪರ ವಕೀಲರು ವಾದಿಸಿದ್ದರು.

ZODIAC
ANNUAL SALE

4 Days Only!

WhatsApp "SALE" to 8454936004 for participating stores.
Doing so gives us consent to share our promotional offers regularly.

ಜಾತ್ರೆಯಲ್ಲಿ ದುರಂತ ಇಬ್ಬರ ಅಮಾನತು

ಬೆಂಗಳೂರು: ಮದ್ದೂರಮ್ಮ ಜಾತ್ರಾ ಮಹೋತ್ಸವದಲ್ಲಿ ತೇರು ಬಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಸ್ವ ನಿರೀಕ್ಷಕ ಪ್ರಶಾಂತ್ ಹಾಗೂ ಗ್ರಾಮ ಆಡಳಿತಾಧಿಕಾರಿ ಡಿ. ಕಾರ್ತಿಕ್ ಅವರನ್ನು ಜಿಲ್ಲಾಧಿಕಾರಿ ಅಮಾನತುಗೊಳಿಸಿದ್ದಾರೆ.

ಆನೇಕಲ್ ತಾಲ್ಲೂಕು ಹುಸ್ಕೂರು ಗ್ರಾಮದಲ್ಲಿ ಮಾರ್ಚ್ 22ರಂದು ನಡೆದ ಮದ್ದೂರಮ್ಮ ದೇವಿಯ ಜಾತ್ರಾ ಮಹೋತ್ಸವದ ತೇರು ಬಿದ್ದು ಇಬ್ಬರು ಮೃತಪಟ್ಟು, ಎಂಟು ಮಂದಿ ಗಾಯಗೊಂಡಿದ್ದರು. ಈ ಪ್ರಕರಣ ತಡೆಯಲು ಸ್ಥಳದಲ್ಲಿದ್ದ ಕಂದಾಯ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ ವಿಫಲರಾಗಿದ್ದಾರೆ ಎಂದು ಆನೇಕಲ್ ತಾಲ್ಲೂಕು ತಹಶೀಲ್ದಾರ್ ನೀಡಿದ್ದ ವರದಿ ಆಧಾರದಲ್ಲಿ ಜಿಲ್ಲಾಧಿಕಾರಿ ಜಿ. ಜಗದೀಶ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.

ಸರ್ಜಾಪುರ ಹೋಬಳಿಯ ಹುಸ್ಕೂರು ವೃತ್ತದ ರಾಜಸ್ವ ನಿರೀಕ್ಷಕ ಪ್ರಶಾಂತ್ ಅವರನ್ನು ಪೂರ್ವ ತಾಲ್ಲೂಕು ಕೆ.ಆರ್.ಪುರ ವೃತ್ತಕ್ಕೆ, ಹುಸ್ಕೂರು ವೃತ್ತದ ಗ್ರಾಮ ಆಡಳಿತಾಧಿಕಾರಿ ಕಾರ್ತಿಕ್ ಅವರನ್ನು ಮಾರತ್ತಹಳ್ಳಿ ಹೋಬಳಿಯ ಎಚ್‌ಎಎಲ್ ಸ್ಯಾನಿಟರಿ ಬೋರ್ಡ್ ವೃತ್ತಕ್ಕೆ ಸ್ಥಳ ನಿಯುಕ್ತಿಗೊಳಿಸಿದ್ದಾರೆ.

'ಈ ಘಟನೆಯಲ್ಲಿ ಕರ್ತವ್ಯಲೋಪ ಎಸಗಿರುವ ಹೆಬ್ಬಗೋಡಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹಾಗೂ ಸಂಬಂಧಪಟ್ಟ ಪೊಲೀಸ್ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ನಗರ ಜಿಲ್ಲಾಧಿಕಾರಿ ಜಗದೀಶ್ ಪತ್ರ ಬರೆದಿದ್ದಾರೆ.

ರಸ್ತೆಯಲ್ಲಿ ಶವವಿಟ್ಟು ಶೆಟ್ಟಿಗೆರೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು

ಕಾಂಕ್ರೀಟ್ ಮಿಕ್ಸರ್ ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಯಲಹಂಕ: ದ್ವಿಚಕ್ರ ವಾಹನಕ್ಕೆ ಕಾಂಕ್ರೀಟ್ ಮಿಕ್ಸರ್ ಲಾರಿ ಡಿಕ್ಕಿಹೊಡೆದ ಪರಿಣಾಮ, ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಶೆಟ್ಟಿಗೆರೆ ಬಳಿ ಗುರುವಾರ ನಡೆದಿದೆ.

ಘಟನೆಯಿಂದ ಆಕ್ರೋಶಗೊಂಡ ಗ್ರಾಮಸ್ಥರು, ಶವವನ್ನು ರಸ್ತೆಯಲ್ಲಿಟ್ಟು ಪ್ರತಿಭಟನೆ ನಡೆಸಿದರು. ಶೆಟ್ಟಿಗೆರೆ ಗ್ರಾಮದ ನಿವಾಸಿ ಸುಬ್ರಮಣಿ (48) ಮೃತಪಟ್ಟವರು.

ಸುಬ್ರಮಣಿ ಸಂಜೆ ಹೋಟೆಲ್ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದಾಗ ಎದುರಿನಿಂದ ಬಂದ ಕಾಂಕ್ರೀಟ್ ಮಿಕ್ಸರ್ ಲಾರಿ ಬೈಕ್‌ಗೆ ಡಿಕ್ಕಿಹೊಡೆದಿದೆ.

ರೊಚ್ಚಿಗೆದ್ದ ಶೆಟ್ಟಿಗೆರೆ ಮತ್ತು ಸುತ್ತಮುತ್ತಲ ಗ್ರಾಮಸ್ಥರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿ, 'ಟೋಲ್ ತಪ್ಪಿಸಿ ಬರುವ ವಾಹನಗಳ ಚಾಲಕರಿಂದ ಪೊಲೀಸರು ಹಣಪಡೆದು, ಈ ರಸ್ತೆಯಲ್ಲಿ ಸಂಚರಿಸಲು ಬಿಡುತ್ತಿದ್ದಾರೆ' ಎಂದು ಆರೋಪಿಸಿ ಪೊಲೀಸರ ವಿರುದ್ಧ ಧಿಕ್ಕಾರ ಕೂಗಿದರು.

ಗ್ರಾಮಸ್ಥರು ಹಾಗೂ ಪೊಲೀಸರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. 'ಟೋಲ್ ತಪ್ಪಿಸಿ ಬರುವುದರಿಂದ ಶೆಟ್ಟಿಗೆರೆ ಗ್ರಾಮದ ಮೂಲಕ ಭಾರಿ ವಾಹನಗಳ ಸಂಚಾರ ಹೆಚ್ಚಾಗಿದ್ದು, ಕಿರಿದಾದ ಈ ರಸ್ತೆಯಲ್ಲಿ ಪದೇಪದೇ ಅಪಘಾತಗಳಾಗಿ ಸಾವುಗಳು ಸಂಭವಿಸುತ್ತಿವೆ. ಈವರೆಗೆ ನಾಲ್ಕು ಜನ ಮೃತಪಟ್ಟಿದ್ದಾರೆ. ಭಾರಿ ವಾಹನಗಳ ಸಂಚಾರ ತಡೆಗಟ್ಟಬೇಕೆಂದು ಸಂಚಾರ ಪೊಲೀಸರಿಗೆ ಹಲವು ಬಾರಿ ಮನವಿ ಮಾಡಿ, ಪ್ರತಿಭಟನೆ ನಡೆಸಲಾಗಿದೆ. ಆದರೂ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳದ ಕಾರಣದಿಂದ ಗುರುವಾರ ಈ ಘಟನೆ ಮರುಕಳಿಸಿದೆ' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎಸ್.ಜಿ.ಆನಂದ್ ಆರೋಪಿಸಿದರು.

ಈ ರಸ್ತೆಯಲ್ಲಿ ಅತಿವೇಗವಾಗಿ ವಾಹನಗಳು ಸಂಚರಿಸುವುದರಿಂದ ಗ್ರಾಮಸ್ಥರು ರಸ್ತೆದಾಟಲು ಕಷ್ಟಪಡಬೇಕಾಗಿದೆ. ರಸ್ತೆಯನ್ನು ವಿಸ್ತರಣೆ ಮಾಡಬೇಕೆಂದು ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಮೀನುಕುಂಟೆ ಗ್ರಾಮದ ನಿವಾಸಿ ಮುನೇಗೌಡ ದೂರಿದರು.

ಗ್ರಾಮಸ್ಥರಿಂದ ಪ್ರತಿಭಟನೆ: ಲಾಠಿ ಪ್ರಹಾರ

ಈ ವೇಳೆ ಪೊಲೀಸರು, ಗ್ರಾಮಸ್ಥರ ಮನವೊಲಿಸಲು ಪ್ರಯತ್ನಿಸಿದರು. ಆದರೂ ಪಟ್ಟುಬಿಡದೆ ಪ್ರತಿಭಟನೆಯನ್ನು ತೀವ್ರಗೊಳಿಸಿದರು. ಆಗ ಪೊಲೀಸರು ಪ್ರತಿಭಟನಕಾರರನ್ನು ಚದುರಿಸಲು ಲಘು ಲಾಠಿಪ್ರಹಾರ ನಡೆಸಿದರು. ನ್ಯಾಯ ಸಿಗುವವರೆಗೂ ಶವ ತೆಗೆಯುವುದಿಲ್ಲ ಎಂದು ಪಟ್ಟುಹಿಡಿದು, ಸಂಬಂಧಪಟ್ಟ ಸಚಿವರು, ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬರಬೇಕು ಎಂದು ಒತ್ತಾಯಿಸಿ, ಪ್ರತಿಭಟನೆ ಮುಂದುವರಿಸಿದರು.

ಸಂಚಾರ ಅಸ್ತವ್ಯಸ್ತ: ಮೃತದೇಹವಿಟ್ಟು ಪ್ರತಿಭಟನೆ ನಡೆಸಿದ ಕಾರಣದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿ ಹಲವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ಸಂಚಾರ ಬಂದ್ ಆಗಿ ಪ್ರಯಾಣಿಕರು ತೊಂದರೆ ಅನುಭವಿಸಿದರು.

ಮುಡಾ: ಇ.ಡಿ ನಡೆಗೆ ತೀವ್ರ ಆಕ್ಷೇಪ ಆದೇಶ ಕಾಯ್ದಿರಿಸಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅರ್ಜಿಯನ್ನು ಪುರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಮೇಲ್ಮನವಿ ಮಧ್ಯಂತರ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಈ ಕುರಿತ ಮೇಲ್ಮನವಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ಪೂರ್ಣಗೊಳಿಸಿತು.

ವಿಚಾರಣೆ ವೇಳೆ ನಟೇಶ್ ಪರ ವಾದ ಮಂಡಿಸಿದ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ದುಶ್ಯಂತ ದವೆ ಅವರು, 'ರಾಜ್ಯದ ಮೂರು ರಾಜಕೀಯ ಪಕ್ಷಗಳ 38 ಹಿರಿಯ ರಾಜಕಾರಣಿಗಳ ವಿರುದ್ಧದ ಪ್ರಕರಣಗಳು ಕಳೆದ 30 ವರ್ಷಗಳಿಂದ ಲೋಕಾಯುಕ್ತ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ. ಮಾಜಿ ಮುಖ್ಯಮಂತ್ರಿಯೊಬ್ಬರು 11 ಪ್ರಕರಣಗಳಲ್ಲಿ ಲೋಕಾಯುಕ್ತ ವಿಚಾರಣೆ ಎದುರಿಸುತ್ತಿದ್ದಾರೆ. ಆದರೆ, ಅವರ ವಿರುದ್ಧ ಇ.ಡಿ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ' ಎಂದು ಬಲವಾಗಿ ಆಕ್ಷೇಪಿಸಿದರು.

'ಜಾರಿ ನಿರ್ದೇಶನಾಲಯವನ್ನು ಅಸ್ತ್ರವನ್ನಾಗಿಕೊಂಡು ಆಯ್ದ ವ್ಯಕ್ತಿಗಳಿಗೆ ಕಿರುಕುಳ ನೀಡಲು ಬಳಸಿಕೊಳ್ಳಲಾಗುತ್ತಿದೆ. ಜಾರಿ ನಿರ್ದೇಶನಾಲಯ ಈ ರೀತಿಯ ನೋಟಿಸ್‌ಗಳನ್ನು ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಯಾಕೆ ಜಾರಿ ಮಾಡುತ್ತಿಲ್ಲ ಎಂಬುದೇ ದೊಡ್ಡ ಪ್ರಶ್ನೆಯಾಗಿ ಕಾಡುತ್ತಿದೆ. ಮುಡಾದಿಂದ ಸಿಎಂ ಅವರ ಪತ್ನಿಗೆ ಬದಲಿ ನಿವೇಶನ ನೀಡಿರುವ ಪ್ರಕರಣದಲ್ಲಿ ಮಾತ್ರ ಇ.ಡಿ ಏಕೆ ಸಮನ್ಸ್ ನೀಡಿದೆ? ಇದರ ಹಿಂದಿನ ಉದ್ದೇಶವೇನು' ಎಂದು ಪ್ರಶ್ನಿಸಿದರು.

'ದೇಶದಲ್ಲಿ ಉನ್ನತ ಹುದ್ದೆಯಲ್ಲಿರುವವರ ವಿರುದ್ಧ ಎಫ್‌ಐಆರ್ ದಾಖಲಾದ ತಕ್ಷಣ ಇ.ಡಿ ನೋಟಿಸ್ ನೀಡುತ್ತದೆಯೇ' ಎಂದು ಪ್ರಶ್ನಿಸಿದ ಅವರು, 'ಇ.ಡಿಯ ಈ ನಡೆ ಅಧಿಕಾರ ದುರುಪಯೋಗಕ್ಕೆ ಪ್ರಮುಖ ಉದಾಹರಣೆಯಾಗಿದೆ. ಈ ಬೆಳವಣಿಗೆಗಳು ದೇಶದಲ್ಲಿ ಯಾರೂ ಸುರಕ್ಷಿತರಲ್ಲ ಎಂಬ ಭಾವನೆಯನ್ನು ಎತ್ತಿ ತೋರಿಸುತ್ತದೆ' ಎಂದರು.

ಹೈಕೋರ್ಟ್ ಸುದ್ದಿಗಳು

ಅಸ್ತಿತ್ವದಲ್ಲಿ ಇಲ್ಲದ ಆದೇಶ ಉಲ್ಲೇಖ: ಕ್ರಮಕ್ಕೆ ಶಿಫಾರಸು

ಅಸ್ತಿತ್ವದಲ್ಲೇ ಇಲ್ಲದ ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನು ಉಲ್ಲೇಖಿಸಿ ಆದೇಶ ನೀಡಿದ್ದ ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರೊಬ್ಬರ ವಿರುದ್ಧ ಕ್ರಮ ಕೈಗೊಳ್ಳಲು ಹೈಕೋರ್ಟ್ ಶಿಫಾರಸು ಮಾಡಿದೆ.

ತಪ್ಪಾದ ತೀರ್ಪುಗಳನ್ನು ಉಲ್ಲೇಖಿಸಿ ಸಿವಿಲ್ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ ಮತ್ತು ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್ ಕಂಪನಿಗಳು ಸಲ್ಲಿಸಿದ್ದ ಸಿವಿಲ್ ಪುನರಾವಲೋಕನ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ಈ ಕೃತ್ಯವನ್ನು ಕಾನೂನಿನ ಅಡಿ ತನಿಖೆಗೆ ಒಳಪಡಿಸಬೇಕಾದ ಅಗತ್ಯ ಇದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, 'ಈ ವಿಚಾರವನ್ನು ಮುಖ್ಯ ನ್ಯಾಯಮೂರ್ತಿ ಅವರ ಮುಂದಿರಿಸಬೇಕು' ಎಂದು ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿದೆ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದರು.

ಮಲ್ಪೆ: ಹಲ್ಲೆ ಪ್ರಕರಣ ಆರೋಪಿಗಳಿಗೆ ಜಾಮೀನು

'ಮೀನು ಕದ್ದಿದ್ದಾರೆ' ಎಂಬ ಆರೋಪದಡಿ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಇತ್ತೀಚೆಗೆ ಮಹಿಳೆಯೊಬ್ಬರನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಮೂವರು ಆರೋಪಿಗಳಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ.

ಈ ಸಂಬಂಧ ಜಾಮೀನು ಕೋರಿ ಲಕ್ಷ್ಮಿ ಸಾಲಿಯಾನ, ಶಿಲ್ಪಾ ಬಾಯಿ ಹಾಗೂ ಸುಂದರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಸುದ್ದಿ 2 ನಿಮಿಷ

ದರ ಏರಿಕೆ ಹಿಂಪಡೆಯಲು ಆಗ್ರಹ

ಬೆಂಗಳೂರು: ಬಡ ಮತ್ತು ಮಧ್ಯಮ ವರ್ಗದ ಜನರ ಮೇಲೆ ಕಿಂಚಿತ್ತು ಕನಿಕರ ಇದ್ದರೆ, ಕೂಡಲೇ ಹಾಲಿನ ದರ ಏರಿಕೆ ಆದೇಶವನ್ನು ಹಿಂಪಡೆಯಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಕ್ಕೆ ಬಂದ ಮೇಲೆ 20 ತಿಂಗಳಲ್ಲಿ ಮೂರು ಬಾರಿ ಹಾಲಿನ



ದರವನ್ನು ಏರಿಸಿದ್ದಾರೆ. ಇವರ ಅವಧಿಯಲ್ಲಿ ಒಟ್ಟು ₹9 ಹೆಚ್ಚಿಸಿದಂತಾಗಿದೆ ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಈಗಾಗಲೇ ಪೆಟ್ರೋಲ್, ಡೀಸೆಲ್, ದಿನ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಜನ ಕಂಗಾಲಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹಾಲಿನ ದರ ಏರಿಸಿ ಮತ್ತೊಮ್ಮೆ ಬರೆ ಎಳೆದಿದ್ದಾರೆ' ಎಂದು ಅವರು ಕಿಡಿಕಾರಿದ್ದಾರೆ.

'ಒಂದು ವೇಳೆ ಗ್ರಾಹಕರ ಮೇಲೆ ಹೊರೆ ಹೊರಿಸುವುದು ಅನಿವಾರ್ಯವಾದರೆ ಹೆಚ್ಚಳ ಮಾಡಿರುವ ₹4 ನೇರವಾಗಿ ಹಾಲು ಉತ್ಪಾದಕರ ಕೈ ಸೇರುವಂತೆ ನೋಡಿಕೊಳ್ಳಿ. ಅತ್ತ ರೈತರಿಗೂ ಲಾಭವಿಲ್ಲದೆ ಇತ್ತ ಗ್ರಾಹಕರ ಜೇಬಿಗೂ ಕತ್ತರಿ ಹಾಕಿದರೆ ಸರ್ಕಾರದ ವಿರುದ್ಧ ಬೀದಿಗಿಳಿದು ತೀವ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಇನ್ನೂ ಪತ್ತೆಯಾಗದ ಅಸಲಿ ಮಚ್ಚು

ಬೆಂಗಳೂರು: ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ಕಸ್ಟಡಿಯಲ್ಲಿರುವ ನಟರಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಅವರನ್ನು ಬಸವೇಶ್ವರ ನಗರ ಠಾಣೆಯ ಪೊಲೀಸರು ಗುರುವಾರ ತೀವ್ರ ವಿಚಾರಣೆಗೆ ಒಳಪಡಿಸಿದರು.

'ರೀಲ್ಸ್‌ನಲ್ಲಿ ಬಳಸಿದ್ದ ಮಚ್ಚು ಎಲ್ಲಿದೆ' ಎಂದು ಪ್ರಶ್ನೆ ಕೇಳಿ ಮಾಹಿತಿ ಪಡೆದುಕೊಂಡರು. ಆದರೆ, ಅಸಲಿ ಮಚ್ಚು ಇನ್ನೂ ಪತ್ತೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ್ದ ಉದ್ದೇಶ ಏನು? ರೀಲ್ಸ್ ಅಪ್ಲೋಡ್ ಮಾಡಿ, ಬಳಿಕ ಡಿಲೀಟ್ ಮಾಡಿದ್ದು ಏಕೆ ಎಂಬ ಪ್ರಶ್ನೆಗಳಿಗೆ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ.

ಹಳೇ ವಿಮಾನ ನಿಲ್ದಾಣ ರಸ್ತೆಯ ಇಸ್ರೊ ಜಂಕ್ಷನ್‌ನಲ್ಲಿ ಘಟನೆ

ಅಪಘಾತ: ಸ್ಥಳದಲ್ಲೇ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಳೇ ವಿಮಾನ ನಿಲ್ದಾಣ ರಸ್ತೆಯ ಇಸ್ರೊ ಕೇಂದ್ರದ ಜಂಕ್ಷನ್ ಬಳಿ ಬುಧವಾರ ತಡರಾತ್ರಿ ಬಿಎಂಟಿಸಿ ಹಾಗೂ ಬೈಕ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಬೈಕ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಸ್ಸಾಂನ ತಪಾಸ್ ದಾಲಿ (33) ಹಾಗೂ ಪಶ್ಚಿಮ ಬಂಗಾಳದ ಆದಿತ್ಯ ಬೋಸ್ (31) ಮೃತರು.

'ಮಣಿಪಾಲ್ ಆಸ್ಪತ್ರೆ ಕಡೆಯಿಂದ ಇಸ್ರೊ ಕೇಂದ್ರದ ಜಂಕ್ಷನ್ ಕಡೆಗೆ ಬಿಎಂಟಿಸಿ ಬಸ್ ಹಾಗೂ ಬೈಕ್ ಒಂದೇ ಮಾರ್ಗದಲ್ಲಿ ಚಲಿಸುತ್ತಿದ್ದವು. ಜಂಕ್ಷನ್ ಬಳಿ ಎರಡೂ ವಾಹನಗಳ ಮಧ್ಯೆ ಅಪಘಾತ ಸಂಭವಿಸಿ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ತಿಳಿಸಿದರು.

ಬಾಡಿಗೆಗೆ ಬೈಕ್ ಪಡೆದು ತಾಪಸ್ ದಾಲಿ ಅವರು 'ರ್‍ಯಾಪಿಡೊ' ಬೈಕ್ ಟ್ಯಾಕ್ಸಿ ಓಡಿಸುತ್ತಿದ್ದರು. ಆದಿತ್ಯ ಬೋಸ್ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಬಸ್ಸಿನ ಚಕ್ರಕ್ಕೆ ಸಿಲುಕಿ, ಆದಿತ್ಯ ಬೋಸ್ ಅವರ ಮೊಬೈಲ್ ನಜ್ಜುಗುಜ್ಜಾಗಿತ್ತು. ಇದರಿಂದ ಅವರ ಗುರುತು ಪತ್ತೆ ಮಾಡಲು ಸಾಧ್ಯವಾಗಿರಲಿಲ್ಲ. ಗುರುವಾರ ಮಧ್ಯಾಹ್ನದ ವೇಳೆಗೆ ಅವರ ಗುರುತು ಪತ್ತೆ ಮಾಡಿ, ಪೋಷಕರಿಗೆ ಮಾಹಿತಿ ನೀಡಲಾಯಿತು' ಎಂದು ಪೊಲೀಸರು ತಿಳಿಸಿದರು.

ಅಪಘಾತದ ಬಳಿಕ ಬಸ್ ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿ ಆಗಿದ್ದ. ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಚಾಲಕ ಮಹೇಶ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಬಂಧಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಸಿ.ವಿ.ರಾಮನ್ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜೀವನ್‌ಭಿಮಾ ನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳೀಯರ ಆಕ್ರೋಶ, ಪ್ರತಿಭಟನೆ

ಬಿಎಂಟಿಸಿ ಬಸ್ ಚಾಲಕರ ನಿರ್ಲಕ್ಷ್ಯ ಹಾಗೂ ಅತಿವೇಗದ ಚಾಲನೆಯಿಂದ ನಗರದಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಸಾವು– ನೋವಿಗೂ ಕಾರಣವಾಗುತ್ತಿದೆ. ಚಾಲಕರಿಗೆ ತರಬೇತಿ ನೀಡಬೇಕು. ಅಲ್ಲದೇ ನಿಧಾನವಾಗಿ ಬಸ್ ಚಾಲನೆ ಮಾಡುವಂತೆ ಸೂಚಿಸಬೇಕು ಎಂದು ಸ್ಥಳೀಯರು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

'ಘಟನೆ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಬಿಎಂಟಿಸಿ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಆಗಿರುವುದು ಕಂಡು ಬಂದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದ್ದಾರೆ.

ಪರಿಶಿಷ್ಟರ ಜಾತಿಗಣತಿ ಕುರಿತು ಜಾಗೃತಿ ಮೂಡಿಸಿ: ಆಂಜನೇಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿಗೆ ಸೀಮಿತಗೊಳಿಸಿ ಜಾತಿಗಣತಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಒಳ ಮೀಸಲಾತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಎಲ್ಲರೂ ತಮ್ಮ ಹೋರಾಟಗಳನ್ನು ಸ್ಥಗಿತಗೊಳಿಸಿ ಕೇರಿ, ಕಾಲೊನಿ, ಹಟ್ಟಿ, ಮನೆಗಳಲ್ಲಿದ್ದು, ಜಾಗೃತಿ ಮೂಡಿಸಿ ಜಾತಿ ಗಣತಿಗೆ ಬರುವ ನೌಕರರಿಗೆ ಸ್ಪಷ್ಟ ಮಾಹಿತಿ ನೀಡಬೇಕು' ಎಂದು ಸಮುದಾಯದ ಜನರಿಗೆ ಮಾಜಿ ಸಚಿವ ಎಚ್. ಆಂಜನೇಯ ಮನವಿ ಮಾಡಿದ್ದಾರೆ.

'ಜಾತಿಗಣತಿ ಎರಡು ತಿಂಗಳಲ್ಲಿ ಪೂರ್ಣಗೊಂಡು ಜೂನ್ ಮೊದಲ ವಾರ ಒಳ ಮೀಸಲಾತಿ ಜಾರಿಗೆ ಬರಲಿದೆ. ಅಲ್ಲಿಯವರೆಗೂ ಬ್ಯಾಕ್ ಲಾಗ್, ಸುಮಾರು 35 ಸಾವಿರ ಹುದ್ದೆಗಳು, ಬಡ್ತಿಯಲ್ಲಿ ಮೀಸಲು ಸೇರಿದಂತೆ ಯಾವುದೇ ನೇಮಕಾತಿ ನಡೆಯುವುದಿಲ್ಲ' ಎಂದಿದ್ದಾರೆ.



ಆಂಜನೇಯ

'ಮನೆ ಬಾಗಿಲಿಗೆ ಜನಗಣತಿದಾರರು ಬಂದಾಗ ಆಧಾರ್ ಸಂಖ್ಯೆ ಜೊತೆಗೆ ತಮ್ಮ ಜೀವನ ಪರಿಸ್ಥಿತಿ, ಶಿಕ್ಷಣ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ದಾಖಲಿಸಬೇಕು. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಮುಖಂಡರು, ಹೋರಾಟಗಾರರು ಮುಂದಾಗಬೇಕು' ಎಂದೂ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸೇವಾ ನಿವೃತ್ತಿ ಹೊಂದಲಿರುವ ಉಪನ್ಯಾಸಕರು ಹಾಗೂ ಪ್ರಾಂಶುಪಾಲರಿಗೆ ಗೌರವಾಭಿನಂದನೆ: ಅಭಿನಂದನಾ ನುಡಿ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ರಂಗಪ್ಪ, ಮುಖ್ಯ ಅತಿಥಿಗಳು: ಟಿ. ದೊಡ್ಡೇಗೌಡ, ಕೆ.ಟಿ. ರಾಮೇಗೌಡ, ಆಯೋಜನೆ: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ, ಸ್ಥಳ: ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು, ಯಲಹಂಕ, ಬೆಳಿಗ್ಗೆ 10

'ನಿಮ್ಮೊಂದಿಗೆ ನಾವು' ಕಲಾವಿದರ ನಡೆ-ಜನಸಾಮಾನ್ಯರ ಕಡೆ: ಚಿತ್ರಕಲಾ ಪ್ರದರ್ಶನ, ಪ್ರಾತ್ಯಕ್ಷಿಕೆ, ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಪ.ಸ. ಕುಮಾರ್, ಮುಖ್ಯ ಅತಿಥಿಗಳು: ಎ.ಎಂ. ಪ್ರಕಾಶ್, ರಾಮಯ್ಯ, ಪ್ರಕಾಶ್ ಎನ್., ಶಿವಕುಮಾರ್ ಎಸ್., ಆಯೋಜನೆ: ಕರ್ನಾಟಕ ಲಲಿತಕಲಾ ಅಕಾಡೆಮಿ, ಸ್ಥಳ: ಹೊಸಹಳ್ಳಿ ಪಾರ್ಕ್, ವಿಜಯನಗರ, ಬೆಳಿಗ್ಗೆ 10.30

9ನೇ ಘಟಿಕೋತ್ಸವ: ಪದವಿ ಪ್ರದಾನ ಹಾಗೂ ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಘಟಿಕೋತ್ಸವ ಭಾಷಣ: ಎಂ.ಸಿ. ಸುಧಾಕರ್, ಗೌರವ ಅತಿಥಿ: ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ: ಸಿಎಂಆರ್ ವಿಶ್ವವಿದ್ಯಾಲಯ, ಸ್ಥಳ: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ, ಐಟಿಪಿಎಲ್ ರಸ್ತೆ, ಬೆಳಿಗ್ಗೆ 10.45

ಬಿ.ಇಡಿ ತರಗತಿಗಳ ಉದ್ಘಾಟನಾ ಸಮಾರಂಭ: ಅತಿಥಿಗಳು: ಬಿ. ರಮೇಶ್, ನಿರ್ಮಲ್ ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಟಿ.ಆರ್. ವೆಂಕಟರೆಡ್ಡಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಹಾಗೂ ಸ್ಥಳ: ಬಿ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಜಯನಗರ 4ನೇ ಬ್ಲಾಕ್, ಮಧ್ಯಾಹ್ನ 12.30

ದತ್ತಿ ಪ್ರಶಸ್ತಿಗಳ ಪ್ರದಾನ ಸಮಾರಂಭ: ಉದ್ಘಾಟನೆ: ಚನ್ನಪ್ಪ ಕಟ್ಟಿ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಎಂ.ವಿ. ವೆಂಕಟೇಶ್, ಮುಖ್ಯ ಅತಿಥಿ: ರುದ್ರಣ್ಣ ಹರ್ತಿಕೋಟೆ, ಪ್ರಶಸ್ತಿ ಪುರಸ್ಕೃತರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಪ್ರವೀಣ್ ಕುಮಾರ್ ಶೆಟ್ಟಿ, ರವೀಂದ್ರ ಭಟ್ಟ, ಸಾ.ತಿ. ಸದಾನಂದಗೌಡ, ಸಾಕಮ್ಮ ಪಡಸಲಹಟ್ಟಿ, ಬಾನಂದೂರು ಬೋರಮ್ಮ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

50ನೇ ಘಟಿಕೋತ್ಸವ: ಮುಖ್ಯ ಅತಿಥಿಗಳು: ಎಸ್. ಸೋಮನಾಥ್, ಡಾ. ದೇವಿಪ್ರಸಾದ್ ಶೆಟ್ಟಿ, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ), ಸಂಜೆ 5

ಅಗ್ನಿಬನ್ನಿರಾಯಸ್ವಾಮಿ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಜ್ಞಾನಾನಂದಪುರಿ ಸ್ವಾಮೀಜಿ, ಬಾಲಯೋಗಿ ಸಾಯಿ ಮಂಜುನಾಥ್ ಮಹಾರಾಜ್, ಸೋಮಶೇಖರ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ್ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಮಹಿಳಾ ದಿನಾಚರಣೆ ಹಾಗೂ ಸಾಧಕಿಯರಿಗೆ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ಸಬೀಹಾ ಬಾನು, ಪೂರ್ಣಿಮಾ ರವಿ, ಪದ್ಮಾ ಕೋಲಾರ, ಮುಖ್ಯ ಅತಿಥಿಗಳು: ಕೆ.ವಿ. ಪ್ರಭಾಕರ್, ಆಯೇಷಾ ಖಾನುಂ, ಉಪಸ್ಥಿತಿ: ಪದ್ಮಾ ಶಿವಮೊಗ್ಗ, ಮಂಜುಶ್ರೀ ಕಡಕೋಳ, ಆಯೋಜನೆ: ಕರ್ನಾಟಕ ಪತ್ರಕರ್ತೆಯರ ಸಂಘ, ಸ್ಥಳ: ಪ್ರೆಸ್‌ಕ್ಲಬ್ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಉದ್ಘಾಟನೆ: ಲಿಂಗರಾಜ ಗಾಂಧಿ, ಮುಖ್ಯ ಅತಿಥಿಗಳು: ಕೆ.ಎಸ್. ಲತಾ ಕುಮಾರಿ, ಶ್ವೇತಾ ರವಿಶಂಕರ್, ಡಾ. ಪದ್ಮಿನಿ ಪ್ರಸಾದ್, ಅಧ್ಯಕ್ಷತೆ: ಜವರೇಗೌಡ ಟಿ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಉಪಸ್ಥಿತಿ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಉದ್ಘಾಟನೆ: ಲಕ್ಷ್ಮೀ ಹೆಬ್ಬಾಳಕರ, ಕಾರ್ಯಾಗಾರ ಉದ್ಘಾಟನೆ: ಉಮಾ ಮಹದೇವನ್, ಡಿ. ರೂಪಾ, ಅಧ್ಯಕ್ಷತೆ: ರೋಶನಿ ಗೌಡ, ಆಯೋಜನೆ: ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ, ಸ್ಥಳ: ಬಾಲ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ದತ್ತಣ್ಣ

'ರಂಗೋತ್ಸವ' ಸಮಾರೋಪ ಸಮಾರಂಭ: ಅತಿಥಿ: ದತ್ತಣ್ಣ, ನಾಟಕ ಪ್ರದರ್ಶನ: 'ನಮ್ಮ ನಿಮ್ಮೊಳಗೊಬ್ಬ', ಆಯೋಜನೆ: ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಚನ್ನಬಸವಪ್ಪ ಸಭಾಂಗಣ, ಕೆ.ಜಿ.ಎಸ್. ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1.15

'ಮದರ್ ಕರೇಜ್' ನಾಟಕ ಪ್ರದರ್ಶನ: ನಿರ್ದೇಶನ: ಎಸ್.ವಿ. ಕಶ್ಯಪ್, ಆಯೋಜನೆ: ವಿಜಯನಗರ ಬಿಂಬ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ನಯಾಗರ ಜಲಪಾತ ಸೃಷ್ಟಿ, ಚಿಟ್ಟೆಗಳ ಪ್ರಪಂಚ ಅನಾವರಣ: ರೊಬೊಟಿಕ್ ಚಿಟ್ಟೆಗಳು, ಕೀಟಗಳ ಮೂಲಕ ಜನಜಾಗೃತಿ, ಸ್ಥಳ: ಬಿನ್ನಿ ಮಿಲ್ ಮೈದಾನ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನಾಟಕ ಅಕಾಡೆಮಿಯಿಂದ ವಿಶ್ವ ರಂಗಭೂಮಿ ದಿನ ಆಚರಣೆ

'ರಂಗಭೂಮಿಯಿಂದ ಸಮಾಜ ಬದಲಾವಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗಭೂಮಿಯು ಮನೋರಂಜನೆಗೆ ಸೀಮಿತವಾಗಿರದೆ, ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆ ತರುವ ಮಾಧ್ಯಮವಾಗಿದೆ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಬಣ್ಣಿಸಿದರು.

ಕರ್ನಾಟಕ ನಾಟಕ ಅಕಾಡೆಮಿ, ನಾಟಕ ಬೆಂಗಳೂರು ಹಾಗೂ ರಂಗ ಸೌರಭ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ರಂಗಭೂಮಿ ದಿನ ಆಚರಣೆ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

'ಸಮಾಜವನ್ನು ಕಟ್ಟುವ ಕ್ರಿಯೆಯಲ್ಲಿ ರಂಗಭೂಮಿ ತೊಡಗಿದ್ದು, ಪರಸ್ಪರ ಪ್ರೀತಿಯಿಂದ ಬದುಕುವ ವಾತಾವರಣವನ್ನು ನಿರ್ಮಿಸಲು ಸಹಕಾರಿಯಾಗಿದೆ. ಮನೋರಂಜನೆ ಜತೆಗೆ ವೈವಿಧ್ಯಮಯ ಪ್ರಯೋಗಗಳು ಈ ಕ್ಷೇತ್ರದಲ್ಲಿ ಇತ್ತೀಚೆಗೆ

ಜಿ.ಎನ್.ಮೋಹನ್, ಕೆ.ವಿ.ನಾಗರಾಜಮೂರ್ತಿ, ಕೆ.ಎಂ.ಗಾಯತ್ರಿ, ಹಂ.ಪ. ನಾಗರಾಜಯ್ಯ, ವಿಜಯಾ ಮತ್ತು ಮಾವಳ್ಳಿ ಶಂಕರ್ ಅವರು ವಾದ್ಯ ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು –ಪ್ರಜಾವಾಣಿ ಚಿತ್ರ

ನಡೆಯುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ರಂಗಭೂಮಿ ಮೂಲಕ ಜನರು ಶಾಂತಿ, ಸಹಬಾಳ್ವೆ, ಸೌಹಾರ್ದವನ್ನು ಕಂಡುಕೊಳ್ಳಬಹುದಾಗಿದೆ. ಎಲ್ಲರನ್ನೂ ಒಂದುಗೂಡಿಸುವ ವಿಶೇಷವಾದ ಗುಣವನ್ನು ರಂಗಭೂಮಿ ಹೊಂದಿದೆ. ಇತ್ತೀಚೆಗೆ ಕಲಾಗ್ರಾಮದಲ್ಲಿ ನಡೆದ ರಂಗ ಪರಿಷೆಗೆ 25 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದರು. ಇದರಿಂದಾಗಿ ರಂಗಭೂಮಿಗೆ ಭವಿಷ್ಯವಿದೆ ಎನ್ನುವುದು ಸ್ಪಷ್ಟ' ಎಂದರು.

ಲೇಖಕಿ ವಿಜಯಾ, 'ನಾಟಕಗಳು ಸಾಮಾಜಿಕ ಸೌಹಾರ್ದತೆ ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಪರಸ್ಪರ ದ್ವೇಷವಿಲ್ಲದ ರಂಗಭೂಮಿಯನ್ನು ಕಟ್ಟಬೇಕು' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಬಹುರೂಪಿ ಪ್ರಕಟಿಸಿದ ಬಿ. ಸುರೇಶ್ ಅವರ 'ಅಡುಗೆಮನೆಯಲ್ಲೊಂದು ಹುಲಿ', ಕಿರಣ್ ಭಟ್ ಅವರ 'ಹೌಸ್‌ಫುಲ್', ನಾ. ದಾಮೋದರ ಶೆಟ್ಟಿ ಅವರ 'ಚಾರುವಸಂತ', ಮಹಿಪಾಲರೆಡ್ಡಿ ಮುನ್ನೂರ್ ಅವರ 'ರಂಗ ಸುನೇರಿ' ಪುಸ್ತಕಗಳು ಬಿಡುಗಡೆಯಾದವು. ಕೃತಿಗಳ ಬಗ್ಗೆ ಬಹುರೂಪಿ ಸಂಸ್ಥಾಪಕ ಜಿ.ಎನ್. ಮೋಹನ್ ಮಾತನಾಡಿದರು. ಅಕಾಡೆಮಿಯ ತ್ರೈಮಾಸಿಕ ಸಂಚಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ ಬಿಡುಗಡೆ ಮಾಡಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ ವಿಭಾಗ),
ಮಹದೇವಪುರ ವಲಯ, ರೂಂ ನಂ. 101, ಅನೆಕ್ಸ್–3 ಬಿಲ್ಡಿಂಗ್, ಬಿಬಿಎಂಪಿ,
ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ(ಕ್ಯೂಎ/ಕ್ಯೂಸಿ)/ಮಪು/ಟೆಂಡರ್/99/2024–25 ದಿನಾಂಕ: 27–03–2025

ಟೆಂಡರ್ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ), ಮಹದೇವಪುರ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಮಾಲೋಚನೆ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಮಹದೇವಪುರ ವಲಯದ ಮಹದೇವಪುರ ಮತಕ್ಷೇತ್ರದಲ್ಲಿ ಕರ್ನಾಟಕ ವಾಟರ್ ಸೆಕ್ಯೂರಿಟಿ ಅಂಡ್ ರೆಸಿಲಿಯನ್ಸ್ ಪ್ರೋಗ್ರಾಮ್ (ಕೆಡಬ್ಲ್ಯೂಎಸ್ಆರ್‌ಪಿ) ರಡಿಯಲ್ಲಿ ಬಾಹ್ಯ ಅನುದಾನಿತ (ವಿಶ್ವ ಬ್ಯಾಂಕ್) ಯೋಜನೆಯೊಂದಿಗೆ ಸ್ಟ್ರೋಮ್ ವಾಟರ್ ಚರಂಡಿ (ಎಸ್‌ಡಬ್ಲ್ಯೂಡಿ) ಯ ಆರ್‌ಸಿಸಿ ರಿಟೈನಿಂಗ್ ವಾಲ್‌ಗಳು ಸೇರಿದಂತೆ, ನೀರಿನ ಧಾರಣ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು, ಕಲ್ವರ್ಟ್‌ಗಳು ಮತ್ತು ಸೇತುವೆಗಳಿಗೆ ಪ್ರವಾಹ ರಕ್ಷಣ ರಚನೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **(ಪ್ಯಾಕೇಜ್–01) – ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ): 8506.71, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,70,500/–**
2	ಮಹದೇವಪುರ ವಲಯದ ಮಹದೇವಪುರ ಮತಕ್ಷೇತ್ರದಲ್ಲಿ ಕರ್ನಾಟಕ ವಾಟರ್ ಸೆಕ್ಯೂರಿಟಿ ಅಂಡ್ ರೆಸಿಲಿಯನ್ಸ್ ಪ್ರೋಗ್ರಾಮ್ (ಕೆಡಬ್ಲ್ಯೂಎಸ್ಆರ್‌ಪಿ) ರಡಿಯಲ್ಲಿ ಬಾಹ್ಯ ಅನುದಾನಿತ (ವಿಶ್ವ ಬ್ಯಾಂಕ್) ಯೋಜನೆಯೊಂದಿಗೆ ಸ್ಟ್ರೋಮ್ ವಾಟರ್ ಚರಂಡಿ (ಎಸ್‌ಡಬ್ಲ್ಯೂಡಿ) ಯ ಆರ್‌ಸಿಸಿ ರಿಟೈನಿಂಗ್ ವಾಲ್‌ಗಳು ಸೇರಿದಂತೆ, ನೀರಿನ ಧಾರಣ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು, ಕಲ್ವರ್ಟ್‌ಗಳು ಮತ್ತು ಸೇತುವೆಗಳಿಗೆ ಪ್ರವಾಹ ರಕ್ಷಣ ರಚನೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **(ಪ್ಯಾಕೇಜ್–02) – ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ): 8576.16, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,71,550/–**
3	ಮಹದೇವಪುರ ವಲಯದ ಮಹದೇವಪುರ ಮತಕ್ಷೇತ್ರದಲ್ಲಿ ಕರ್ನಾಟಕ ವಾಟರ್ ಸೆಕ್ಯೂರಿಟಿ ಅಂಡ್ ರೆಸಿಲಿಯನ್ಸ್ ಪ್ರೋಗ್ರಾಮ್ (ಕೆಡಬ್ಲ್ಯೂಎಸ್ಆರ್‌ಪಿ) ರಡಿಯಲ್ಲಿ ಬಾಹ್ಯ ಅನುದಾನಿತ (ವಿಶ್ವ ಬ್ಯಾಂಕ್) ಯೋಜನೆಯೊಂದಿಗೆ ಸ್ಟ್ರೋಮ್ ವಾಟರ್ ಚರಂಡಿ (ಎಸ್‌ಡಬ್ಲ್ಯೂಡಿ) ಯ ಆರ್‌ಸಿಸಿ ರಿಟೈನಿಂಗ್ ವಾಲ್‌ಗಳು ಸೇರಿದಂತೆ, ನೀರಿನ ಧಾರಣ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು, ಕಲ್ವರ್ಟ್‌ಗಳು ಮತ್ತು ಸೇತುವೆಗಳಿಗೆ ಪ್ರವಾಹ ರಕ್ಷಣ ರಚನೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **(ಪ್ಯಾಕೇಜ್–03) – ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ): 9084.82, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,81,680/–**
4	ಮಹದೇವಪುರ ವಲಯದ ಮಹದೇವಪುರ ಮತಕ್ಷೇತ್ರದಲ್ಲಿ ಕರ್ನಾಟಕ ವಾಟರ್ ಸೆಕ್ಯೂರಿಟಿ ಅಂಡ್ ರೆಸಿಲಿಯನ್ಸ್ ಪ್ರೋಗ್ರಾಮ್ (ಕೆಡಬ್ಲ್ಯೂಎಸ್ಆರ್‌ಪಿ) ರಡಿಯಲ್ಲಿ ಬಾಹ್ಯ ಅನುದಾನಿತ (ವಿಶ್ವ ಬ್ಯಾಂಕ್) ಯೋಜನೆಯೊಂದಿಗೆ ಸ್ಟ್ರೋಮ್ ವಾಟರ್ ಚರಂಡಿ (ಎಸ್‌ಡಬ್ಲ್ಯೂಡಿ) ಯ ಆರ್‌ಸಿಸಿ ರಿಟೈನಿಂಗ್ ವಾಲ್‌ಗಳು ಸೇರಿದಂತೆ, ನೀರಿನ ಧಾರಣ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು, ಕಲ್ವರ್ಟ್‌ಗಳು ಮತ್ತು ಸೇತುವೆಗಳಿಗೆ ಪ್ರವಾಹ ರಕ್ಷಣ ರಚನೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **(ಪ್ಯಾಕೇಜ್–04) – ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ): 8500.85, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,70,100/–**
5	ಮಹದೇವಪುರ ವಲಯದ ಮಹದೇವಪುರ ಮತಕ್ಷೇತ್ರದಲ್ಲಿ ಕರ್ನಾಟಕ ವಾಟರ್ ಸೆಕ್ಯೂರಿಟಿ ಅಂಡ್ ರೆಸಿಲಿಯನ್ಸ್ ಪ್ರೋಗ್ರಾಮ್ (ಕೆಡಬ್ಲ್ಯೂಎಸ್ಆರ್‌ಪಿ) ರಡಿಯಲ್ಲಿ ಬಾಹ್ಯ ಅನುದಾನಿತ (ವಿಶ್ವ ಬ್ಯಾಂಕ್) ಯೋಜನೆಯೊಂದಿಗೆ ಸ್ಟ್ರೋಮ್ ವಾಟರ್ ಚರಂಡಿ (ಎಸ್‌ಡಬ್ಲ್ಯೂಡಿ) ಯ ಆರ್‌ಸಿಸಿ ರಿಟೈನಿಂಗ್ ವಾಲ್‌ಗಳು ಸೇರಿದಂತೆ, ನೀರಿನ ಧಾರಣ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು, ಕಲ್ವರ್ಟ್‌ಗಳು ಮತ್ತು ಸೇತುವೆಗಳಿಗೆ ಪ್ರವಾಹ ರಕ್ಷಣ ರಚನೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **(ಪ್ಯಾಕೇಜ್–05) – ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ): 8562.47, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,71,300/–**
6	ಮಹದೇವಪುರ ವಲಯದ ಮಹದೇವಪುರ ಮತಕ್ಷೇತ್ರದಲ್ಲಿ ಕರ್ನಾಟಕ ವಾಟರ್ ಸೆಕ್ಯೂರಿಟಿ ಅಂಡ್ ರೆಸಿಲಿಯನ್ಸ್ ಪ್ರೋಗ್ರಾಮ್ (ಕೆಡಬ್ಲ್ಯೂಎಸ್ಆರ್‌ಪಿ) ರಡಿಯಲ್ಲಿ ಬಾಹ್ಯ ಅನುದಾನಿತ (ವಿಶ್ವ ಬ್ಯಾಂಕ್) ಯೋಜನೆಯೊಂದಿಗೆ ಸ್ಟ್ರೋಮ್ ವಾಟರ್ ಚರಂಡಿ (ಎಸ್‌ಡಬ್ಲ್ಯೂಡಿ) ಯ ಆರ್‌ಸಿಸಿ ರಿಟೈನಿಂಗ್ ವಾಲ್‌ಗಳು ಸೇರಿದಂತೆ, ನೀರಿನ ಧಾರಣ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು, ಕಲ್ವರ್ಟ್‌ಗಳು ಮತ್ತು ಸೇತುವೆಗಳಿಗೆ ಪ್ರವಾಹ ರಕ್ಷಣ ರಚನೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **(ಪ್ಯಾಕೇಜ್–07) – ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ): 7120.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,42,500/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **29–03–2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **05–04–2025 ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ಕಛೇರಿ, ರೂಂ. ನಂ.101, ಅನೆಕ್ಸ್–3 ಬಿಲ್ಡಿಂಗ್, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು– 560002 ಇಲ್ಲಿ ನಡೆಯುವುದು. 3)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **15–04–2025 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **16–04–2025 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ ವಿಭಾಗ), ಮಹದೇವಪುರ ವಲಯ, ಬಿಬಿಎಂಪಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ ವಿಭಾಗ),
ಬೊಮ್ಮನಹಳ್ಳಿ ವಲಯ, ರೂಂ ನಂ. 101, ಅನೆಕ್ಸ್–3 ಬಿಲ್ಡಿಂಗ್, ಬಿಬಿಎಂಪಿ,
ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ:ಕಾಅ(ಕ್ಯೂಎ/ಕ್ಯೂಸಿ)/ಬಿಹೆಚ್‌ಝಡ್/ಟೆಂಡರ್/106/2024–25 ದಿನಾಂಕ: 27–03–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ), ಬೊಮ್ಮನಹಳ್ಳಿ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಮಾಲೋಚನೆ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಬೊಮ್ಮನಹಳ್ಳಿ ವಲಯದ ಬೆಂಗಳೂರು ದಕ್ಷಿಣ ಮತಕ್ಷೇತ್ರದ ವಿವಿಧ ಸ್ಥಳಗಳಲ್ಲಿ ಸ್ಟ್ರೋಮ್ ವಾಟರ್ ಚರಂಡಿಗಳಿಗೆ ಕಿರಿದಾದ ನೀರು ಹರಿಯಲು ವಿಸ್ತರಣೆ / ಅಗಲೀಕರಣಕ್ಕಾಗಿ ರಿಟೈನಿಂಗ್ ವಾಲ್‌ಗಳು, 'ಯು' ಆಕಾರದ ಚರಂಡಿಗಳು, ಬಾಕ್ಸ್ ಚರಂಡಿಗಳು ಹಾಗೂ ಕಲ್ವರ್ಟ್‌ಗಳು / ಸೇತುವೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **(ಪ್ಯಾಕೇಜ್–ಬಿಹೆಚ್‌ಝಡ್–1) (ಯೋಜನಾ ಸಂಖ್ಯೆ. 10, 11, 12 ಮತ್ತು 13). ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ): 395.94, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 10,000/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **29–03–2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **03–04–2025 ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ಕಛೇರಿ, ರೂಂ. ನಂ.101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು – 560002** ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **08–04–2025 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **09–04–2025 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ ವಿಭಾಗ), ಬೊಮ್ಮನಹಳ್ಳಿ ವಲಯ, ಬಿಬಿಎಂಪಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ (ಗುಭ/ಗುನಿ–ಪೂರ್ವ),
ರೂಂ. ನಂ. 101, ಅನೆಕ್ಸ್–3 ಕಟ್ಟಡ,
ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–02

ನಂ.: ಕಾಪಾಅ(ಗುಭ/ಗುನಿ)/ಪೂರ್ವ/ಟೆಂಡರ್/103/24–25 ದಿನಾಂಕ: 27.03.2025

ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಗುಣಭರವಸೆ / ಗುಣನಿಯಂತ್ರಣ ವಿಭಾಗ, ಕಾರ್ಯಪಾಲಕ ಅಭಿಯಂತರರು ಗುಭ/ಗುನಿ–ಪೂರ್ವ ಇವರು ಈ ಕೆಳಗಿನ ಕಾಮಗಾರಿಗೆ **ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನೆ ನಿರ್ವಹಣೆ ಸಲಹಾ ಸೇವೆಗಳಿಗೆ ಇದೇ ರೀತಿಯ ಕೆಲಸವನ್ನು ಮಾಡಿದ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ** ಕೆಪಿಪಿ ಪೋರ್ಟಲ್ ಮೂಲಕ ಪ್ರಸ್ತಾವನೆಯನ್ನು ಆಹ್ವಾನಿಸುತ್ತಿದೆ.

ಕ್ರ ಸಂ.	ಕಾಮಗಾರಿಯ ಹೆಸರು
1	"ಪೂರ್ವ ವಲಯದಲ್ಲಿ ಬಾಹ್ಯವಾಗಿ ಅನುದಾನಿತ ಯೋಜನೆಗಳಿಗೆ (ವಿಶ್ವಬ್ಯಾಂಕ್) ಮೂಲಕ ಕರ್ನಾಟಕ ಜಲ ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮ (KWSRP) ಅಡಿಯಲ್ಲಿ ಆರ್‌ಸಿಸಿ ತಡೆಗೋಡೆಗಳು, ನೀರು ಧಾರಣ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು / ಸೇತುವೆಗಳು ಮತ್ತು ಕಲ್ವರ್ಟ್‌ಗಳನ್ನು ಒಳಗೊಂಡಂತೆ ಎಸ್‌ಡಬ್ಲ್ಯೂಡಿಗೆ ಪ್ರವಾಹ ರಕ್ಷಣಾ ರಚನೆಗಳ ನಿರ್ಮಾಣ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು ಪ್ಯಾಕೇಜ್–1". **ಯೋಜನೆ ವೆಚ್ಚ (ರೂ. ಲಕ್ಷಗಳಲ್ಲಿ):** 6547.60, **ಇಎಂಡಿ ಮೊತ್ತ ರೂ.ಗಳಲ್ಲಿ:** 1,31,000/–.

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ ಮೂಲಕ **29.03.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆ: **05.04.2025**ರ **ಬೆಳಿಗ್ಗೆ 11:30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ (ಗುಭ/ಗುನಿ), ರೂ.ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ ಎನ್.ಆರ್. ಚೌಕ, ಬೆಂಗಳೂರು–560 002ರಲ್ಲಿ ನಡೆಯಲಿದೆ. (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **15.04.2025**ರ **ಸಂಜೆ 4:00 ಗಂಟೆ**ವರೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.04.2025**ರ **ಸಂಜೆ 4:30 ಗಂಟೆ**ಗೆ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗುಭ/ಗುನಿ–ಪೂರ್ವ, ಬಿಬಿಎಂಪಿ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ: ಪ್ರಾಯೋಗಿಕ ಜಾರಿ

14 ದೇಗುಲ ಪ್ರಸಾದ ಮನೆ ಬಾಗಿಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 14 ದೇವಾಲಯಗಳ ಪ್ರಸಾದವನ್ನು ಭಕ್ತರ ಮನೆ ಬಾಗಿಲಿಗೆ ತಲುಪಿಸುವ 'ಇ ಪ್ರಸಾದ' ಯೋಜನೆಗೆ ಗುರುವಾರ ಚಾಲನೆ ನೀಡಲಾಯಿತು.

https://csc.devalayas.com ಮೂಲಕ ದೇವಾಲಯದ ಆಯ್ಕೆಗೆ ಅವಕಾಶ ಇದೆ. ಪ್ರಸಾದವನ್ನು ಅಂಚೆ ಅಥವಾ ಕೊರಿಯರ್ ಮೂಲಕ ಭಕ್ತರಿಗೆ ತಲುಪಿಸಲಾಗುತ್ತದೆ. ಕಲ್ಲು ಸಕ್ಕರೆ, ಬಾದಾಮಿ, ಗೋಡಂಬಿ, ದ್ರಾಕ್ಷಿ, ಭಸ್ಮ ಅಥವಾ ಕುಂಕುಮ, ದೇವರ ಫೋಟೊವನ್ನು ಮನೆಗೆ ತಲುಪಿಸಲಾಗುತ್ತದೆ. ಇದಕ್ಕೆ ನಿರ್ದಿಷ್ಟ ಶುಲ್ಕ ಪಾವತಿ ಮಾಡಬೇಕು.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ಹಾಗೂ ಸಿಎಸ್‌ಸಿಇ ಆಡಳಿತ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಇ ಪ್ರಸಾದ' ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, 'ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ 35 ಸಾವಿರ ದೇಗುಲಗಳಿವೆ. ಈ ಪೈಕಿ 'ಎ' ಮತ್ತು 'ಬಿ' ದರ್ಜೆ ದೇವಾಲಯಗಳ ಸಂಖ್ಯೆ 398. ನಾನಾ ಕಾರಣಗಳಿಂದ ಭಕ್ತರಿಗೆ ದೇವಾಲಯಗಳಿಗೆ ತೆರಳಲು ಆಗುವುದಿಲ್ಲ. ಅಂತಹವರು ಬಯಸಿದರೆ ಆನ್‌ಲೈನ್ ಮೂಲಕ ದೇವಾಲಯಗಳ ಪ್ರಸಾದ ತರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ' ಎಂದರು.

'ಮೊದಲ ಹಂತದಲ್ಲಿ 14 ದೇಗುಲಗಳ ಪ್ರಸಾದವನ್ನು 3-4 ದಿನದಲ್ಲಿ ಭಕ್ತರಿಗೆ ಅಂಚೆಯಲ್ಲಿ ತಲುಪಿಸಲಾಗುತ್ತದೆ. ಬೇಡಿಕೆ ಹೆಚ್ಚಾದರೆ ಮತ್ತಷ್ಟು ದೇವಾಲಯಗಳ ಪ್ರಸಾದವನ್ನು ತಲುಪಿಸಲು ವ್ಯವಸ್ಥೆ ಮಾಡಲಾಗುವುದು. ಹೊರ ರಾಜ್ಯದ ದೇವಾಲಯಗಳ ಪ್ರಸಾದಕ್ಕೆ ಅನುಮತಿ ದೊರೆತಿಲ್ಲ. ಆದರೆ, ಅನ್ಯ ರಾಜ್ಯದವರಿಗೆ ಕರ್ನಾಟಕ ದೇವಾಲಯಗಳ ಪ್ರಸಾದವನ್ನು ಅಂಚೆಯಲ್ಲಿ ಕಳುಹಿಸಲಾಗುವುದು' ಎಂದರು.

ದೇವಾಲಯ ಪ್ರಸಾದವನ್ನು ವಿತರಿಸುವ ಮೂಲಕ 'ಇ ಪ್ರಸಾದ'ಕ್ಕೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಧಾರ್ಮಿಕ ಪರಿಷತ್ ಸದಸ್ಯರಾದ ಕೆ. ಚಂದ್ರಶೇಖರ್, ಎ. ರಾಘವೇಂದ್ರ ರಾಜು ಮತ್ತು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ಎಂ.ವಿ. ವೆಂಕಟೇಶ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

14 ದೇವಾಲಯಗಳ ವಿವರ

- ವಿನಾಯಕ ಸ್ವಾಮಿ ದೇವಾಲಯ, ಜಯನಗರ, ಬೆಂಗಳೂರು
- ಚೆಲುವನಾರಾಯಣಸ್ವಾಮಿ ದೇವಾಲಯ, ಮಂಡ್ಯ ಜಿಲ್ಲೆ
- ಶ್ರೀಕಂಠೇಶ್ವರ ಸ್ವಾಮಿ ದೇವಾಲಯ, ನಂಜನಗೂಡು, ಮೈಸೂರು
- ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯ ಮಾಲೂರು, ಕೋಲಾರ ಜಿಲ್ಲೆ
- ಸೋಮೇಶ್ವರ ಸ್ವಾಮಿ ದೇವಾಲಯ, ಹಲಸೂರು, ಬೆಂಗಳೂರು
- ಮೂಕಾಂಬಿಕಾ ದೇವಾಲಯ, ಕೊಲ್ಲೂರು, ಉಡುಪಿ ಜಿಲ್ಲೆ
- ಗವಿಗಂಗಾಧರೇಶ್ವರ ಸ್ವಾಮಿ ದೇವಾಲಯ, ಗವಿಪುರ, ಬೆಂಗಳೂರು
- ಝರಣಿ ನರಸಿಂಹ ದೇವಸ್ಥಾನ, ಬೀದರ್
- ರೇಣುಕಾ ಯಲ್ಲಮ್ಮ ದೇವಸ್ಥಾನ, ಯಲ್ಲಮ್ಮನಗುಡ್ಡ, ಬೆಳಗಾವಿ
- ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ
- ಕನಕದುರ್ಗಮ್ಮ ದೇವಾಲಯ, ಬಳ್ಳಾರಿ
- ಮೈಲಾರಲಿಂಗೇಶ್ವರ ದೇವಸ್ಥಾನ, ಹೂವಿನಹಡಗಲಿ, ವಿಜಯನಗರ ಜಿಲ್ಲೆ
- ಹುಲಿಗೆಮ್ಮ ದೇವಾಲಯ, ಹುಲಿಗಿ, ಕೊಪ್ಪಳ ಜಿಲ್ಲೆ
- ಗುರುದತ್ತಾತ್ರೇಯ ಸ್ವಾಮಿ ದೇವಾಲಯ, ಗಾಣಗಾಪುರ, ಕಲಬುರಗಿ ಜಿಲ್ಲೆ

ಸುಬುಧೇಂದ್ರ ಶ್ರೀಗಳ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಇಲ್ಲಿನ ರಾಘವೇಂದ್ರ ಸ್ವಾಮಿ ಮಠದ ಆಸ್ತಿ ವಿಚಾರವಾಗಿ ಬುಧವಾರ ಮಧ್ಯರಾತ್ರಿ ಕೊಪ್ಪಳದ ರಾಯರ ಮಠದ ಭಕ್ತರು ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರತೀರ್ಥ ಶ್ರೀಗಳ ವಿರುದ್ಧ ಪ್ರತಿಭಟಿಸಿದರು.

ರಾಯರ ಮಠದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸುಬುಧೇಂದ್ರ ತೀರ್ಥ ಶ್ರೀಗಳು ಆಶೀರ್ವಚನ ನೀಡುವಾಗ, 'ಕೊಪ್ಪಳದ ರಾಯರ ಮಠ 1971ರಲ್ಲಿಯೇ ಮಂತ್ರಾಲಯದ ಪೀಠಕ್ಕೆ ಸೇರಿದೆ. ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗಲು ಸ್ಥಳೀಯವಾಗಿ ಹಿರಿಯರನ್ನು ಒಳಗೊಂಡ ಮೇಲ್ವಿಚಾರಣಾ ಸಮಿತಿ ರಚಿಸಲು ಹೆಸರುಗಳನ್ನು ಸೂಚಿಸಬೇಕು' ಎಂದು ಹೇಳಿದ್ದರು.

> **ಕೊಪ್ಪಳದ ರಾಯರ ಮಠವನ್ನು ನಮ್ಮ ಸುಪರ್ದಿಗೆ ಕೊಡುವಂತೆ ಕೇಳಿಲ್ಲ. ಹಸ್ತಕ್ಷೇಪವನ್ನೂ ಮಾಡಿಲ್ಲ. ಕೊಪ್ಪಳ ಮಠದ ಭಕ್ತರು ವಿನಾಕಾರಣ ತಪ್ಪು ತಿಳಿದುಕೊಂಡಿದ್ದಾರೆ**
> **ಸುಬುಧೇಂದ್ರತೀರ್ಥ ಶ್ರೀಗಳು**
> ಮಂತ್ರಾಲಯ ಮಠದ ಪೀಠಾಧಿಪತಿ

ಶ್ರೀಗಳು ತೆರಳಿದ ಬಳಿಕ ಅಸಮಾಧಾನ ಹೊರಹಾಕಿದ ಭಕ್ತರು, 'ಇಲ್ಲಿನ ಜನರೇ ಐದು ದಶಕಗಳಿಂದ ಸ್ವತಂತ್ರವಾಗಿ ನಡೆಸಿಕೊಂಡು ಬಂದಿದ್ದಾರೆ. ಮುಂದೆಯೂ ನಮಗೇ ಸಂಪೂರ್ಣ ಅಧಿಕಾರ ಇರಬೇಕು' ಎಂದು ಒತ್ತಾಯಿಸಿದರು.

ಇದನ್ನು ಸುಬುಧೇಂದ್ರತೀರ್ಥ ಶ್ರೀಗಳ ಎದುರು ಹೇಳಲು ಮಧ್ಯ ರಾತ್ರಿಯಲ್ಲಿಯೇ ಸ್ಥಳೀಯ ಭಕ್ತರು ಘೋಷಣೆಗಳನ್ನು ಕೂಗುತ್ತ ಶ್ರೀಗಳು ತಂಗಿದ್ದ ಸ್ಥಳಕ್ಕೆ ತೆರಳಿ ಪ್ರತಿಭಟನೆ ದಾಖಲಿಸಿದರು.

ದತ್ತಪೀಠ ನಿರ್ವಹಣೆಗೆ ಜಿಲ್ಲಾ ಸಮಿತಿ: 'ಸುಪ್ರೀಂ'ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿಕ್ಕಮಗಳೂರು ಜಿಲ್ಲೆಯ ದತ್ತಪೀಠದ ಗುರುದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಸಂಸ್ಥೆಯನ್ನು ನಿರ್ವಹಿಸಲು ಜಿಲ್ಲಾಮಟ್ಟದ ಸಮಿತಿ ರಚಿಸಲು ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದ ಸಚಿವ ಸಂಪುಟ ಉಪಸಮಿತಿ ನಿರ್ಧರಿಸಿದೆ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

'ಮಾರ್ಚ್ 19ರಂದು ನಡೆದ ಚರ್ಚೆ ವೇಳೆ, ಪ್ರಸ್ತಾವಿತ ಸಂಸ್ಥೆಯು ಎರಡೂ ಧರ್ಮಗಳಿಂದ ಪೂಜಿಸಲ್ಪಡುವ ಸಂಯೋಜಿತ ಸಂಸ್ಥೆಯಾಗಿದೆ ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ತಿಳಿಸಿದ್ದಾರೆ. ಕೋಮು ಸಾಮರಸ್ಯಕ್ಕೆ ಮತ್ತು ಜಾತ್ಯತೀತ ರಾಜ್ಯವು ಹೇಗಿರಬೇಕು ಎಂಬುದಕ್ಕೆ ಉದಾಹರಣೆಯಾಗಿರಲು ಸಂಪುಟ ಉಪಸಮಿತಿ ತನ್ನ ಶಿಫಾರಸು ಸಲ್ಲಿಸಿದೆ' ಎಂದು ರಾಜ್ಯ ಸರ್ಕಾರ ಹೇಳಿದೆ.

'ಇದು ನಾಗರಿಕರ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ ಮತ್ತು ಎಲ್ಲ ಪಾಲುದಾರರ ನಡುವಿನ ವಿವಾದವನ್ನು ಕೊನೆಗೊಳಿಸಲಿದೆ' ಎಂದು ಸರ್ಕಾರ ಹೇಳಿದೆ. ಸ್ಥಳೀಯವಾಗಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಮೂಲಕ ಎರಡೂ ಧರ್ಮಗಳ ಆಚರಣೆಗಳು ಮತ್ತು ಸಂಪ್ರದಾಯಗಳನ್ನು ನಿರ್ವಹಿಸುವುದು ಅಗತ್ಯ. ಜಿಲ್ಲಾಡಳಿತದ ಮೇಲ್ವಿಚಾರಣೆಯಲ್ಲಿ ಎರಡೂ ಧರ್ಮಗಳಿಗೆ ಸಮಾನ ಪ್ರಾತಿನಿಧ್ಯ ನೀಡುವ ಸಮಿತಿ ರಚಿಸುವ ಮೂಲಕ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿಯಬಹುದು ಎಂದು ರಾಜ್ಯ ಸರ್ಕಾರ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಪ್ರಸ್ತಾವಿತ ಸಂಸ್ಥೆಯನ್ನು ನಿರ್ವಹಿಸಲಿರುವ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷರಾಗಿ, ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಾಶ್ವತ ಸದಸ್ಯರಾಗಿ, ಶಾಖಾದ್ರಿ ಕಾಯಂ ನಾಮನಿರ್ದೇಶಿತ ಸದಸ್ಯರಾಗಿ, ಸರ್ಕಾರ ದಿಂದ ನಾಮನಿರ್ದೇಶನಗೊಂಡಿರುವ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಸಮಾನ ಸಂಖ್ಯೆಯ ಸದಸ್ಯರು ಇರಲಿದ್ದಾರೆ. ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವರು.

ಜಿಲ್ಲಾ ಸಮಿತಿಯ ಶಿಫಾರಸಿನ ಪ್ರಕಾರ ಅರ್ಚಕ ಮತ್ತು ಮುಜಾವರ್ ಅವರನ್ನು ರಾಜ್ಯ ಸರ್ಕಾರ ನೇಮಿಸಲಿದೆ. ಜಿಲ್ಲಾ ಸಮಿತಿಯ ಮಾರ್ಗದರ್ಶನದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರು ಸಂಸ್ಥೆಯನ್ನು ನಿರ್ವಹಿಸುತ್ತಾರೆ ಎಂದು ಸರ್ಕಾರ ತಿಳಿಸಿದೆ. ದತ್ತಪೀಠದ ಪೂಜೆ ನೆರವೇರಿಸಲು ಮುಜಾವರ್ ನೇಮಿಸಿರುವ ರಾಜ್ಯ ಸರ್ಕಾರದ ನಿರ್ಧಾರ ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್‌ನ 2023ರ ಮಾರ್ಚ್ 6ರ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಲಾಗಿದೆ.

ಕಂಡವರ ಹಣದಲ್ಲಿ ಮಜಾ: ಕನಕ ಗುರುಪೀಠ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಹಾವೇರಿ: 'ಕಂಡವರ ಹಣದಲ್ಲಿ ಮಜಾ ಮಾಡುವ ಕೆಲ ಮಠ ಮತ್ತು ಸ್ವಾಮೀಜಿಗಳಿಂದ ಕುರುಬರು ದೂರ ಇರಬೇಕು. ಕಪೋಲಕಲ್ಪಿತ ಕಥೆ ನಂಬದೇ ಕುಟುಂಬವನ್ನು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಧಾರ್ಮಿಕವಾಗಿ ಸದೃಢಗೊಳಿಸಬೇಕು' ಎಂದು ಕಾಗಿನೆಲೆ ಮಹಾಸಂಸಂಸ್ಥಾನ ಕನಕ ಗುರುಪೀಠ ನಿರಂಜನಾನಂದಪುರಿ ಸ್ವಾಮೀಜಿ ತಿಳಿಸಿದ್ದಾರೆ.

ನಿರಂಜನಾನಂದಪುರಿ ಸ್ವಾಮೀಜಿ

ಜಿಲ್ಲೆಯ ರಟ್ಟೀಹಳ್ಳಿ ಕಬ್ಬಿಣಕಂಥಿ ಮಠದ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿಯವರ ಷಷ್ಠ್ಯಬ್ದಿ ಕಾರ್ಯಕ್ರಮದ ಬಗ್ಗೆ ಪ್ರತಿಕ್ರಿಯಿಸಿ ಪ್ರಕಟಣೆ ನೀಡಿರುವ ಅವರು, 'ಷಷ್ಠ್ಯಬ್ದಿ ಕಾರ್ಯಕ್ರಮಕ್ಕೆ ಹಾವೇರಿ–ದಾವಣಗೆರೆ ಜಿಲ್ಲೆಯ ಬೀರಲಿಂಗೇಶ್ವರ ದೇವರ ದೇವಸ್ಥಾನಗಳಿಂದ ಕನಿಷ್ಠ ₹25 ಸಾವಿರ ದೇಣಿಗೆ ನೀಡುವಂತೆ ಹಾಗೂ ದೇವರ ಪಲ್ಲಕ್ಕಿ ಸಮೇತ ಮಠಕ್ಕೆ ಬರುವಂತೆ ಒತ್ತಾಯಿಸಲಾಗುತ್ತಿದೆ. ಇದು ಯಾರದ್ದೋ ದುಡ್ಡು, ಯಲ್ಲಮ್ಮನ ಜಾತ್ರೆ ಎಂಬಂತಾಗಿದೆ' ಎಂದಿದ್ದಾರೆ.

ರಾಜ್ಯದ ವಿವಿಧೆಡೆ 6 ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರದಿಂದ ಆರು ದಿನಗಳು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೈಸೂರು ಮತ್ತು ಕೊಡಗು ಜಿಲ್ಲೆಯ ಪ್ರತ್ಯೇಕ ಸ್ಥಳಗಳಲ್ಲಿ ಶುಕ್ರವಾರದಂದು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ಶನಿವಾರದಿಂದ ದಕ್ಷಿಣ ಕನ್ನಡ, ಬೆಳಗಾವಿ, ಧಾರವಾಡ, ಗದಗ, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವೆಡೆಯೂ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನ ಪ್ರತ್ಯೇಕ ಸ್ಥಳಗಳಲ್ಲಿ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಪ್ರೊ. ಬರಗೂರುಗೆ 'ರಾಜ್‌ಕುಮಾರ್ ಪ್ರಶಸ್ತಿ'

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 'ವರನಟ ಡಾ.ರಾಜ್‌ಕುಮಾರ್ ಪ್ರಶಸ್ತಿ'ಗೆ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಆಯ್ಕೆಯಾಗಿದ್ದಾರೆ.

ಬರಗೂರು ರಾಮಚಂದ್ರಪ್ಪ

ಈ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ಕನ್ನಡ ನಾಡು–ನುಡಿಗೆ ಅನನ್ಯ ಸೇವೆ ಸಲ್ಲಿಸುತ್ತಿರುವ ನಾಡಿನ ಹಿರಿಯರೊಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.

ಏಪ್ರಿಲ್ 18ರಂದು ಸಂಜೆ 5 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರು ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period **April to June- 2025**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH & PV Print waste & unsolds (Voucher & Office Copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH, PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH, PV, Sudha & Mayura	8	1.8	0.6	1	2	1	1
Reel Wrappers/Miscellaneous sweep/Bale pattie waste	6	2	0.9	1.2	1.2	0.9	0.9
Sudha & Mayura Print Waste & unsolds-Magazine	1	0.4	0.9	0.4	0.6	0.9	0.05
Miscellaneous Tissue/ Mixed White	2	0.2	0.3	0.4	0.2	0.5	0.2

For clarification, Contact the Procurement Head at **25880430/340/ Mobile No: 9900042650.** Sealed Quotes Tenders/mail may be addressed to Procurement Head babu.v@printersmysore.co.in, venu.tl@printersmysore.co.in and sent to the above address within 7 days from the date of this advertisement.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ (ವಿದ್ಯುತ್) ಕಚೇರಿ, ಹುಬ್ಬಳ್ಳಿ

ಸಂಖ್ಯೆ: ಎಚ್‌ಡಿಎಮ್‌ಸಿ/ಟೆಂಡರ್/2024–25 ದಿನಾಂಕ: 26–03–2025

E-Tender Notification on Selection of ICEA for LED Streetlight Project of Hubballi-Dharwad Municipal Corporation Advt No. 1762 Date: 26-03-2025

1) Hubballi-Dharwad Municipal corporation invites the Request for Proposal (RFP) from eligible bidders through KPPP Portal under Karnataka Public Procurement & Transparency Act 1999-2000.

Sl. No.	Indent No.	Name of Work	EMD Amount	Service Period
1	DMA/2024-25/ SE5056	Appointment of Independent Charted Engineering Agency Service for Implementation of Energy Efficiency Project for streetlights by replacement of existing conventional lamps with LED lamps along with Centralized Control & Monitoring System (CCMS) in Hubli-Dharwad Municipal Corporation in Karntaka.	1,75,112.00	7 Years

2) The bidders have to participate through Online Procurement only. The Website for online bidding is **"https://kppp.karnataka.gov.in"**
3) All the RFP and Draft concessionaire agreement (DCA) document can be seen and obtained from Website **"https://kppp.karnataka.gov.in"** and Department location Hubballi-Dharwad Municipal Corporation. Bid documents can also be viewed by typing **DMA/2024-25/SE5056** in KPPP Portal.
4) All the payments to be made through e-Portal only.
5) RFP document will be available for bidding on above website from date: **29-03-2025.**
6) Last Date for Submission of RFP is **21-04-2025.**
7) Technical Proposal will be Opened on **22-04-2025.**
8) Pre Bid Meeting will be held on **09-04-2025 at Meeting Hall of Hubballi-Dharwad Municipal Corporation, Hubballi.**
9) Other details regarding RFP can be seen in RFP document.
10) Any information on Addendum / Corrigendum / Cancellation of tender can be seen in the above said website.
11) For further details / queries please contact **Executive Engineer (Electrical)** during the office hours on Mobile No. **9448783522** information can also be obtained from the Website: **https://kppp.karnataka.gov.in**

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/1137/ಅಡ್ವಟೋರ್ /2024–25

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಚೇರಿ, ಕಲಬುರಗಿ
(ಉಗ್ರಾಣ ಮತ್ತು ಖರೀದಿ ಇಲಾಖೆ)

ಸಂ.ಕಕರಸಾ/ಕೇಕ/ಉ&ಮಖಿನಿ/16/2024–25 ದಿನಾಂಕ:.27.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ. (ಇ– ಪ್ರೊಕ್ಯುರ್ಮೆಂಟ್ ಮೋಡ್ನಲ್ಲಿ ಮಾತ್ರ)

ಈ ಕೆಳಗಿನ ಟೆಂಡರನ್ನು ಪೂರೈಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂ. ಮತ್ತು ದಿನಾಂಕ	ಟೆಂಡರ್ ಹೆಸರು	ಟೆಂಡರ್‌ನ ಅಂದಾಜು ಮೌಲ್ಯ	ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ
ಜಿ–82/24-25 Date: 27.03.25	Public Seating 12 Seater Bench Made of Stainless Steel ಗಳ ಖರೀದಿ.	ರೂ. 02.25 ಕೋಟಿ	29.04.2025 15:00 ಗಂಟೆ
ಜಿ–83/24-25 Date: 27.03.25	Phenol Bonded Densified Compressed Plywood ಗಳ ಖರೀದಿ.	ರೂ. 56.51 ಲಕ್ಷ	16.04.2025 15:00 ಗಂಟೆ
ಜಿ–84/24-25 Date: 27.03.25	Rubber Glazing with inserts (EPDM Rubber) ಗಳ ಖರೀದಿ.	ರೂ. 51.26 ಲಕ್ಷ	16.04.2025 15:00 ಗಂಟೆ
ಜಿ–85/24-25 Date: 27.03.25	Copier Paper (A4 Size, Plain White, 80 GSM) ಗಳ ಖರೀದಿ.	ರೂ. 49.91 ಲಕ್ಷ	16.04.2025 15:00 ಗಂಟೆ
IND0118/CALL-2 Date: 27.03.25	Cylinder Liners ಗಳ ಖರೀದಿ.	ರೂ. 15.00 ಲಕ್ಷ	16.04.2025 15:00 ಗಂಟೆ
IND0119/CALL-2 Date: 27.03.25	Fuel Injection Pipes & Leak-Off Pipes ಗಳ ಖರೀದಿ.	ರೂ. 36.00 ಲಕ್ಷ	16.04.2025 15:00 ಗಂಟೆ

ಟೆಂಡರ್, ನೊಂದಣಿ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು https://kppp.karnataka.gov.in/#/portal/portal-home ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರೊಕ್ಯುರ್ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)

ವಾ.ಸಾ.ಸಂ.ಇ/ಕಲಬುರಗಿ/1156/ಕೆ.ಎಸ್.ಎಂ.ಸಿ.&ಎ/2024–25

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರವರ ಕಛೇರಿ, ವಿದ್ಯುತ್ ವಿಭಾಗ,
ವಾಣಿ ವಿಲಾಸ ನೀರು ಸರಬರಾಜು ಕೇಂದ್ರ, ಕೆ.ಆರ್.ಎಸ್ ಮುಖ್ಯ ರಸ್ತೆ,
ಯಾದವಗಿರಿ, ಮೈಸೂರು – 570020.

ಸಂಖ್ಯೆ: ಮೈನಪಾ/ಕಾಅ(ವಿ)/ಟಿಎನ್–24/2024-25 ದಿನಾಂಕ: 19-03-2025

ಟೆಂಡರ್ ಪ್ರಕಟಣೆ–24
ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಪಬ್ಲಿಕ್–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ಸಂಸ್ಥೆಯವರಿಂದ/ಬಿಡ್‌ದಾರರಿಂದ ಸೇವಾ ಟೆಂಡರ್‌ನ ನಿಯಮಗಳಿಗೆ ಒಳಪಟ್ಟಂತೆ ಟೆಂಡರನ್ನು ಕರ್ನಾಟಕ ಪಬ್ಲಿಕ್–ಪ್ರೊಕ್ಯೂರ್‌ಮೆಂಟ್–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಇ.ಎಂ.ಡಿ ಯನ್ನು ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು.

ಕಾಮಗಾರಿಯ ಹೆಸರು: DMA/2024-25/SE4975.
ಅಂದಾಜು ಮೊತ್ತ: (ಕೋಟಿಗಳಲ್ಲಿ): 2,57,26,483/–.
ಇ.ಎಂ.ಡಿ ಮೊತ್ತ: (ರೂ.ಗಳಲ್ಲಿ) 4,52,100/–.

ಕೆ.ಪಿ.ಪಿ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1) ಕೆ.ಪಿ.ಪಿ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ: 19–03–2025ಬೆಳಗ್ಗೆ 12.00 ಗಂಟೆಯ ನಂತರ.** 2) ಪ್ರೀ ಬಿಡ್ ದಿನಾಂಕ ಮತ್ತು ಕಾಲ: **24–03–2025 ಬೆಳಗ್ಗೆ 12.00 ಗಂಟೆ.** 3) ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ: **26–03–2025, 17:00 ಗಂಟೆಯವರೆಗೆ.** 4) ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ : **08–04–2025, 17:00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಕಾಲ: 10–04–2025 11:00 ಗಂಟೆಯ ನಂತರ.** 6) ಆರ್ಥಿಕ ಬಿಡ್ ತೆರೆಯುವ **ದಿನಾಂಕ ಮತ್ತು ಕಾಲ : 15–04–2025, 11:00 ಗಂಟೆಯ ನಂತರ.**

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/RO1518/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ ವಿಭಾಗ,
ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು

ಸಂ: ಕಾಪಾಅ(ಶಿವಿ)/ಕೆಪಿಪಿಪಿ/ಟೆಂಡ್/19/2024–25 ದಿನಾಂಕ:26.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರ
1.	ಎಂ.ವಿ. ಗಾರ್ಡನ್‌ನ ಎಸ್‌ಸಿ/ಎಸ್‌ಟಿ ಬ್ಲಾಕ್ ಸಂಖ್ಯೆ 39 ಮತ್ತು 41ರ ಸಮೀಪದಲ್ಲಿ ಬಹುಪಯೋಗಿ ಕಟ್ಟಡದ ನಿರ್ಮಾಣ ಕಾಮಗಾರಿ. ಅಂದಾಜು ಮೌಲ್ಯ: **ರೂ. 50.00 ಲಕ್ಷಗಳು.** ಇಎಂಡಿ: **ರೂ. 1,00,000/–**
2.	ಎಂ.ವಿ. ಗಾರ್ಡನ್‌ನ ಎಸ್‌ಸಿ/ಎಸ್‌ಟಿ ಬ್ಲಾಕ್ ಸಂಖ್ಯೆ 53 ಮತ್ತು 54 ರ ಸಮೀಪದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಂಥಾಲಯ ಮತ್ತು ಇತರ ಅಗತ್ಯ ಚಟುವಟಿಕೆಗಳ ನಿರ್ಮಾಣ ಕಾಮಗಾರಿ. ಅಂದಾಜು ಮೌಲ್ಯ: **ರೂ. 150.00 ಲಕ್ಷಗಳು.** ಇಎಂಡಿ: **ರೂ. 2,25,000/–** (ರೂ. 1,00,000/– ಎನ್‌ಇಎಫ್‌ಟಿ ಮೂಲಕ, ಉಳಿದ 1,25,000/– ಬ್ಯಾಂಕ್ ಗ್ಯಾರಂಟಿ ಮೂಲಕ).
3.	ರಾಜೀವ್ ಗಾಂಧಿ ಕಾಲೋನಿಯ ಎಸ್‌ಸಿ/ಎಸ್‌ಟಿ ಬ್ಲಾಕ್ ಸಂಖ್ಯೆ 82/1 ಮತ್ತು 82/2 ಸಮೀಪದಲ್ಲಿ ಸಮುದಾಯ ಭವನ ನಿರ್ಮಾಣ ಮತ್ತು ಶಿಥಿಲಗೊಂಡ ಕಟ್ಟಡವನ್ನು ಕೆಡವುವುದು. ಅಂದಾಜು ಮೌಲ್ಯ: **ರೂ. 300.00 ಲಕ್ಷಗಳು.** ಇಎಂಡಿ: **ರೂ. 4,50,000/–** (ರೂ. 1,00,000/– ಎನ್‌ಇಎಫ್‌ಟಿ ಮೂಲಕ, ಉಳಿದ 3,50,000/– ಬ್ಯಾಂಕ್ ಗ್ಯಾರಂಟಿ ಮೂಲಕ).

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ ದಿನಾಂಕ: **28.03.2025ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ: **25.04.2025ರ ಮಧ್ಯಾಹ್ನ 12.00 ಗಂಟೆಗೆ.** 3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.04.2025ರ ಸಂಜೆ 4.00 ಗಂಟೆಯವರೆಗೆ.** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **29.04.2025 ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ.

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ

ಸಂಖ್ಯೆ : ಆಡಳಿತ:ಸಿಬ್ಬಂದಿ:ನೇಮಕಾತಿ:75:2024–25 ದಿನಾಂಕ : 27–03–2025

ಪ್ರಕಟಣೆ

ಬ್ಯಾಂಕಿನಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧ ನಡೆಸಲಾಗಿದ್ದ ಲಿಖಿತ ಪರೀಕ್ಷೆಯ ಅಂತಿಮ ಫಲಿತಾಂಶವನ್ನು ಹುದ್ದೆವಾರು ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.mandyadccbank.com ರಲ್ಲಿ ಭೇಟಿ ನೀಡಿ ಅಂತಿಮ ಫಲಿತಾಂಶದ ವಿವರವನ್ನು ಪಡೆದುಕೊಳ್ಳಲು ತಿಳಿಸಿದೆ.

ಸಹಿ/– ಸದಸ್ಯ ಕಾರ್ಯದರ್ಶಿ/ ಮುಖ್ಯಕಾರ್ಯನಿರ್ವಹಣಾಧಿಕಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆಂಗೇರಿ ವಿಭಾಗ,
ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ ಕಛೇರಿ ಕಟ್ಟಡ, ಸಿಎ ನಂ.3, 1ನೇ ಮುಖ್ಯರಸ್ತೆ,
ಹೊರ ವರ್ತುಲ ರಸ್ತೆ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–560060.

ಸಂಖ್ಯೆ: ಕಾಅ/ಕೆಂಗೇರಿ/ಟೆಂಡರ್/20/2024–25 ದಿನಾಂಕ: 27–03–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ–ಲಕೋಟೆ ಪದ್ಧತಿ – (1ನೇ ಕರೆ)
1	ಯಶವಂತಪುರ ಮತಕ್ಷೇತ್ರದ 110 ಗ್ರಾಮಗಳಲ್ಲಿ ಬೋರ್‌ವೆಲ್‌ಗಳ ಕೊರೆಯುವಿಕೆ ಮತ್ತು ನಿರ್ವಹಣೆ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 398.40, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,98,000/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **29–03–2025 ರಂದು ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **02–04–2025 ರಂದು ಮಧ್ಯಾಹ್ನ 3.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ ವಲಯ, ಬೆಂಗಳೂರು – 560098 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **05–04–2025 ರಂದು ಸಂಜೆ 4.00 ಗಂಟೆವರೆಗೆ.** 4) ಬಿಡ್‌ಗಳನ್ನು ತೆರೆಯುವ ದಿನಾಂಕ: **07–04–2025 ರಂದು ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬಿಬಿಎಂಪಿ.

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ದಕ್ಷಿಣ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ – 560100.
ಇ–ಮೇಲ್: ka.konappanaagrahara.tmc@gmail.com

ಸಂಖ್ಯೆ: ಪುಸಕೋ/ಆರೋಗ್ಯ ಶಾಖೆ/1/2024–25 ದಿನಾಂಕ: 27–03–2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ ದಿನ ನಿತ್ಯದ ಘನ ತ್ಯಾಜ್ಯವಸ್ತು ನಿರ್ವಹಣೆಗಾಗಿ ಅಗತ್ಯ ಮಾನವ ಸಂಪನ್ಮೂಲವನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇಂಡೆಂಟ್ ಸಂಖ್ಯೆ: **DMA/2024-25/SE3928/CALL-2** ರಲ್ಲಿ ಗುತ್ತಿಗೆ ಅಂದಾಜು ಮೊತ್ತ **ರೂ. 85.15 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಹೊರಗುತ್ತಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಕಾರ್ಮಿಕ ಇಲಾಖೆ ನೋಂದಾಯಿತ ಗುತ್ತಿಗೆದಾರರುಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ **ರೂ. 3.55 ಲಕ್ಷಗಳು** ಸದರಿ ಗುತ್ತಿಗೆಯ ಸರ್ವೀಸ್ ಚಾರ್ಜ್ ಆಗಿದ್ದು, ಬಿಡ್ಡುದಾರರು ಸರ್ವೀಸ್ ಚಾರ್ಜ್‌ಗೆ ಮಾತ್ರ ಬಿಡ್ ಸಲ್ಲಿಸಲು ಸೂಚಿಸಲಾಗಿದ್ದು, ಬಿಡ್ ಸಲ್ಲಿಸುವಾಗ ಟೆಂಡರ್ ದಸ್ತಾವೇಜಿನಲ್ಲಿರುವ ಸೂಚನೆಗಳಂತೆ ಬಿಡ್ ಸಲ್ಲಿಸಲು ಸೂಚಿಸಲಾಗಿದೆ. ಬಿಡ್‌ದಾರರು ಸಲ್ಲಿಸುವ ದರಗಳು ಸದರಿ ಹೊರಗುತ್ತಿಗೆ ಸೇವೆ ಪೂರೈಸಲು ಪೂರಕವಾಗಿರಬೇಕು ಇಲ್ಲದಿದ್ದರೆ ಅಂತಹ ಬಿಡ್‌ಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಿರುವ ನಿರ್ದೇಶನಗಳಂತೆ ಪರಿಗಣಿಸಿ ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **04–04–2025 ರಂದು ಸಂಜೆ 5.00 ಗಂಟೆ ಆಗಿರುತ್ತದೆ.** ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನ ಮುಖಾಂತರ ಮತ್ತು ವೆಬ್‌ಸೈಟ್: **https://kppp.karnataka.gov.in** ಮುಖಾಂತರ ಹಾಗೂ ಕಛೇರಿ ಸಮಯದಲ್ಲಿ **ಆರೋಗ್ಯ ಶಾಖೆಯ ಪರಿಸರ ಅಭಿಯಂತರರಿಂದ** ಪಡೆಯತಕ್ಕದ್ದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.

ವಾಸಾಸಂಇ/ವಾ.ಪ್ರ/5950/ಅಡ್ವಟೋರ್ /2024–25

ಕರ್ನಾಟಕ ಸರ್ಕಾರ
ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ
ಬನ್ನೂರು ರಸ್ತೆ, ಪಂಪ್ ಹೌಸ್ ಪಕ್ಕ ಮಂಡ್ಯ–571401. ದೂ: 08232–222196
Website: www.mandya.uda.gov.in Email: commissionermuda@gmail.com
ಸಂಖ್ಯೆ: ಮಂನಪ್ರಾ/ತಾ.ಶಾ/ವಿ.ನ.ಬ.ನೀ.ಸ.ಕ.ತೆ/ /2024–25 ದಿ: 24–03–2025

ವಾಣಿಜ್ಯ ಮಳಿಗೆಗಳ ಸಾರ್ವಜನಿಕ ಮರು ಇ–ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ: 07–03–2025 ರಂದು ನಡೆದ ಸಭೆಯ ತೀರ್ಮಾನದಂತೆ. ವಿವೇಕಾನಂದ ನಗರ ಬಡಾವಣೆಯಲ್ಲಿರುವ ವಾಣಿಜ್ಯ ಮಳಿಗೆಗಳ ಸಂಖ್ಯೆ 4 (1 ರಿಂದ 4) ನ್ನು ದಿನಾಂಕ: 24.03.2025 ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ ಮರು ಇ–ಹರಾಜು ಮಾಡಲಾಗುತ್ತಿದ್ದು, ಇ–ಹರಾಜಿನಲ್ಲಿ ಭಾಗವಹಿಸುವವರು ಮಳಿಗೆ ಒಂದಕ್ಕೆ ರೂ. 20 ಸಾವಿರ ರೂ. ಗಳ ಮುಂಗಡ ಠೇವಣಿಯನ್ನು ದಿನಾಂಕ:23.04.2025 ಸಂಜೆ 5:00 ಗಂಟೆಯೊಳಗೆ ನೆಫ್ಟ್/ ನೆಟ್ ಬ್ಯಾಂಕಿಂಗ್ ಡೆಬಿಟ್/ ಕ್ರೆಡಿಟ್ ಕಾರ್ಡ್/ ಮೂಲಕ ಆಯುಕ್ತರು. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಮಂಡ್ಯ ಇವರ ಹೆಸರಿಗೆ ಪಾವತಿಸಿ ದಿನಾಂಕ: 25.04.2025 ರಂದು ಮಧ್ಯಾಹ್ನ 12:00 ಗಂಟೆಯಿಂದ ಸಂಜೆ 4:00 ಗಂಟೆಯ ವರೆಗೆ ನಡೆಯುವ ಮರು ಇ–ಹರಾಜಿನಲ್ಲಿ ಭಾಗವಹಿಸಿ ಮಾಸಿಕ ಬಾಡಿಗೆ ಮೇಲೆ ಬಿಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕಚೇರಿ ಕೆಲಸದ ವೇಳೆಯಲ್ಲಿ ತಿಳಿಯಬಹುದಾಗಿರುತ್ತದೆ. www.mandya.uda Rov.in ವೆಬ್‌ಸೈಟ್‌ನಲ್ಲಿ ನೋಡಿಕೊಳ್ಳಬಹುದಾಗಿದೆ.

ಕ್ರ ಸಂ	ಮಳಿಗೆ ಇರುವ ಸ್ಥಳ	ಮಳಿಗೆ ಸಂಖ್ಯೆ	36 ತಿಂಗಳ ಅವಧಿ ನಂತರ ಹಿಂದಿರುಗಿಸಲಾಗುವ ನಿಗಧಿಪಡಿಸಲಾದ ಭದ್ರತಾ ಠೇವಣಿ ಮೊಬಲಗು	ನಿಗಧಿಪಡಿಸಲಾದ ಮಾಹೆಯಾನ ಬಾಡಿಗೆ ರೂ.ಗಳಲ್ಲಿ	ಮಳಿಗೆಯ ಮೀಸಲಾತಿ ವಿವರ
1	ವಿವೇಕಾನಂದ ನಗರ ಬಡಾವಣೆ	1	1,00,000/–	10,000/–	ಸಾಮಾನ್ಯ
2	ವಿವೇಕಾನಂದ ನಗರ ಬಡಾವಣೆ	2	1,00,000/–	10,000/–	ಸಾಮಾನ್ಯ
3	ವಿವೇಕಾನಂದ ನಗರ ಬಡಾವಣೆ	3	1,00,000/–	10,000/–	ಸಾಮಾನ್ಯ
4	ವಿವೇಕಾನಂದ ನಗರ ಬಡಾವಣೆ	4	1,00,000/–	10,000/–	ಸಾಮಾನ್ಯ

ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/798/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಳ್ಳೆಯ ಮನಸ್ಸಿನಿಂದ ಹೊಂದಿಕೊಂಡಿರುವುದೇ ಧರ್ಮ,
ವೈಮನಸ್ಸಿನಿಂದ ಬೇರೆಯಾಗುವುದೇ ಅಧರ್ಮ.

-ದ.ರಾ.ಬೇಂದ್ರೆ

ಬಿಜೆಪಿ ಒಳಜಗಳ: ಕೊನೆಗೂ ಕ್ರಮಕ್ಕೆ ಮುಂದಾದ ವರಿಷ್ಠರು

ಬಿಜೆಪಿಯಲ್ಲಿ ಅಂಕೆ ಮೀರಿರುವ ಒಳಜಗಳವನ್ನು ನಿವಾರಿಸಲು ಆ ಪಕ್ಷದ ವರಿಷ್ಠರು ಮುಂದಾಗಿದ್ದಾರೆ. ವಿಜಯಪುರ ಕ್ಷೇತ್ರದ ಶಾಸಕ, ಭಿನ್ನಮತೀಯ ಗುಂಪಿನ ನಾಯಕತ್ವ ವಹಿಸಿದ್ದ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷ ಉಚ್ಚಾಟನೆ ಮಾಡಲಾಗಿದೆ. ಯತ್ನಾಳ ಬಣದ ಮತ್ತೊಬ್ಬ ಶಾಸಕ ಬಿ.ಪಿ. ಹರೀಶ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪರ ಧ್ವನಿ ಎತ್ತಿದ್ದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಎಂ.ಪಿ. ರೇಣುಕಾಚಾರ್ಯ, ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಜೊತೆಗೆ ಆಪ್ತವಾಗಿರುವ ಶಾಸಕರಾದ ಎಸ್.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್ ಅವರಿಗೆ ನೋಟಿಸ್ ನೀಡಲಾಗಿದೆ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳ ತರುವಾಯ ಬಿಜೆಪಿ ರಾಜ್ಯ ಘಟಕದಲ್ಲಿ ಭಿನ್ನಮತ ಭುಗಿಲೆದ್ದಿತ್ತು. ಎರಡೂ ಬಣಗಳ ನಾಯಕರು ದಿನವೂ ಬಹಿರಂಗವಾಗಿ ಪರಸ್ಪರ ಕಚ್ಚಾಡಿಕೊಳ್ಳುತ್ತಿದ್ದರು. ಪಕ್ಷದ ವೇದಿಕೆಯಲ್ಲಿ, ವಿಧಾನಮಂಡಲ ಅಧಿವೇಶನದಲ್ಲಿ ನಾಯಕರ ಕಾದಾಟ ಎದ್ದು ಕಾಣಿಸುತ್ತಿತ್ತು. ಸಾಮಾನ್ಯ ಕಾರ್ಯಕರ್ತರಲ್ಲಿ ರೇಜಿಗೆ ಹುಟ್ಟಿಸುವ ಮಟ್ಟಕ್ಕೆ ನಾಯಕರ ಜಗಳ ತಾರಕಕ್ಕೆ ಏರಿತ್ತು. ಯತ್ನಾಳ ಅವರಿಗೆ ಎರಡು ಬಾರಿ ನೋಟಿಸ್ ನೀಡಿದ್ದು ಬಿಟ್ಟರೆ, ಉಳಿದ ವಿಷಯಗಳಲ್ಲಿ ಏನೂ ನಡೆದೇ ಇಲ್ಲವೆಂಬಂತೆ ಪಕ್ಷದ ವರಿಷ್ಠರು ಮೌನಕ್ಕೆ ಶರಣಾಗಿದ್ದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೇ ಸವಾಲು ಎಸೆಯುವಷ್ಟರ ಮಟ್ಟಿಗೆ ಭಿನ್ನಮತ ಬೆಳೆದುನಿಂತದ್ದರ ಹಿಂದೆ ದೆಹಲಿಯಲ್ಲಿ ಪ್ರಭಾವ ಹೊಂದಿರುವ ಪಕ್ಷದ ಯಾರಾದರೂ ನಾಯಕರ ಚಿತಾವಣೆ ಇರಬಹುದು ಎನ್ನುವ ಮಾತುಗಳು ಬಿಜೆಪಿ ಪಡಸಾಲೆಯಲ್ಲೇ ಹರಿದಾಡಿದ್ದವು. ಯತ್ನಾಳರ ಬಣ ವಿಸ್ತಾರಗೊಳ್ಳುತ್ತಾ, ಚಟುವಟಿಕೆ ಬಿರುಸು ಪಡೆಯುತ್ತಿದ್ದಂತೆಯೇ ವಿಜಯೇಂದ್ರ ಪರವಾದ ಗುಂಪು ಕೂಡ ಭಿನ್ನರ ವಿರುದ್ಧ ಗಟ್ಟಿ ಧ್ವನಿಯಲ್ಲಿ ಮಾತನಾಡಲಾರಂಭಿಸಿತು. ಪಕ್ಷಕ್ಕೆ ದೊಡ್ಡ ಮಟ್ಟದಲ್ಲಿ ಹಾನಿಯಾದ ಮೇಲೆ, ವರಿಷ್ಠರು ನೋಟಿಸ್, ಉಚ್ಚಾಟನೆಯಂತಹ ಹತಾರಗಳನ್ನು ತೆಗೆದುಕೊಂಡು ಶಸ್ತ್ರಚಿಕಿತ್ಸೆಗೆ ಇಳಿದಿದ್ದಾರೆ.

ವರಿಷ್ಠರು ಇನ್ನಷ್ಟು ಬಿಗಿ ನಿಲುವು ತಳೆದರಷ್ಟೇ ಭಿನ್ನಮತದ ವ್ಯಾಧಿಗೆ ಮದ್ದು ಸಿಗಬಹುದು

ಯತ್ನಾಳ ಅವರು ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ವಿರುದ್ಧ ಧ್ವನಿ ಎತ್ತಿರುವುದು ಈಚಿನ ವಿದ್ಯಮಾನವೇನೂ ಅಲ್ಲ. 2019ರಲ್ಲಿ ಯಡಿಯೂರಪ್ಪ ಅವರು ಪುನಃ ಮುಖ್ಯಮಂತ್ರಿಯಾದ ದಿನದಿಂದಲೂ ಕುಟುಂಬ ರಾಜಕಾರಣ, ಭ್ರಷ್ಟಾಚಾರದಂತಹ ವಿಷಯ ಹಾಗೂ ಆಡಳಿತದಲ್ಲಿ ವಿಜಯೇಂದ್ರ ಅವರು ಹಸ್ತಕ್ಷೇಪ ನಡೆಸಿದ್ದಾರೆ ಎಂದು ಆರೋಪ ಮಾಡುತ್ತಲೇ ಇದ್ದರು. ಮುಖ್ಯಮಂತ್ರಿ ಕುರ್ಚಿ ₹2,500 ಕೋಟಿಗೆ ಮಾರಾಟಕ್ಕಿದೆ ಎಂದೂ ಅವರು ಹೇಳಿದ್ದರು. ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದ ಮೇಲೆ ಯತ್ನಾಳ ಅವರು ಟೀಕಾಪ್ರಹಾರವನ್ನು ಮತ್ತಷ್ಟು ಮೊನಚುಗೊಳಿಸಿದರು. ಯಡಿಯೂರಪ್ಪ ಮತ್ತು ಅವರ ಕುಟುಂಬವು ತಮಗಿರುವ ಪ್ರಭಾವವನ್ನು ಬಳಸಿಕೊಂಡು ರಾಜ್ಯದಲ್ಲಿ ಪಕ್ಷವನ್ನು ಸಂಪೂರ್ಣವಾಗಿ ಹಿಡಿತಕ್ಕೆ ತೆಗೆದುಕೊಳ್ಳಬಾರದು ಎಂಬ ಉದ್ದೇಶವೂ ಯತ್ನಾಳ ಬಣದ ಚಟುವಟಿಕೆ ಕುರಿತು ವರಿಷ್ಠರು ಇಷ್ಟು ದಿವಸ ಮೌನ ವಹಿಸಲು ಕಾರಣ ಆಗಿರಬಹುದು ಎಂಬ ಮಾತು ಪಕ್ಷದ ವಲಯದಲ್ಲಿ ಇದೆ. ಬಲಿಷ್ಠ ನಾಯಕತ್ವ ಇರುವ ಶಿಸ್ತಿನ ಪಕ್ಷ ತಮ್ಮದು ಎಂದು ಬಿಜೆಪಿ ನಾಯಕರು ಹೇಳಿಕೊಳ್ಳುತ್ತಾರೆ. ಕರ್ನಾಟಕದಲ್ಲಿನ ಪಕ್ಷದ ಸ್ಥಿತಿಯನ್ನು ಅವಲೋಕಿಸಿದರೆ ಅರಾಜಕತೆ, ಅನಾಯಕತ್ವ, ಒಳಬೇಗುದಿಯಿಂದ ಪಕ್ಷ ನಲುಗಿ ಹೋಗಿರುವುದು ಕಾಣಿಸುತ್ತದೆ. ಇದರಿಂದ ಪಕ್ಷದ ವರ್ಚಸ್ಸಿಗೆ ಹಾನಿಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ವರಿಷ್ಠರು ಪಕ್ಷದ ರಾಜ್ಯ ಘಟಕವನ್ನು ಈ ರೀತಿಯ ದೈನೇಸಿ ಸ್ಥಿತಿಗೆ ತಳ್ಳಿದ್ದು ಏಕೆ ಎಂಬ ಸಂಶಯವೂ ಈ ಎಲ್ಲ ಬೆಳವಣಿಗೆಗಳಿಂದ ಮೂಡುತ್ತದೆ. ಬಿಜೆಪಿಯಿಂದ ಸ್ಪರ್ಧಿಸಿ, ಗೆದ್ದಿರುವ ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಅವರು ಪಕ್ಷದ ನಾಯಕತ್ವವನ್ನು ನಿರಂತರವಾಗಿ ಟೀಕಿಸುವುದರ ಜತೆಗೆ, ಕಾಂಗ್ರೆಸ್ ನಾಯಕರ ಸಭೆಗಳಲ್ಲೂ ಕಾಣಿಸಿಕೊಂಡಿದ್ದಾರೆ. ಪಕ್ಷಕ್ಕೆ ಸಡ್ಡು ಹೊಡೆದಿರುವ ಇವರ ವಿರುದ್ಧ ಕ್ರಮಕ್ಕೆ ಮುಂದಾಗಲು ಇಷ್ಟು ದಿನ ಬೇಕಾಯಿತೇ ಎಂಬ ಪ್ರಶ್ನೆಯನ್ನು ಕಾರ್ಯಕರ್ತರೇ ಕೇಳುವಂತಾಗಿದೆ. ಪಕ್ಷದ ವರ್ಚಸ್ಸಿಗೆ ತೀವ್ರ ಹಾನಿಯಾದ ಬಳಿಕ ಶಿಸ್ತುಕ್ರಮ ಜರುಗಿಸಲು ವರಿಷ್ಠರು ಮುಂದಾಗಿದ್ದಾರೆ. ಯತ್ನಾಳ ಅವರ ಉಚ್ಚಾಟನೆ ಮತ್ತು ಎರಡೂ ಬಣಗಳ ಕೆಲವರಿಗೆ ನೋಟಿಸ್ ಜಾರಿ ಮಾಡಿದ ಮಾತ್ರಕ್ಕೆ ಭಿನ್ನಮತದ ಸದ್ದು ಪೂರ್ತಿ ಅಡಗುತ್ತದೆ ಎಂದೇನೂ ಅನ್ನಿಸುತ್ತಿಲ್ಲ. ವಿರೋಧಪಕ್ಷವಾಗಿ ಕೆಲಸ ಮಾಡಲು ನೀಡಿರುವ ಜನಾದೇಶವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಹೊಣೆಯನ್ನು ಪಕ್ಷ ಅರಿಯಬೇಕಿದೆ.

ದಿನದ ಟ್ವೀಟ್

ಜನಪರವಲ್ಲದ ನಿರ್ಧಾರ

ನಂದಿನಿ ಹಾಲು ಮತ್ತು ಮೊಸರಿನ ಬೆಲೆ ಲೀಟರ್‌ಗೆ ₹4ರಷ್ಟು ಏರಿಕೆಯಾಗಿದೆ. ಒಳ್ಳೆಯ ಕೆಲಸ ಮಾಡಿದ್ದೀರಿ ಸಿದ್ದರಾಮಯ್ಯ ಅವರೇ, ಮಧ್ಯಮ ವರ್ಗದವರು ಮತ್ತು ಬಡವರ ಬಗೆಗಿನ ನಿಮ್ಮ ಕಾಳಜಿ ನಿಜಕ್ಕೂ ಶ್ಲಾಘನೀಯ.

ರಾಮಚಂದ್ರ ಎಮ್., ಬರಹಗಾರ

ಕಿಡಿನುಡಿ

ಇನ್ನು ಕೆಲವೇ ದಿನಗಳಲ್ಲಿ ಸರ್ಕಾರವು ಓಲಾ ಮತ್ತು ಉಬರ್ ಮಾದರಿಯಲ್ಲಿ ಸಹಕಾರಿ ಟ್ಯಾಕ್ಸಿ ಸೇವೆ ಆರಂಭಿಸಲಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ಉದ್ಯಮ ನಡೆಸುವುದು ಸರ್ಕಾರದ ಕೆಲಸವಲ್ಲ ಎಂದು ಹೇಳುತ್ತಾ ಮೋದಿ ಅವರು ಅಧಿಕಾರಕ್ಕೆ ಬಂದರು. ಆದರೆ ಈಗ ಎಲ್ಲ ವಿಷಯಗಳಲ್ಲೂ ತಾವು ಹೇಳಿದ್ದುದಕ್ಕೆ ವಿರುದ್ಧವಾದ ಕೆಲಸ ಮಾಡುತ್ತಿದ್ದಾರೆ.

ವೀಣಾ ಜೈನ್

25 ವರ್ಷಗಳ ಹಿಂದೆ

ಮಂಗಳವಾರ, 28-3-2000

• 360 ಕೋಟಿ ತೆರಿಗೆ ಹೊರೆಯ ಬಜೆಟ್

ಬೆಂಗಳೂರು, ಮಾರ್ಚ್ 27– ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿಗೆ ಆದ್ಯತೆ ನೀಡುವ, 360 ಕೋಟಿ ರೂಪಾಯಿ ಹೊಸ ತೆರಿಗೆ ಭಾರದ ಬಜೆಟ್ ಅನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ವಿಧಾನಸಭೆಯಲ್ಲಿ ಮಂಡಿಸಿದರು.

ವಿಶೇಷ ಪ್ರದೇಶ ಯೋಜನೆಗಳಿಗೆ ಹೆಚ್ಚು ಒತ್ತು ಕೊಟ್ಟು ಏಳು ಹೊಸ ಯೋಜನೆಗಳನ್ನು 2000-2001ನೇ ಸಾಲಿನ ತಮ್ಮ ಚೊಚ್ಚಲ ಆಯವ್ಯಯದಲ್ಲಿ ಪ್ರಕಟಿಸಿರುವ ಕೃಷ್ಣ ಅವರು ತೆರಿಗೆಯಲ್ಲಿ ಅನೇಕ ರಿಯಾಯಿತಿಗಳನ್ನು ನೀಡಿದ ನಂತರವೂ 290.7 ಕೋಟಿ ರೂಪಾಯಿಗಳ ಕೊರತೆ ಉಳಿಸಿದ್ದಾರೆ.

21ನೇ ಶತಮಾನದ ಹಾಗೂ ಮೂರನೇ ಸಹಸ್ರಮಾನದ ಪ್ರಥಮ ಬಜೆಟ್ ಮಂಡಿಸಿದ, ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿಗಳು, ಅಧಿಕ ಸಂಪನ್ಮೂಲ ಕ್ರೋಡೀಕರಿಸಲು ವಾಣಿಜ್ಯ, ಅಬಕಾರಿ, ಮೋಟಾರು ವಾಹನ ತೆರಿಗೆ ಹಾಗೂ ಸ್ಟ್ಯಾಂಪುಗಳು ಮತ್ತು ನೋಂದಣಿ ಮೇಲಿನ ತೆರಿಗೆ ಹೆಚ್ಚಿಸಿ 317 ಕೋಟಿ ರೂಪಾಯಿಗಳ ಹೊಸ ತೆರಿಗೆ ವಿಧಿಸಿದ್ದಾರೆ.

• ಆಲಮಟ್ಟಿ: ಮುಂದುವರಿದ ನಿರಶನ

ವಿಜಾಪುರ, ಮಾರ್ಚ್ 27– ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸಲು 'ಕರಸೇವೆ' ಮಾಡಲಾಗುವುದು ಎಂದು ಈ ಹಿಂದೆ ಘೋಷಿಸಿದ್ದ ಮಾಜಿ ಸಚಿವ ವೈಜನಾಥ ಪಾಟೀಲ ಈ ಕಾರ್ಯಕ್ರಮದಿಂದ ಹಿಂದೆ ಸರಿದು, ಈ ಬಗ್ಗೆ ಜನತೆಯಲ್ಲಿ ತಿಳಿವಳಿಕೆ ಮೂಡಿಸುವ ಚಳವಳಿ ಹಾಗೂ ಸರದಿ ನಿರಶನ ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ಈ ಹಿಂದೆ ಆಲಮಟ್ಟಿ ಹೋರಾಟದಲ್ಲಿ 'ಕರಸೇವೆ' ಪದವನ್ನು ಬಳಕೆಗೆ ತಂದ ವೈಜನಾಥ ಪಾಟೀಲ ಅವರು ನಿನ್ನೆ ರೈತಸಂಘದ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ಜತೆ ಉಳಿದು ಕರಸೇವೆಯನ್ನು ತಾವು ನಾಳೆ ನಡೆಸುವುದಾಗಿ ತಿಳಿಸಿದ್ದರು. ಆದರೆ ಇಲ್ಲಿನ ಸಂಗನಬಸವ ಸ್ವಾಮೀಜಿ ನೇತೃತ್ವದ ಕೃಷ್ಣಾ ಮೇಲ್ದಂಡೆ ಯೋಜನೆ ಆಲಮಟ್ಟಿ ಹೋರಾಟ ಸಮಿತಿಯು ಕರಸೇವೆಗೆ ಅಂತ್ಯ ಹಾಡಿ ವಿಜಾಪುರದಲ್ಲಿ ಸರದಿ ನಿರಶನವನ್ನು ಮಾತ್ರ ಮುಂದುವರಿಸಲು ನಿನ್ನೆಯ ಬಂಧನ-ಬಿಡುಗಡೆ ಬಳಿಕ ನಿರ್ಣಯಿಸಿತ್ತು.

50 ವರ್ಷಗಳ ಹಿಂದೆ

ಶುಕ್ರವಾರ, 28-3-1975

• ಪರೀಕ್ಷೆ ಬಹಿಷ್ಕರಿಸಿದರೆ ಸಸ್ಪೆಂಡ್, ವಜಾ: ಅರಸು

ಬೆಂಗಳೂರು, ಮಾರ್ಚ್ 27– ಖಾಸಗಿ ಕಾಲೇಜು ಶಿಕ್ಷಕರು ತಮ್ಮ ಬೇಡಿಕೆ ಈಡೇರಿಕೆಗಾಗಿ ಪರೀಕ್ಷೆ ಬಹಿಷ್ಕರಿಸುವ ಕ್ರಮ ಮುಂದುವರಿಸಿದರೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳಲಿದೆ.

ಈ ಬಗ್ಗೆ ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಎಚ್ಚರಿಕೆ ನೀಡಿದರು.

ಸರ್ಕಾರ ಇಂಥ ಬೆದರಿಕೆಗಳಿಗೆ ಮಣಿಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸರ್ಕಾರ ಧನಸಹಾಯ ನೀಡುವ ಶೇ 80ರಷ್ಟು ವೇತನವನ್ನು ಖಾಸಗಿ ಕಾಲೇಜು ಶಿಕ್ಷಕರಿಗೆ ಚೆಕ್ ಮೂಲಕ ನೀಡುವ ಪ್ರಶ್ನೆಯನ್ನು ಪರಿಶೀಲಿಸುವುದಾಗಿಯೂ ಅರಸು ಅವರು ಭರವಸೆ ನೀಡಿದರು.

• ಲೆಕ್ಕ ಪರಿಶೋಧನೆ ರೀತಿ ಬಗ್ಗೆ ಸಂದೇಹ

ಬೆಂಗಳೂರು, ಮಾರ್ಚ್ 27– ಸಹಕಾರ ಸಂಘಗಳ ಬಗ್ಗೆ ಈಗ ನಡೆಯುತ್ತಿರುವ ಲೆಕ್ಕ ಪರಿಶೋಧನೆ ವಿಧಾನದ ಬಗ್ಗೆ ಇಂದು ವಿಧಾನ ಸಭೆಯಲ್ಲಿ ಸಂಶಯ ವ್ಯಕ್ತಪಡಿಸಲಾಯಿತು.

ಸಹಕಾರ ಸಂಘಗಳ ಬಗ್ಗೆಯೇ ಪ್ರತ್ಯೇಕ ಲೆಕ್ಕ ಪರಿಶೋಧನ ಘಟಕ ತೆರೆಯಲೂ ಕೆಲವರು ಸರ್ಕಾರಕ್ಕೆ ಸಲಹೆ ನೀಡಿದರು.

ಸಹಕಾರ, ಯುವಜನ ಸೇವಾ ಶಾಖೆ ಮತ್ತು ವಾರ್ತಾ ಇಲಾಖೆ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಬಹುಪಾಲು ಸದಸ್ಯರು ಸಹಕಾರ ಸಂಘಗಳ ಲೋಪ-ದೋಷಗಳನ್ನು ಟೀಕಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ 'ದೊಡ್ಡಣ್ಣ'ನಿಗಿಂತ ಭಾರತ ಬಹಳಷ್ಟು ಮುಂದಿದೆ

ಅಮೆರಿಕದ ಚುನಾವಣೆ: ಗೋಜಲಿನ ಸಂತೆ!

ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

ಅಮೆರಿಕವನ್ನು ಮತ್ತೆ ಮಹಾನ್ ಆಗಿಸುವುದಾಗಿ ಹೇಳುವ ಅಲ್ಲಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ದೇಶದ ಅತಿದೊಡ್ಡ ಸಮಸ್ಯೆಯಾದ ಚುನಾವಣಾ ವ್ಯವಸ್ಥೆಯನ್ನು ಸರಿಪಡಿಸಲು ಅಂತೂ ಮುಂದಾಗಿದ್ದಾರೆ.

ಅಮೆರಿಕದಲ್ಲಿ ಕಳೆದ ವರ್ಷ ನಡೆದ ಅಧ್ಯಕ್ಷೀಯ ಚುನಾವಣಾ ಪ್ರಚಾರದ ಉದ್ದಕ್ಕೂ ಟ್ರಂಪ್ ಅವರು ಅಲ್ಲಿನ ಚುನಾವಣಾ ವ್ಯವಸ್ಥೆಯ ಬಗ್ಗೆ ದೂರುತ್ತಿದ್ದರು. ಈಗ ಅದನ್ನು ಸರಿಪಡಿಸುವ ಒಂದಿಷ್ಟು ಕೆಲಸಕ್ಕೆ ಮುಂದಾಗಲು ತೀರ್ಮಾನಿಸಿದ್ದಾರೆ. ಅಮೆರಿಕವು ತನ್ನದು ಜಗತ್ತಿನ ಅತ್ಯಂತ ಹಳೆಯ ಪ್ರಜಾತಂತ್ರ ವ್ಯವಸ್ಥೆ ಎಂದು ಹೇಳಿಕೊಳ್ಳುತ್ತದೆಯಾದರೂ ಅದು ತನ್ನ ಚುನಾವಣಾ ವ್ಯವಸ್ಥೆಯನ್ನು ಯಾವತ್ತೂ ಸುಗಮಗೊಳಿಸಿಲ್ಲ. ವಾಸ್ತವದಲ್ಲಿ ಅಲ್ಲಿನ ಚುನಾವಣಾ ವ್ಯವಸ್ಥೆಯು ಬಹಳ ಕೆಟ್ಟದ್ದಾಗಿದೆ!

ಅಮೆರಿಕದ ಚುನಾವಣಾ ವ್ಯವಸ್ಥೆಯನ್ನು ಒಂದು ಒಪ್ಪಿತ ಪ್ರಮಾಣಕ್ಕೆ ತರುವ ಕೆಲಸ ಆಗಿಲ್ಲದಿರುವುದು ಅಲ್ಲಿನ ದೊಡ್ಡ ಲೋಪಗಳಲ್ಲಿ ಒಂದು. ದೇಶದೆಲ್ಲೆಡೆ ಅನ್ವಯವಾಗುವ ಚುನಾವಣಾ ಕಾನೂನನ್ನು ಜಾರಿಗೆ ತರುವ ಅಧಿಕಾರ ಇರುವ ಚುನಾವಣಾ ಪ್ರಾಧಿಕಾರವು ಅಮೆರಿಕದಲ್ಲಿ ಇಲ್ಲ. ಭಾರತದಲ್ಲಿ ಮತದಾನದ ಹಕ್ಕು ಇರುವುದು ಭಾರತದ ಪ್ರಜೆಗಳಿಗೆ ಮಾತ್ರ. ಆದರೆ ಅಮೆರಿಕದಲ್ಲಿ ಮತದಾನದ ಹಕ್ಕನ್ನು ಪ್ರಜೆಗಳಿಗೆ ಮಾತ್ರ ಸೀಮಿತಗೊಳಿಸುವ ಕೆಲಸ ಆಗಿಲ್ಲ.

ಟ್ರಂಪ್ ಅವರು ಈಗ, ಅಮೆರಿಕದ ಪ್ರಜೆಗಳಿಗೆ ಮಾತ್ರವೇ ಮತದಾನದ ಹಕ್ಕು ಇದೆ ಎಂಬ ಆದೇಶ ಹೊರಡಿಸಿದ್ದಾರೆ. ಅಂದರೆ, ಇಷ್ಟು ವರ್ಷ ಪ್ರಜೆಗಳಲ್ಲದವರೂ ಅಮೆರಿಕದ ಚುನಾವಣೆಗಳಲ್ಲಿ ಮತ ಚಲಾಯಿಸುತ್ತಿದ್ದರು! ಅಂಚೆ ಮತಪತ್ರಗಳನ್ನು ಎಣಿಸುವುದಕ್ಕೆ ಸಂಬಂಧಿಸಿದ ನಿಯಮಗಳಲ್ಲಿಯೂ ಅವರು ಬದಲಾವಣೆಗಳಿಗೆ ಆದೇಶ ಮಾಡಿದ್ದಾರೆ. 'ನಕಲಿ ಚುನಾವಣೆಗಳ, ಕೆಟ್ಟ ಚುನಾವಣೆಗಳ ಕಾರಣದಿಂದಾಗಿ ಅಮೆರಿಕ ರೋಗಗ್ರಸ್ತವಾಗಿದೆ; ನಾವು ಅದನ್ನು ಸರಿಪಡಿಸಲು ಹೊರಟಿದ್ದೇವೆ' ಎಂದು ಟ್ರಂಪ್ ಹೇಳಿದ್ದಾರೆ. ಹೀಗೆ ಹೇಳುವಾಗ ಅವರು ಭಾರತದಲ್ಲಿ ಜಾರಿಯಲ್ಲಿರುವ ಮತದಾರರನ್ನು ಗುರುತಿಸುವ ವ್ಯವಸ್ಥೆ, ಬಯೊಮೆಟ್ರಿಕ್ ದತ್ತಾಂಶದ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ.

ಭಾರತದಲ್ಲಿ ಇಡೀ ದೇಶಕ್ಕೆ ಅನ್ವಯವಾಗುವ ಚುನಾವಣಾ ಕಾನೂನು ಇದೆ. ರಾಷ್ಟ್ರ ಮಟ್ಟದಲ್ಲಿ ಚುನಾವಣಾ ಆಯೋಗ ಇದೆ. ಚುನಾವಣೆಗಳ ಮೇಲ್ವಿಚಾರಣೆ, ಅದಕ್ಕೆ ಸಂಬಂಧಿಸಿದ ನಿರ್ದೇಶನ ನೀಡುವುದು ಹಾಗೂ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಸಾಂವಿಧಾನಿಕ ಅಧಿಕಾರವು ಆಯೋಗಕ್ಕೆ ಇದೆ. ನಮ್ಮಲ್ಲಿನ ಕಾನೂನಿನ ಪ್ರಕಾರ ದೇಶದ ಪ್ರಜೆಗಳಿಗೆ ಮಾತ್ರ ಮತದಾನದ ಹಕ್ಕು ಇದೆ. ಈ ಕಾನೂನೇ ಸರಿ. ಇದರ ಜೊತೆ, ನಮ್ಮಲ್ಲಿ ಎಲ್ಲ ಮತಗಟ್ಟೆಗಳಲ್ಲಿಯೂ ಬಳಕೆ ಮಾಡಲು ನಿಗದಿತ ಪ್ರಮಾಣವನ್ನು ಪಾಲಿಸುವ ಮತಯಂತ್ರದ ವ್ಯವಸ್ಥೆ ಇದೆ. ಈ ಸರಳ ಯಂತ್ರವನ್ನು ರೂಪಿಸಿರುವುದು ಭಾರತದ ಎಂಜಿನಿಯರ್‌ಗಳು, ಇದನ್ನು ಬಳಸಿ ಮತದಾನ ಮಾಡು ವುದನ್ನು ಶಿಕ್ಷಿತರಲ್ಲದವರೂ ಅರ್ಥ ಮಾಡಿಕೊಳ್ಳಬಲ್ಲರು. ನಮ್ಮಲ್ಲಿ ಮತ ಎಣಿಕೆ ಶುರುವಾದ ನಂತರ, ಬಹುತೇಕ ಲೋಕಸಭಾ ಕ್ಷೇತ್ರಗಳ ಫಲಿತಾಂಶವು ಹತ್ತರಿಂದ ಹನ್ನೆರಡು ತಾಸುಗಳಲ್ಲಿ ಗೊತ್ತಾಗುತ್ತದೆ.

ಅಮೆರಿಕದ ಇಡೀ ಚುನಾವಣಾ ವ್ಯವಸ್ಥೆ ಗೊಂದಲಮಯವಾಗಿದೆ. ಅಲ್ಲಿ ರಾಜ್ಯದಿಂದ ರಾಜ್ಯಕ್ಕೆ ಚುನಾವಣಾ ಕಾನೂನು ಭಿನ್ನವಾಗಿದೆ. ಅದೇ ರೀತಿ, ಮತದಾನದ ವಿಧಾನ ಹಾಗೂ ಮತ ಎಣಿಕೆ ವಿಧಾನ ಬದಲಾಗುತ್ತದೆ. ಪ್ರತಿ ಕೌಂಟಿಯೂ ತನ್ನದೇ ಆದ ಚುನಾವಣಾ ಕಾನೂನು, ಮತಗಳನ್ನು ದಾಖಲು ಮಾಡುವ ಬಗೆ ಹಾಗೂ ಅವುಗಳನ್ನು ಎಣಿಸುವ ವಿಧಾನವನ್ನು ಹೊಂದಿದೆ. ಕೆಲವು ಕೌಂಟಿಗಳು ಮತಪತ್ರಗಳನ್ನು ನೀಡಿ, ತಮ್ಮ ಮತ ಯಾರಿಗೆ ಎಂಬುದನ್ನು ತಿಳಿಸಲು ಶಾಯಿ ನೀಡುತ್ತವೆ. ಅವು ಚುನಾವಣಾ ಚಿಹ್ನೆಯನ್ನು ಬಳಸುವುದಿಲ್ಲ. ಕೆಲವು ಕೌಂಟಿಗಳು ಮತದಾರರಿಗೆ ಮತಪತ್ರಗಳನ್ನು ನೀಡಿ ತಮ್ಮ ಮತ ಯಾರಿಗೆ ಎಂಬುದನ್ನು ತಿಳಿಸಲು ಒಂದು ಉಪಕರಣವನ್ನು ನೀಡುತ್ತವೆ.

2000ನೇ ಇಸವಿಯವರೆಗೆ ಹಲವು ರಾಜ್ಯಗಳಲ್ಲಿ ಮತದಾರರು ಮತಪತ್ರಗಳಲ್ಲಿ ತಮ್ಮ ಆಯ್ಕೆಯ ಅಭ್ಯರ್ಥಿಯ ಹೆಸರಿನ ಮುಂದೆ ಒಂದು ರಂಧ್ರ ಮಾಡಬೇಕಿತ್ತು. ಒಂದು ಕೌಂಟಿಯಲ್ಲಿ ಮತದಾರರು ಎರಡು ಅಡಿ ಉದ್ದದ ಸನ್ನೆಗೋಲು ಬಳಸಿ ರಂಧ್ರ ಮಾಡಬೇಕಿತ್ತು! ಹಲವು ಸಂದರ್ಭಗಳಲ್ಲಿ ಈ ಕೆಲಸ ಬಹಳ ಸಂಕೀರ್ಣವಾಗಿರುತ್ತಿತ್ತು. ಉದಾಹರಣೆಗೆ, ರಂಧ್ರ ಮಾಡುವ ವಿಧಾನದ ಕುರಿತಾಗಿ ಬೇರೆ ಬೇರೆ ರಾಜ್ಯಗಳು ತೀರಾ ಈಚಿನವರೆಗೆ ಬೇರೆ ಬೇರೆ ನಿಯಮ ಹೊಂದಿದ್ದವು. ಟೆಕ್ಸಾಸ್‌ನಲ್ಲಿ ಮತಪತ್ರವನ್ನು ಎಣಿಕೆಗೆ ಪರಿಗಣಿಸಬೇಕು ಎಂದಾದರೆ ಪೂರ್ತಿಯಾಗಿ ರಂಧ್ರ ಮಾಡಬೇಕಿತ್ತು. ಮತದಾರ ಕಡಿಮೆ ಬಲ ಪ್ರಯೋಗಿಸಿ, ಮತಪತ್ರದ ಮೇಲೆ ಅರ್ಧ ರಂಧ್ರ ಅಥವಾ ಸಣ್ಣ ಕುಳಿಯೊಂದನ್ನು ಮಾತ್ರ ಮಾಡಿದ್ದರೆ ಆ ಮತಪತ್ರವನ್ನು ತ್ಯಾಜ್ಯದ ಬುಟ್ಟಿಗೆ ಹಾಕಲಾಗುತ್ತಿತ್ತು! ಫ್ಲಾರಿಡಾದಲ್ಲಿ ಕಾನೂನು ಕಠಿಣವಾಗಿರಲಿಲ್ಲ. ಮತದಾರರು ಅರ್ಧಚಂದ್ರದ ರೂಪದಲ್ಲಿ ರಂಧ್ರ ಮಾಡಿದರೆ ಅಥವಾ ಒಂದು ಸಣ್ಣ ಕುಳಿಯಂತೆ ಮಾಡಿದರೆ ಸಾಕಿತ್ತು. ಅದನ್ನು ಮಾನ್ಯವಾದ ಮತ ಎಂದು ಪರಿಗಣಿಸಲಾಗುತ್ತಿತ್ತು. ಸಣ್ಣ ಕುಳಿಯ ಮೂಲಕ ಬೆಳಕು ಹರಿಯುತ್ತದೆ ಎಂದಾದರೆ ಆ ಮತ ಮಾನ್ಯ ಎಂದು ಕಾನೂನು ಹೇಳುತ್ತಿತ್ತು. ಇದರ ಪರಿಣಾಮವಾಗಿ ಅಲ್ ಗೋರ್ ಮತ್ತು ಬುಷ್ ಬೆಂಬಲಿಗರ ನಡುವೆ 2000ನೇ ಅಧ್ಯಕ್ಷೀಯ ಚುನಾವಣೆಯಲ್ಲಿ ದೊಡ್ಡ ಗಲಾಟೆ ನಡೆದಿತ್ತು. ವಿವಾದ ಕೋರ್ಟ್ ಮೆಟ್ಟಿಲೇರಿತ್ತು, ಪ್ರತಿ ಮತಪತ್ರವನ್ನೂ ಬೆಳಕಿಗೆ ಹಿಡಿಯಬೇಕು, ಬೆಳಕು ಅಲ್ಲಿರುವ ರಂಧ್ರದ ಮೂಲಕ ಪ್ರವೇಶಿಸುತ್ತದೆ ಎಂದಾದರೆ ಆ ಮತವನ್ನು ಮಾನ್ಯ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು. ಈ ಪ್ರಕ್ರಿಯೆ ಪೂರ್ಣಗೊಳಿಸಲು ಚುನಾವಣಾ ಅಧಿಕಾರಿಗಳಿಗೆ ಹಲವು ದಿನಗಳೇ ಬೇಕಾಗಿದ್ದವು!

ಫ್ಲಾರಿಡಾದಲ್ಲಿ ಹೀಗಾದ ನಂತರ ಅಮೆರಿಕದ ಕಾಂಗ್ರೆಸ್, 'ಹೆಲ್ಪ್ ಅಮೆರಿಕ ವೋಟ್ ಆ್ಯಕ್ಟ್' ಹೆಸರಿನ ಕಾನೂನು ರೂಪಿಸಿತು. ಮತದಾನದ ವ್ಯವಸ್ಥೆಯನ್ನು ಉನ್ನತೀಕರಿಸಲು, ಚುನಾವಣಾ ನೆರವು ಆಯೋಗವನ್ನು ರಚಿಸಲು ಈ ಕಾನೂನು ತರಲಾಯಿತು. ಆದರೆ ಈ ಆಯೋಗಕ್ಕೆ ತನ್ನ ನಿರ್ಧಾರಗಳನ್ನು ಜಾರಿಗೆ ತರಲು ಅಧಿಕಾರವಿಲ್ಲ, ಅದು ಸಲಹೆ ನೀಡುವ ಸಂಸ್ಥೆ ಮಾತ್ರ.

ಹೀಗಾಗಿ, ಅಲ್ಲಿನ ಪ್ರತಿ ರಾಜ್ಯವೂ ಮತದಾನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈಗಲೂ ಪ್ರತ್ಯೇಕ ನಿಯಮ ಹೊಂದಿದೆ. ಒಂದು ಅಂದಾಜಿನ ಪ್ರಕಾರ, ಶೇ 70ರಷ್ಟು ಮತದಾರರು ತಮ್ಮ ಆಯ್ಕೆಯನ್ನು ಕೈಯಿಂದ ಗುರುತಿಸುತ್ತಾರೆ, ಶೇ 23ರಷ್ಟು ಮಂದಿ ಯಂತ್ರ ಬಳಸುತ್ತಾರೆ, ಶೇ 7ರಷ್ಟು ಮಂದಿ ಎಲೆಕ್ಟ್ರಾನಿಕ್ ಮತಯಂತ್ರ ಬಳಕೆ ಮಾಡುತ್ತಾರೆ. ಅಂಚೆ ಮತಪತ್ರ ಹಾಗೂ ಆ ಮತಪತ್ರಗಳು ಎಣಿಕೆ ಕೇಂದ್ರಕ್ಕೆ ಯಾವಾಗ ತಲುಪಬೇಕು ಎಂಬ ವಿಚಾರದಲ್ಲಿ ರಾಜ್ಯಗಳು ಭಿನ್ನ ನಿಯಮಗಳನ್ನು ಹೊಂದಿವೆ.

ಅಮೆರಿಕದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ನಡುವೆ ಇರುವ ಸಮಯದ ವ್ಯತ್ಯಾಸವು ಇನ್ನೊಂದು ಲೋಪ. ನ್ಯೂಯಾರ್ಕ್ ಮತ್ತು ನ್ಯೂಜೆರ್ಸಿಯಲ್ಲಿ ಮತದಾನ ಮುಗಿದು ಅಲ್ಲಿ ಟಿ.ವಿ. ವಾಹಿನಿಗಳು ಮತದಾನೋತ್ತರ ಸಮೀಕ್ಷೆಗಳನ್ನು ಪ್ರಸಾರ ಮಾಡಲು ಆರಂಭಿಸುವ ಹೊತ್ತಿನಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಮತದಾನ ಪೂರ್ಣಗೊಳ್ಳಲು ಇನ್ನೂ ಐದು ತಾಸು ಬಾಕಿ ಇರುತ್ತದೆ. ಇದು ಮುಕ್ತ ಮತ್ತು ನ್ಯಾಯಸಮ್ಮತ ಮತದಾನದ ಪರಿಕಲ್ಪನೆಗೆ ಧಕ್ಕೆ ತರುತ್ತದೆ.

ಭಾರತದಲ್ಲಿ ಲೋಕಸಭಾ ಚುನಾವಣೆಯ ಫಲಿತಾಂಶವು ಮತ ಎಣಿಕೆಯ ದಿನ ಸಂಜೆಯ ಹೊತ್ತಿಗೆ ಬಹುತೇಕ ಸ್ಪಷ್ಟವಾಗಿರುತ್ತದೆ. ಆದರೆ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಮತ ಎಣಿಕೆ ಶುರುವಾಗಿ ಹಲವು ದಿನಗಳು ಕಳೆದರೂ ಫಲಿತಾಂಶ ಸ್ಪಷ್ಟವಾಗಿರುವುದಿಲ್ಲ.

ಈ ದೀರ್ಘ ಪ್ರಕ್ರಿಯೆಯಲ್ಲಿ ಗೊಂದಲಗಳು ಸಹಜವಾಗಿ ಆಗುತ್ತಿರುತ್ತವೆ. 2024ರ ನವೆಂಬರ್‌ನಲ್ಲಿ ನಡೆದ ಮತದಾನದಲ್ಲಿ ವಿಸ್ಕಾನ್ಸಿನ್‌ನ ಕೌಂಟಿಯೊಂದರಲ್ಲಿನ 193 ಮತಗಳ ಎಣಿಕೆಯು ಆಗೇ ಇಲ್ಲ ಎಂಬುದು ಅಧಿಕಾರಿಗಳಿಗೆ ಡಿಸೆಂಬರ್‌ನಲ್ಲಿ ಗೊತ್ತಾಯಿತು! ಇದು ಫಲಿತಾಂಶವನ್ನು ಬದಲು ಮಾಡುತ್ತಿರಲಿಲ್ಲವಾದರೂ, ಈಗಿನ ಸಂದರ್ಭದಲ್ಲಿ ಅಮೆರಿಕದಲ್ಲಿನ ಚುನಾವಣಾ ವ್ಯವಸ್ಥೆಯು ಅದೆಷ್ಟು ದೋಷಗಳಿಂದ ಕೂಡಿದೆ ಎಂಬುದನ್ನು ತೋರಿಸಿಕೊಟ್ಟಿತು. ಟ್ರಂಪ್ ಅವರು ಹೊರಡಿಸಿರುವ ಹೊಸ ಆದೇಶವು ಚುನಾವಣೆಯ ದಿನದ ನಂತರ ಬರುವ ಅಂಚೆ ಮತಪತ್ರಗಳನ್ನು ಪರಿಗಣಿಸಲು ಆಗುವುದಿಲ್ಲ ಎಂದು ಹೇಳುತ್ತದೆ.

ಚುನಾವಣೆ ಹಾಗೂ ಪ್ರಜಾತಾಂತ್ರಿಕ ಪ್ರಕ್ರಿಯೆಗಳ ವಿಚಾರಕ್ಕೆ ಬರುವುದಾದರೆ, ವಿಶ್ವದ ಅತಿದೊಡ್ಡ ಪ್ರಜಾತಂತ್ರ ರಾಷ್ಟ್ರವಾದ ಭಾರತವು ಮೊದಲ ದರ್ಜೆಯಲ್ಲಿದೆ. ಅಮೆರಿಕವು ಬಹಳ ಹಿಂದೆ ಉಳಿದಿದೆ. ಅಮೆರಿಕವು ಭಾರತದ ಸಾಲಿಗೆ ಬಂದುನಿಲ್ಲಲು ಬಹಳಷ್ಟು ಪ್ರಯತ್ನ ಮಾಡಬೇಕಿದೆ!

ಚುರುಮುರಿ

ಸೂಕ್ತ ಸಮಯ!

• ಬಿ.ಎನ್.ಮಲ್ಲೇಶ್

'ಲೇ ತೆಪರ, ಏನಲೆ ಇದೂ... ಎರಡೂ ಪಕ್ಷಗಳ ಫೈರ್‌ಬ್ರ್ಯಾಂಡ್‌ಗಳು ಹಿಂಗೆ ಢಮಾರ್ ಆದ್ವಲ್ಲೋ? ಸಿಕ್ಸರ್ ಬಾರಿಸ್ತಾರೆ ಅಂದ್ರೆ ಹಿಟ್ ವಿಕೆಟ್ ಆಗೋದ್ರಲ್ಲೋ' ಹರಟೆಕಟ್ಟೆಯಲ್ಲಿ ದುಬ್ಬೀರ ಬೇಸರ ವ್ಯಕ್ತಪಡಿಸಿದ.

'ನಮ್ ವಿಜಾಪುರದ ಹುಲಿ ಢಮಾರೇನಾಗಿಲ್ಲ. ಇನ್ನೂ ರೊಚ್ಚಿಗೇಳ್ತತಿ ನೋಡ್ತಿರು' ಎಂದಳು ಮಂಜಮ್ಮ.

'ನಮ್ ಹನಿಟ್ರ್ಯಾಪ್ ಫೈರ್‌ಬ್ರ್ಯಾಂಡ್ ಹುಲಿನೂ ಅಷ್ಟೇ, ಸೂಕ್ತ ಸಮಯಕ್ಕಾಗಿ ಕಾಯ್ತಾ ಐತಿ' ಎಂದ ಗುಡ್ಡೆ.

'ಅಲ್ಲ, ಈ ಸೂಕ್ತ ಸಮಯ ಅಂದ್ರೇನು?' ಕೊಟ್ರೇಶಿ ಕೊಕ್ಕೆ.

'ಅಂದ್ರೆ, ಹೇಳೋದಿಕ್ಕೂ ಕೇಳೋದಿಕ್ಕೂ ಇದು ಸಮಯ ಅಲ್ಲ ಅಂತ' ತೆಪರೇಸಿ ನಕ್ಕ.

'ಈ ಹನಿಟ್ರ್ಯಾಪ್ ವಿಚಾರದಲ್ಲಿ ನಮ್ ಸಿಎಂ ಸಾಹೇಬ್ರು ಪಿಟಿಕ್ ಅಂದಿಲ್ಲ ಯಾಕೆ?'

'ಅವರಿಗಿನ್ನೂ ಸೂಕ್ತ ಸಮಯ ಬಂದಿಲ್ಲ ಅಂತ ಕಾಣುತ್ತೆ'.

'ಅಲ್ಲಿ ಡೆಲ್ಲೀಲಿ ಕುಮಾರಣ್ಣ, ಜಾರಕಿಹೊಳಿ ಸಾಹೇಬ್ರು ಭೇಟಿ ಆಗಿದಾರೆ?'

'ಅವರಿಗೆ ಸೂಕ್ತ ಸಮಯ ಬಂದಿದೆ ಅನ್ಸುತ್ತೆ'.

'ಹೋಗ್ಲಿ ಹಬ್ಬ ಜೋರಾ? ನಮ್ 'ನಮೋ' ಸಾಹೇಬ್ರು ಏನೋ ಕಿಟ್ ಕೊಡ್ತದಾರಂತೆ?'

'ಅವರು ಸೂಕ್ತ ಸಮಯ ಸರಿಯಾಗಿ ಬಳಕೆ ಮಾಡ್ಕೋತಿದಾರೆ'.

'ಲೇಯ್, ಎಲ್ಲಕ್ಕೂ ಅದ್ನೇ ಹೇಳ್ತಿಯಲ್ಲಲೆ. ಹಬ್ಬಕ್ಕೆ ಊರಿಗೋಗೋರಿಗೆ ಬಸ್‌ಚಾರ್ಜು ಸಿಕ್ಕಾಪಟ್ಟೆ ಏರ್ಸಿದಾರಂತೆ, ನಿಮ್ ರಾಜಕಾರಣಿಗಳಿಗೆ ಹೇಳಿ ಒಂದೆರಡು ರೈಲು ಬಿಡ್ಸೋದಲ್ವಾ?' ಕೊಟ್ರೇಶಿ ಗರಂ ಆದ.

'ಅದಕ್ಕೆ ಸೂಕ್ತ ಸಮಯ ಏನೂ ಬ್ಯಾಡ, ನಮ್ ರಾಜಕಾರಣಿಗಳು ಎಲ್ಲ ಟೈಮಲ್ಲೂ ರೈಲು ಬಿಡ್ತಾನೇ ಅದಾರೆ' ಗುಡ್ಡೆ ನಕ್ಕ.

'ಲೇ ಗುಡ್ಡೆ, ನಮ್ ಪಕ್ಷದೋರ ಬಗ್ಗೆ ಮಾತಾಡಿದ್ರೆ ಸರಿ ಇರಲ್ಲ ನೋಡು, ಮೊದ್ಲು ನನ್ ಹೋಟ್ಲು ಬಾಕಿ ತೀರ್ಸು' ಮಂಜಮ್ಮಗೂ ಸಿಟ್ಟು ಬಂತು.

'ನಿನ್ ಜುಜುಬಿ ಚಾ ಬಾಕಿ ತಾನೆ? ಸೂಕ್ತ ಸಮಯ ಬಂದಾಗ ತೀರಿಸ್ತೀನಿ ಬಿಡು' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಸಂಭ್ರಮದ ಜೊತೆಗಿರಲಿ ಸಂವೇದನೆ

ಹಬ್ಬಗಳ ಮೂಲ ಉದ್ದೇಶವನ್ನು ಮರೆಯದೆ, ಪ್ರಕೃತಿಯ ಜೊತೆಗಿನ ಸಾಮರಸ್ಯದ ಸಂಕೇತವಾಗಿ ನಾವು ಅವುಗಳನ್ನು ಆಚರಿಸಬೇಕು

• ಸದಾಶಿವ ಸೊರಟೂರು

ನಮ್ಮ ಮನೆಯ ತಿರುವಿನಲ್ಲಿ ಒಂದಷ್ಟು ಬೇವಿನ ಮರಗಳಿವೆ. ಹೋದ ವರ್ಷ ಯುಗಾದಿಯ ದಿನ ಆ ಮರಗಳಲ್ಲಿ ಒಂದೇ ಒಂದು ಎಲೆಯೂ ಉಳಿಯದಂತೆ ಜನ ಕಿತ್ತುಕೊಂಡು ಹೋಗಿದ್ದರು. ಬಹುಶಃ ಅದರ ಹಿಂದಿನ ವರ್ಷವೂ ಹಾಗೇ ಮಾಡಿದ್ದರು. ಊರು ಹಬ್ಬವನ್ನು ಆಚರಿಸುತ್ತಿದ್ದರೆ ಬೇವಿನ ಮರಗಳು ಮಾತ್ರ ತಮ್ಮ ಎಲ್ಲಾ ಎಲೆಗಳನ್ನು, ಸಣ್ಣ ಪುಟ್ಟ ಕೊಂಬೆಗಳನ್ನು ಕಳೆದುಕೊಂಡು ನಿಂತಿದ್ದವು. ಹಬ್ಬ ಕೊಟ್ಟ ಶಾಪದಂತೆ. ಈಗಲೂ ಎಲೆಗಳನ್ನು ಬಿಟ್ಟಿವೆ. ಆದರೆ ಮೊದಲಿನಷ್ಟು ಸೊಂಪಾಗಿಲ್ಲ. ಯುಗಾದಿಯೂ ಮುಂದಿದೆ.

ಮರವೊಂದು ಶೇಕಡ 70ಕ್ಕಿಂತ ಹೆಚ್ಚು ಎಲೆಗಳನ್ನು ಕಳೆದುಕೊಂಡರೆ, ಆ ಮರ ಮೂರ್ನಾಲ್ಕು ವರ್ಷಗಳ ವರೆಗೆ ಪುನಃ ಸಮರ್ಥವಾಗಿ ಬೆಳೆಯಲು ಸಾಧ್ಯವಿಲ್ಲ. ಕರ್ನಾಟಕದ ಕೆಲ ಗ್ರಾಮಗಳಲ್ಲಿ, ಯುಗಾದಿ ಹಬ್ಬದ ನಂತರ ಕೆಲವು ಬೇವಿನ ಮರಗಳು ರೋಗಗಳಿಗೆ ತುತ್ತಾದ ಉದಾಹರಣೆಗಳಿವೆ ಎಂದು ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು ವರದಿ ಮಾಡಿವೆ.

ಹಬ್ಬ ಎನ್ನುವುದು ಬದುಕಿನ ಸಂಭ್ರಮದ ಆಚರಣೆ. ಈ ಸಂಭ್ರಮ ತನ್ನ ಮಹತ್ವ ಕಳೆದುಕೊಂಡು ಯಾವಾಗ ಶೋಕಿಗೆ ತಿರುಗಿತೋ ಅದರಿಂದ ಉಂಟಾಗುವ ಪರಿಣಾಮಗಳು ಢಾಳಾಗಿ ಕಾಣಿಸತೊಡಗಿವೆ.

ಬೇವು, ಬೆಲ್ಲ ಎಂಬುದು ಒಂದು ರೂಪಕ. ಸಿಹಿ ಕಹಿ ಎರಡೂ ಇರಬೇಕು ಅನ್ನುವುದರ ಸೂಚಕ. ಅದೊಂದು ಅರಿವು. ಬೇವು ಬೆಲ್ಲ ತಿಂದೇ ನಾವು ಸುಖ ದುಃಖವನ್ನು ಸಮಾನವಾಗಿ ಸ್ವೀಕರಿಸಲು ಅರ್ಹತೆ ಪಡೆಯುತ್ತೇವೆಯೇ? ತಿನ್ನದೇ ಇರುವವರು ಸುಖ ದುಃಖದ ಸಮತೋಲನ ಸಾಧಿಸಲು ಸೋತು ಹೋಗುವರೇ? ತಿಂದೂ ಸೋಲಬಹುದು, ತಿನ್ನದೆಯೂ ಗೆಲ್ಲಬಹುದು.

ಇತ್ತೀಚೆಗೆ ಪ್ರತಿ ಹಬ್ಬವೂ ಪ್ರಕೃತಿಯ ಮೇಲೆ ನಡೆಯುತ್ತಿರುವ ದಾಳಿಯಂತೆಯೇ ಭಾಸವಾಗುತ್ತದೆ. ಹಬ್ಬಗಳನ್ನು ಪ್ರಕೃತಿಗೆ ಪೂರಕವಾಗಿಯೇ ಆಚರಿಸಿಕೊಂಡು ಬಂದ ನೆಲ ಇದು. ಈಗ ಪರಿಸರವನ್ನು ಬಲಿ ಕೊಟ್ಟು ಹಬ್ಬಗಳನ್ನು ಸಂಭ್ರಮಿಸುತ್ತಿರುವ ಪರಿ ಅಚ್ಚರಿಯನ್ನುಂಟು ಮಾಡುತ್ತದೆ.

ಗಣೇಶ ಹಬ್ಬ ಬಂದ ಕೂಡಲೇ ನದಿಗಳು, ಕೆರೆಗಳ ಬಗ್ಗೆ ಪ್ರಜ್ಞಾವಂತರಲ್ಲಿ ಒಂದು ರೀತಿಯ ಆತಂಕ ಸೃಷ್ಟಿಯಾಗುತ್ತದೆ. ದೀಪಾವಳಿ ಮುಗಿದ ದಿನ ಊರು ಕಸದಬುಟ್ಟಿಯಂತಾಗಿ, ಗಾಳಿಯಲ್ಲಿ ಪಟಾಕಿಯ ಘಮಟು ಉಸಿರುಗಟ್ಟಿಸುತ್ತದೆ. ಗಣೇಶ ಮೂರ್ತಿಯ ಮೆರವಣಿಗೆಯ ಡಿ.ಜೆ ಸದ್ದು ಹೃದಯಗಳನ್ನು ಅಲುಗಾಡಿಸುತ್ತದೆ. ಕಂದಮ್ಮಗಳನ್ನು ಬೆಚ್ಚಿಬೀಳಿಸುತ್ತದೆ. ಹೋಳಿಯ ಕಾರಣಕ್ಕೆ ನೀರಿಗೆ ಹೋಗಿ ಸೇರುವ ವಿಷಯುಕ್ತ ರಾಸಾಯನಿಕಗಳೆಷ್ಟೋ.

ಭಾರತದಲ್ಲಿ ವರ್ಷಕ್ಕೆ 10 ಲಕ್ಷ ಜಾತ್ರೆಗಳಾಗುತ್ತವೆ ಎಂಬ ಅಂದಾಜಿದೆ. ಅಲ್ಲಿ ದೊಡ್ಡ ಪ್ರಮಾಣದ ಜನಸಂದಣಿ ಸೇರುತ್ತದೆ. ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ತಟ್ಟೆಗಳು, ಕಪ್‌ಗಳು ಮತ್ತು ಆಹಾರ ತ್ಯಾಜ್ಯವು ಸುತ್ತಮುತ್ತಲಿನ ಪ್ರದೇಶದಲ್ಲಿ ಚೆಲ್ಲಾಪಿಲ್ಲಿಯಾಗುತ್ತವೆ. ಮಲ ಮೂತ್ರದ ಸರಿಯಾದ ವಿಲೇವಾರಿಯಾಗದೆ ಇಡೀ ವಾತಾವರಣ ಕೆಟ್ಟು ಹೋಗುತ್ತದೆ.

ಹಬ್ಬಗಳು ತಮ್ಮ ಮಹತ್ವ ಕಳೆದುಕೊಂಡು ತೋರ್ಪಡಿಕೆಯ ಚಟುವಟಿಕೆಗಳಾಗುತ್ತಿವೆ. ಈಗಿನ ಬಹುತೇಕ ಹಬ್ಬಗಳು ಸಾಮಾಜಿಕ ಜಾಲತಾಣಕ್ಕಾಗಿ ಆಗುತ್ತಿವೆ ಮತ್ತು ಕೆಲವೊಮ್ಮೆ ಸಾಮಾಜಿಕ ಜಾಲತಾಣದಲ್ಲೇ ಆಗುತ್ತಿವೆ. ಮೊನ್ನೆ ಗೆಳತಿಯೊಬ್ಬಳು ಬಣ್ಣ ತಂದು ರೂಮಿನಲ್ಲಿ ಬಳಿದುಕೊಂಡು, ರೀಲ್ಸ್ ಮಾಡಿ ಹೋಳಿ ಹಬ್ಬದ ಶುಭಾಶಯ ಕೋರಿದ್ದಳು. ಸ್ಟೇಟಸ್‌ಗೆ ಹಾಕಲೆಂದೇ ಜನ ಬಗೆಬಗೆಯ ಬಟ್ಟೆ ಖರೀದಿಸುತ್ತಾರೇನೋ ತಿನಿಸುಗಳನ್ನು ತಯಾರಿಸುತ್ತಾರೇನೋ ಅನ್ನಿಸುತ್ತದೆ. ಇನ್ನು ಕೆಲವರಿಗೆ ಹಬ್ಬಗಳು ತಮ್ಮ ಅದ್ದೂರಿತನದ ತೋರ್ಪಡಿಕೆಯ ಚಟುವಟಿಕೆಗಳಾಗಿ ಬದಲಾಗಿವೆ. ಇದನ್ನು ನೋಡಿಯೇ ಸಾಮಾನ್ಯ ಜನ ತಾವು ಹಬ್ಬ ಮಾಡುವ ಪರಿಯನ್ನು ಬದಲಿಸಿಕೊಳ್ಳುತ್ತಿರುವುದು ಸೋಜಿಗ.

ಹಬ್ಬಗಳ ಈ ರೂಪಾಂತರ ಬರೀ ಪರಿಸರದ ಮೇಲಲ್ಲ, ಮನುಷ್ಯರ ಮನಸ್ಸಿನ ಮೇಲೂ ಗಾಢವಾದ ಪರಿಣಾಮ ಬೀರುತ್ತಿರುತ್ತದೆ. ಹಿಂದೆ ಹಬ್ಬಗಳು ಸಮುದಾಯವನ್ನು ಒಗ್ಗೂಡಿಸುವ, ಪರಸ್ಪರ ಪ್ರೀತಿ, ವಿಶ್ವಾಸವನ್ನು ಬೆಳೆಸುವ ಸಾಧನಗಳಾಗಿದ್ದವು. ಈಗ ಅವು ಸ್ಪರ್ಧೆಯ ಕೇಂದ್ರಗಳಾಗಿ, ತಮ್ಮ ಸಂಪತ್ತು, ಸ್ಥಾನಮಾನವನ್ನು ಪ್ರದರ್ಶಿಸುವ ವೇದಿಕೆಗಳಾಗಿ ಮಾರ್ಪಟ್ಟಿವೆ. ಒಬ್ಬರು ನಡೆಸುವ ಅದ್ದೂರಿ ಆಚರಣೆಯು ಇನ್ನೊಬ್ಬರಲ್ಲಿ ಅಂತಹದೇ ಅದ್ದೂರಿ ಆಚರಣೆ ನಡೆಸಬೇಕಾದ ಒತ್ತಡವನ್ನು ಉಂಟು ಮಾಡುತ್ತದೆ. ಈ ಹುಚ್ಚು ಸ್ಪರ್ಧೆಯಲ್ಲಿ ಹಬ್ಬದ ಮೂಲ ಉದ್ದೇಶವೇ ಮಸುಕಾಗುತ್ತಿದೆ.

ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ ಸಂಪ್ರದಾಯವನ್ನು ನಾವು ಮರೆಯುತ್ತಿದ್ದೇವೆ. ಬೇವಿನ ಮರಗಳ ಉದಾಹರಣೆಯೇ ಇದಕ್ಕೆ ಸಾಕ್ಷಿ. ನಮ್ಮ ಸಂಪ್ರದಾಯದ ಆಳವಾದ ಅರ್ಥವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ದಿನೇ ದಿನೇ ಅದರಿಂದ ನಾವು ದೂರ ಸರಿಯುತ್ತಿದ್ದೇವೆ ಅನಿಸುತ್ತಿಲ್ಲವೇ?

ಹಬ್ಬಗಳು ಪ್ರಕೃತಿಯೊಂದಿಗೆ ಸಾಮರಸ್ಯದ ಸಂಕೇತವಾಗಬೇಕೇ ವಿನಾ ಅದರ ವಿನಾಶಕ್ಕೆ ಕಾರಣವಾಗಬಾರದು. ನಮ್ಮ ಮುಂದಿನ ಪೀಳಿಗೆಗೆ ಸಂಪ್ರದಾಯದ ಜೊತೆಗೆ ಶುದ್ಧ ಗಾಳಿ, ನೀರು ಮತ್ತು ಹಸಿರನ್ನೂ ಉಳಿಸಿಕೊಡುವ ಜವಾಬ್ದಾರಿ ನಮ್ಮದು. ಹಬ್ಬಗಳ ಮೂಲ ಉದ್ದೇಶವನ್ನು ಮರೆಯದೆ, ಅವುಗಳನ್ನು ಸಂಭ್ರಮದ ಜೊತೆಗೆ ಸಂವೇದನೆಯಿಂದ ಆಚರಿಸಿದರೆ ಮಾತ್ರ ನಾವು ಜೀವನದಲ್ಲಿ ನಿಜವಾದ ಸಮತೋಲನವನ್ನು ಕಂಡುಕೊಳ್ಳಬಹುದು.

ವಾಚಕರ ವಾಣಿ

ಈಗಿನ ಸಮಸ್ಯೆಗೆ ಒಂದೇ ಪರಿಹಾರ!

ಹಿಂದಿನ ಕಾಲದಲ್ಲಿ ರಾಜಮಹಾರಾಜರನ್ನು ಮುಗಿಸಲು ವಿಷಕನ್ಯೆಯರನ್ನು ಕಳುಹಿಸಲಾಗುತ್ತಿತ್ತಂತೆ. ಈಗ ಮಂತ್ರಿ ಮಹೋದಯರನ್ನು ಮಧುಬಲೆಯಲ್ಲಿ ಸಿಲುಕಿಸಿ ಮಣಿಸಲು ಮಧುಕನ್ಯೆಯರನ್ನು ಕಳುಹಿಸಲಾಗುತ್ತಿದೆಯಂತೆ! ಗುಟ್ಟಾಗಿ ಜೇನು ಕುಡಿದು ಕಟ್ಟಾಳಿನಂತಿದ್ದವರು, ರಟ್ಟಾದೊಡನೆ ಜೇನು ಕಡಿದಂತೆ ಒದ್ದಾಡುವುದು ತರವಲ್ಲ. ದೂರು, ತನಿಖೆಗಳೆಂಬ ತಾತ್ಕಾಲಿಕ ತಂತ್ರ ಹೊಸದಲ್ಲ. 'ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ, ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ...' ಎಂಬ ಬಸವಣ್ಣನ ಮಾತೊಂದೇ ಪರಿಹಾರ ಈ ಸಮಸ್ಯೆಗಳಿಗೆಲ್ಲ.

ಜೆ.ಬಿ.ಮಂಜುನಾಥ, ಪಾಂಡವಪುರ

ಸಾಹಿತ್ಯ ರಚನೆ ಮತ್ತು ಬೋಧನಾ ಸಾಮರ್ಥ್ಯ

ಭಾಷೆ ಮತ್ತು ಸಾಹಿತ್ಯದ ಬೋಧನೆಗೆ ಪದವಿಗಳು ನಿರ್ಣಾಯಕವಲ್ಲ ಎಂದು ಅಭಿಪ್ರಾಯಪಟ್ಟಿರುವ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂಗತ, ಮಾರ್ಚ್ 26), ಇದನ್ನು ಹಲವು ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ಐಚ್ಛಿಕ ವಿಷಯವಾಗಿ ಸಾಹಿತ್ಯವನ್ನು ಅಧ್ಯಯನ ಮಾಡಿದವರೆಲ್ಲರೂ ಕವಿಗಳು, ಕತೆಗಾರರು, ಬರಹಗಾರರು ಆಗಿರುವುದಿಲ್ಲ ಅಥವಾ ಹೆಚ್ಚು ಆಳವಾಗಿ ಪುಸ್ತಕ, ಸಾಹಿತ್ಯ ಓದುವ ಹವ್ಯಾಸ ಉಳ್ಳವರಾಗಿರುವುದಿಲ್ಲ. ಕೆಲವರು ಐಚ್ಛಿಕ ವಿಷಯವಾಗಿ ಸಾಹಿತ್ಯವನ್ನು ಓದದೆ, ಬರೀ 10ನೇ ತರಗತಿ ಅಥವಾ ಅದಕ್ಕಿಂತ ಕಡಿಮೆ ಓದಿದ್ದರೂ ಮೇರು ಸಾಹಿತ್ಯವನ್ನು ರಚಿಸಬಲ್ಲವರಾಗಿರುತ್ತಾರೆ ಮತ್ತು ಹೆಚ್ಚು ಓದುವ ಹವ್ಯಾಸವುಳ್ಳವರೂ ಆಗಿರುತ್ತಾರೆ.

ಇದೆಲ್ಲಾ ಅವರವರ ಪ್ರತಿಭೆ ಹಾಗೂ ಆಸಕ್ತಿಗೆ ಸಂಬಂಧಿಸಿದ್ದಾಗಿರುತ್ತದೆ. ಆದರೆ ಬೋಧನೆಗೆ ಐಚ್ಛಿಕವಾಗಿ ವಿಷಯವನ್ನು ಓದಿದವರೇ ಬೇಕು. ಏಕೆಂದರೆ, ಕನ್ನಡ ಬೋಧನೆ ಮಾಡುವವರು ವರ್ಣಮಾಲೆ, ಒತ್ತಕ್ಷರ, ಅಕ್ಷರಗಳ ಹುಟ್ಟು, ಬೆಳವಣಿಗೆ, ಸಮಾಸ, ಸಂಧಿ, ಪದಗಳ ಅರ್ಥ, ಮೂಲ ಅಕ್ಷರದಂತಹ ಸಂಗತಿಗಳನ್ನು ನಿಖರವಾಗಿ ಹೇಳಬಲ್ಲರು. ಪದ್ಯ, ಲೇಖನ ಬರೆಯದಿದ್ದರೂ ಪಠ್ಯವನ್ನು ನಿಖರವಾಗಿ ತಿಳಿಸಬಲ್ಲರು. ಹೆರಿಗೆ ಮಾಡಿಸುವ ಡಾಕ್ಟರ್ ಹೃದಯ ಸಂಬಂಧಿ ರೋಗಕ್ಕೆ ನಿಖರವಾದ ಚಿಕಿತ್ಸೆ ನೀಡಲಾರರು. ತಕ್ಷಣಕ್ಕೆ ಆಸ್ಪತ್ರೆಗೆ ಹೋಗುವವರೆಗೂ ಉಸಿರಾಡುತ್ತಿರುವಂತೆ ಔಷಧ ನೀಡಬಲ್ಲರು, ಅಷ್ಟೇ.

ಸರೋಜಾ ಎಂ.ಎಸ್., ಸಾಗರ

ಪರ ಚಿಂತೆ?!

ವರದಿ ಹೇಳುತ್ತಿದೆ
ಸಂತೃಪ್ತ ಜೀವನ
ಭಾರತ ಹಿಂದೆ,
ಯಾಕಂತೆ?!
ಸದಾ ನಮಗೆ
ಪರ ಚಿಂತೆ...
ಅವರು ಮುಂದೆ,
ಇವರು ಮುಂದೆ...
ಅದಕ್ಕೇ ನಾವು ಹಿಂದೆ!

ಮ.ಗು.ಬಸವಣ್ಣ, ಮೈಸೂರು

ಲೋಹಿಯಾವಾದದ ಪ್ರತಿಪಾದಕ ಚಂಪಾ

ಲೋಹಿಯಾ ಅವರು ವಿವಿಧ ಭಾಷೆಗಳ ಹಲವು ಲೇಖಕರಿಗೆ ಸ್ಫೂರ್ತಿಯಾಗಿದ್ದರು ಎಂದು ತಮ್ಮ ಲೇಖನದಲ್ಲಿ (ಪ್ರ.ವಾ., ಮಾರ್ಚ್ 27) ಹೇಳಿರುವ ಯೋಗೇಂದ್ರ ಯಾದವ್, ಅಂತಹವರಲ್ಲಿ ಕನ್ನಡದ ಲೇಖಕರು ಎಂದು ಅನಂತಮೂರ್ತಿ, ತೇಜಸ್ವಿ, ಲಂಕೇಶ್ ಅವರನ್ನು ಹೆಸರಿಸಿದ್ದಾರೆ. ಇವರಷ್ಟೇ ಅಲ್ಲ ಕನ್ನಡದ ಕವಿ, ಹೋರಾಟಗಾರ, ಸಂಘಟಕರಾಗಿದ್ದ ಚಂದ್ರಶೇಖರ ಪಾಟೀಲ (ಚಂಪಾ) ಅವರೂ ಲೋಹಿಯಾವಾದದಿಂದ ಸ್ಫೂರ್ತಿ ಪಡೆದು ಅತ್ಯಂತ ಕ್ರಿಯಾಶೀಲರಾಗಿ ಇದ್ದವರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ತಮ್ಮ ಕ್ರಿಯಾಶೀಲ ಬರಹದಿಂದಾಗಿ ಸೆರೆಮನೆವಾಸವನ್ನು ಅನುಭವಿಸಿದ್ದರು. ಬಂಡಾಯ ಸಾಹಿತ್ಯ ಸಂಘಟನೆಯ ಸಂದರ್ಭದಲ್ಲಿ ತಮ್ಮ 'ಸಂಕ್ರಮಣ' ಪತ್ರಿಕೆಯ ಒಂದು ಸಂಚಿಕೆಯನ್ನು ಲೋಹಿಯಾವಾದಕ್ಕೇ ಮೀಸಲಿರಿಸಿ (ಅತಿಥಿ ಸಂಪಾದಕ: ಡಿ.ಎಸ್.ನಾಗಭೂಷಣ) ರಾಜ್ಯದ ಅನೇಕ ಯುವ ಓದುಗರನ್ನು ಲೋಹಿಯಾವಾದದ ಕಡೆ ಸೆಳೆದರು. ಗೋಕಾಕ್ ವರದಿ ಜಾರಿಗಾಗಿ ಬೀದಿಗಿಳಿದು ಹೋರಾಡಿದ್ದರು. ಆದ್ದರಿಂದ ಲೋಹಿಯಾ ಅವರಿಂದ ಸ್ಫೂರ್ತಿ ಪಡೆದ ಕನ್ನಡದ ಅಗ್ರಗಣ್ಯ ಲೇಖಕರ ಯಾದಿಯಲ್ಲಿ ಮೊದಲು ಬರಬೇಕಾದ ಹೆಸರೇ ಚಂಪಾ ಅವರದು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪ್ರಜ್ಞಾವಂತ ರಂಗವಲಯದ ಮುಂದೆ ಹಲವು ಪ್ರಶ್ನೆ

ವಿಶ್ವ ರಂಗಭೂಮಿ ದಿನಾಚರಣೆಯ (ಮಾರ್ಚ್ 27) ಈ ಸಂದರ್ಭದಲ್ಲಿ, ಗ್ರೀಕ್‌ನ ರಂಗಕರ್ಮಿ ಥಿಯೋಡರಸ್ ಟರ್ಝೋಪೌಲಸ್ ನೀಡಿರುವ ಹೇಳಿಕೆ ಗಮನಾರ್ಹ. ಸುದೀರ್ಘ ಸಂದೇಶದ ಮೂಲಕ ರಂಗಭೂಮಿಯ ಸಮಸ್ತರಿಗೂ ಅವರು ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ. 'ರಾಜಕೀಯ, ಆರ್ಥಿಕ ಪರಿಣಾಮಗಳು, ಮಾಧ್ಯಮಗಳು ಮತ್ತು ಪೂರ್ವ ನಿರ್ಧರಿತವಾಗಿರುವಂತೆ ಅಭಿಪ್ರಾಯ ರೂಪಿಸಬಲ್ಲ ವ್ಯವಸ್ಥೆಗಳ ನಡುವೆ ಸಿಲುಕಿ ಹೈರಾಣ ಆಗುತ್ತಿರುವ 21ನೇ ಶತಮಾನದ ಜನರ ಬದುಕಿನ ಬಗ್ಗೆ ಈ ರಂಗಭೂಮಿ ನಿಜವಾಗಿಯೂ ಚಿಂತಿಸುತ್ತಿದೆಯೇ? ... ವಾಸ್ತವದ ನಿರಂತರವಾದ ನಕಾರಾತ್ಮಕ ಆಘಾತಗಳಿಂದ ರಕ್ತ ಬಸಿದು ಹೋಗುತ್ತಿದ್ದರೂ ಅದನ್ನು ಲೆಕ್ಕಿಸದೆ ಬಹುತ್ವದ ಸಹಬಾಳ್ವೆಯ ಕಲ್ಪನೆಯನ್ನು ಸದಾ ಸಾಕ್ಷಾತ್ಕಾರಗೊಳಿಸಲು ರಂಗಭೂಮಿಯು ಕಾರ್ಯತತ್ಪರ ಆಗಿದೆಯೇ?...' ಹೀಗೆ ಅವರ ಸಂದೇಶದ ಉದ್ದಕ್ಕೂ ಹಲವಾರು ಪ್ರಶ್ನೆಗಳು ಗಮನ ಸೆಳೆಯುತ್ತವೆ.

ಪ್ರಸ್ತುತ ಎಲ್ಲೆಡೆ ಬಹಳ ಸಂಭ್ರಮದಿಂದ ರಂಗಭೂಮಿ ದಿನವನ್ನು ಆಚರಿಸುತ್ತಿದ್ದೇವೆ. ಆದರೆ, ಬಹುತ್ವದ ನೆಲೆಯಲ್ಲಿ ರಂಗ ಚಟುವಟಿಕೆಗಳನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಕ್ರಮೇಣ ಏಕ ಸಂಸ್ಕೃತಿಯತ್ತ ವಾಲುತ್ತಿರುವುದು, ಇತಿಹಾಸವನ್ನು ತಿರುಚಿ ಜನಸಮುದಾಯದ ಮನೋದ್ವೇಗದ ಪ್ರಮಾಣವನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಿರುವುದು ರಂಗಭೂಮಿಯಲ್ಲಿನ ಆತಂಕಕಾರಿ ಬೆಳವಣಿಗೆ. ಹಾಗೆಯೇ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ದೌರ್ಜನ್ಯ ಹಾಗೂ ಶೋಷಣೆಗಳ ಬಗ್ಗೆ ದನಿ ಎತ್ತಬೇಕಾದ ರಂಗಭೂಮಿಯು ಮೌನ ವಹಿಸಿರುವುದಕ್ಕೆ ವ್ಯವಸ್ಥೆಯೊಂದಿಗಿನ ಹೊಂದಾಣಿಕೆ ಕಾರಣವಾಗಿರಬಹುದೇ? ಇದರ ಜೊತೆಗೆ ಇನ್ನೊಂದು ಆತಂಕಕಾರಿ ಸಂಗತಿ ಎಂದರೆ, ನಾಗರಿಕರು ಸಂವೇದನಾಶೀಲರು ಎನ್ನಿಸಿಕೊಳ್ಳುವ ಈ ವಲಯದಲ್ಲೂ ಸಹಕಲಾವಿದರೊಂದಿಗೆ ಅಸೂಕ್ಷ್ಮವಾಗಿ ನಡೆದುಕೊಂಡ ವದಂತಿಗಳು ಕಳವಳ ಹುಟ್ಟಿಸಿವೆ. ಇಂತಹ ವಿದ್ಯಮಾನಗಳ ಬಗ್ಗೆ ಪ್ರಜ್ಞಾವಂತ ರಂಗವಲಯ ತುರ್ತಾಗಿ ಯೋಚಿಸಬೇಕಾಗಿದೆ.

ಶಶಿಧರ ಭಾರಿಘಾಟ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜನಸಾಮಾನ್ಯನಿಗೆ ಬೆಲೆಯೇರಿಕೆ ಬಿಸಿ

ಜಾಗತಿಕ ಆರ್ಥಿಕ ಹಿಂಜರಿತ, ದೇಶದಲ್ಲಿನ ತೀವ್ರ ಹಣದುಬ್ಬರದ ಪರಿಣಾಮವಾಗಿ ಜನಸಾಮಾನ್ಯನ ಗಳಿಕೆ ಗಣನೀಯ ಪ್ರಮಾಣದಲ್ಲೇನೂ ಏರಿಕೆಯಾಗಿಲ್ಲ. ಆದರೆ ಆತನ ದೈನಂದಿನ ಜೀವನದ ವೆಚ್ಚ ಏರಿಕೆಯಾಗುತ್ತಲೇ ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ ನೀತಿ-ಕ್ರಮಗಳೇ ಇದಕ್ಕೆ ನೇರ ಕಾರಣ. ಎರಡೂ ಸರ್ಕಾರಗಳು ಭಾರಿ ಸುದ್ದಿಯಾಗುವಂತಹ ತೆರಿಗೆ ಹೆಚ್ಚಳ, ಬೆಲೆ ಹೆಚ್ಚಳವನ್ನು ಮಾಡಿಲ್ಲ. ಬದಲಿಗೆ ಸಣ್ಣ-ಸಣ್ಣ ಮಟ್ಟದಲ್ಲಿ ತೆರಿಗೆಗಳನ್ನು ಹೆಚ್ಚಿಸಿವೆ. ಕಚ್ಚಾ ವಸ್ತು ಮತ್ತು ಸಾಗಣೆಗೆ ಬಳಕೆಯಾಗುವ ಇಂಧನದ ಮೇಲೆ ಹೇರಿದ ತೆರಿಗೆ ಸರಪಳಿ ಕ್ರಿಯೆಯಂತೆ ದಿನಬಳಕೆ ವಸ್ತುಗಳ ಬೆಲೆ ವಿಪರೀತ ಏರಿಕೆಯಾಗಿದೆ

● ಜಯಸಿಂಹ ಆರ್.

ತೆರಿಗೆ ಭಾರ ಇಳಿಸದ ರಾಜ್ಯ

ತನ್ನ ಆದಾಯ ಹೆಚ್ಚಿಸಿಕೊಳ್ಳಲು 2024-25ನೇ ಸಾಲಿನಲ್ಲಿ ಹಲವು ತೆರಿಗೆಗಳನ್ನು ಹೆಚ್ಚಿಸಿದ್ದ ರಾಜ್ಯ ಸರ್ಕಾರವು, 2025-26ನೇ ಸಾಲಿಗೂ ಅವನ್ನು ಮುಂದುವರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಬಜೆಟ್‌ನಲ್ಲಿ ತೆರಿಗೆ ಹೆಚ್ಚಳವನ್ನು ಉಲ್ಲೇಖಿಸಿಲ್ಲವಾದರೂ, ಈ ಹಿಂದೆ ಹೆಚ್ಚಿಸಿದ್ದ ತೆರಿಗೆಗಳನ್ನು ಇಳಿಸುವ ಪ್ರಸ್ತಾಪವನ್ನೂ ಮಾಡಿಲ್ಲ. ತೆರಿಗೆ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಬಜೆಟ್‌ಗೆ ಅನುಮೋದನೆಯೂ ದೊರೆತಿದೆ. ಬೆನ್ನಲ್ಲೇ ಹಾಲಿನ ದರವನ್ನು ಪ್ರತಿ ಲೀಟರ್‌ಗೆ ₹4ರಂತೆ ಏರಿಕೆ ಮಾಡಿ, ವಿದ್ಯುತ್ ದರ ವಿಪರೀತ ಹೆಚ್ಚಿಸಿ ಸರ್ಕಾರವು ಜನರ ಹೊರೆ ಹೆಚ್ಚಿಸಿದೆ.

ಜಿಎಸ್‌ಟಿ ಜಾರಿಯ ನಂತರ ಸರಕು ಮತ್ತು ಸೇವೆಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರ ಸಂಪೂರ್ಣವಾಗಿ ಜಿಎಸ್‌ಟಿ ಮಂಡಳಿಗೆ ಹೋಗಿದೆ. ಮದ್ಯ, ರಸ್ತೆ ತೆರಿಗೆ, ನೋಂದಣಿ ಮತ್ತು ಮುದ್ರಾಂಕ, ಇಂಧನದ ಮೇಲಿನ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ವಿಧಿಸಲಷ್ಟೇ ರಾಜ್ಯಗಳಿಗೆ ಅವಕಾಶವಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರವು ಈ ಎಲ್ಲ ತೆರಿಗೆಗಳನ್ನೂ ಗಣನೀಯ ಪ್ರಮಾಣದಲ್ಲೇ ಏರಿಕೆ ಮಾಡಿದೆ. ಜತೆಗೆ ವೃತ್ತಿಪರ ತೆರಿಗೆಯನ್ನೂ ₹100 ಹೆಚ್ಚಿಸಿದೆ. ಪರಿಣಾಮವಾಗಿ ಜನರ ದೈನಂದಿನ ಜೀವನದ ವೆಚ್ಚ ಏರಿಕೆಯಾಗಿದೆ. ಅವುಗಳ ವಿವರ ಇಲ್ಲಿದೆ.

ಇಂಧನದ ಹೊರೆ

2024ರ ಜೂನ್‌ನಲ್ಲಿ ರಾಜ್ಯ ಸರ್ಕಾರವು ಪೆಟ್ರೋಲ್ ಮೇಲಿನ ವ್ಯಾಟ್ ಅನ್ನು ಶೇ25.92ರಿಂದ ಶೇ29.84ಕ್ಕೆ ಮತ್ತು ಡೀಸೆಲ್ ಮೇಲಿನ ವ್ಯಾಟ್ ಅನ್ನು ಶೇ14.34ರಿಂದ ಶೇ18.44ಕ್ಕೆ ಏರಿಕೆ ಮಾಡಿತ್ತು. ಪರಿಣಾಮವಾಗಿ ಎರಡೂ ಇಂಧನಗಳ ಬೆಲೆ ಏರಿಕೆಯಾಗಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾದಂತೆಲ್ಲಾ ಇಂಧನಗಳ ಚಿಲ್ಲರೆ ಮಾರಾಟ ಬೆಲೆಯ ಹೊರೆಯೂ ಹೆಚ್ಚುತ್ತಿದೆ. ಡೀಸೆಲ್ ಬೆಲೆ ಏರಿಕೆಯಾಗಿ ಸಾಗಣೆ ವೆಚ್ಚ ಹೆಚ್ಚಳದಿಂದ ದಿನಬಳಕೆಯ ಎಲ್ಲ ವಸ್ತುಗಳೂ ತುಟ್ಟಿಯಾಗಿವೆ.

ಬಿಯರ್ ತುಟ್ಟಿ

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಬಿಯರ್ ಮೇಲಿನ ಸುಂಕ ಈವರೆಗೆ ಮೂರು ಬಾರಿ ಏರಿಕೆಯಾಗಿದೆ. ₹70-75ಕ್ಕೆ ಸಿಗುತ್ತಿದ್ದ ಬಿಯರ್‌ನ ಬೆಲೆ ₹150 ದಾಟಿದೆ. ಪ್ರೀಮಿಯಂ ಬಿಯರ್‌ನ ಬೆಲೆ ₹250 ದಾಟಿದೆ. ಸುಂಕ ಹೆಚ್ಚಳದಿಂದ ಸರ್ಕಾರ ಹೆಚ್ಚಿನ ಆದಾಯ ಸಂಗ್ರಹದ ಗುರಿ ಹಾಕಿಕೊಂಡಿತ್ತಾದರೂ, ನಿರೀಕ್ಷೆಯಷ್ಟು ಆದಾಯ ಬಂದಿಲ್ಲ. ಜತೆಗೆ ಹಲವು ತಿಂಗಳುಗಳಲ್ಲಿ ಬಿಯರ್ ಮಾರಾಟ ಕುಸಿದಿತ್ತು.

ರಸ್ತೆ ತೆರಿಗೆ ಹೆಚ್ಚಳ

ರಾಜ್ಯದಲ್ಲಿ ನೋಂದಣಿಯಾಗುವ ವಾಹನಗಳ ಮೇಲಿನ ರಸ್ತೆ ತೆರಿಗೆಯನ್ನು ಹೆಚ್ಚಿಸುವ ಮಸೂದೆಗೆ 2024ರ ಡಿಸೆಂಬರ್‌ನಲ್ಲಿ ಒಪ್ಪಿಗೆ ದೊರೆತಿತ್ತು. ಇದು ಜಾರಿಗೆ ಬಂದ ನಂತರ ದ್ವಿಚಕ್ರ ವಾಹನಗಳ ಮೇಲೆ ₹500, ಕಾರುಗಳ ಮೇಲೆ ₹1,000 ಮತ್ತು ಸಾರಿಗೆ ವಾಹನಗಳ ಮೇಲೆ ಶೇ 3ರಷ್ಟು ಹೆಚ್ಚುವರಿ ಸೆಸ್ ವಿಧಿಸಿತ್ತು. ₹25 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಇ.ವಿಗಳ ಮೇಲೆ ಶೇ 10ರಷ್ಟು ಜೀವಿತಾವಧಿ ತೆರಿಗೆ ವಿಧಿಸಿತ್ತು.



ಕಲೆ: ಸಂತೋಷ್ ಸಸಿಹಿತ್ಲು

ನೋಂದಣಿ ಮತ್ತು ಮುದ್ರಾಂಕ

ನೋಂದಣಿಗೆ ಬಳಕೆಯಾಗುತ್ತಿದ್ದ ಕಡಿಮೆ ಮುಖಬೆಲೆಯ ಇ-ಸ್ಟಾಂಪ್ ಪೇಪರ್‌ಗಳನ್ನು ಸರ್ಕಾರ ಹಿಂದಕ್ಕೆ ಪಡೆಯಿತು. ಈ ಹಿಂದೆ ₹20ರ ಮುಖಬೆಲೆಯ ಕಾಗದ ಬಳಸುತ್ತಿದ್ದೆಡೆಯಲ್ಲಿ, ₹100ರ ಕಾಗದ ಬಳಸುವಂತಾಯಿತು. ಕೃಷಿ ಇಲಾಖೆ, ಪಂಚಾಯತ್ ರಾಜ್, ಪಶುಸಂಗೋಪನಾ ಇಲಾಖೆಯ ವಿವಿಧ ಯೋಜನೆಗಳಿಗೆ ಪ್ರಮಾಣ ಪತ್ರ ಸಲ್ಲಿಸುವ ರೈತರಿಗೆ ಇದರಿಂದ ಹೊರೆ ಹೆಚ್ಚಾಗಿತ್ತು.



ಹಾಲು ತುಟ್ಟಿ

2023ರ ಆಗಸ್ಟ್ 1ರಿಂದ ಅನ್ವಯವಾಗುವಂತೆ ಕೆಎಂಎಫ್ ನಂದಿನಿ ಹಾಲಿನ ಬೆಲೆಯನ್ನು ಪ್ರತಿ ಲೀಟರ್‌ಗೆ ₹3ರಂತೆ ಏರಿಕೆ ಮಾಡಲಾಗಿತ್ತು. ಪರಿಣಾಮವಾಗಿ ಹೋಟೆಲ್‌ಗಳು ಕಾಫಿ-ಟೀ ಮತ್ತು ಹಾಲಿನಿಂದ ಮಾಡಿದ ಇತರ ಪಾನೀಯಗಳ ಬೆಲೆಯನ್ನು ಏರಿಕೆ ಮಾಡಿದ್ದವು. ಇದು ಜನ ಸಾಮಾನ್ಯನ ಹಾಲಿನ ಮೇಲಿನ ವೆಚ್ಚವನ್ನು ಹೆಚ್ಚಿಸಿತ್ತು. 2024ರ ಜುಲೈನಲ್ಲಿ ಕೆಎಂಎಫ್ ಹಾಲಿನ ಪ್ಯಾಕೆಟ್ಟುಗಳ ಗಾತ್ರವನ್ನು ಹೆಚ್ಚಿಸಿ (ಎಲ್ಲ ಪ್ಯಾಕೆಟ್ಟುಗಳಲ್ಲಿ ಹೆಚ್ಚುವರಿ 50 ಎಂಎಲ್ ಹಾಲು), ಪ್ರತಿ ಪ್ಯಾಕೆಟ್ಟಿನ ಬೆಲೆಯನ್ನು ₹2ರಷ್ಟು ಹೆಚ್ಚು ಮಾಡಿತ್ತು. ಜನ ಸಾಮಾನ್ಯ ಪ್ರತಿ ತಿಂಗಳು ಹಾಲಿಗಾಗಿ ಮಾಡುವ ವೆಚ್ಚ ಏರಿಕೆಯಾಗಿತ್ತು. ಈಗ ಮತ್ತೆ ಹಾಲಿನ ದರವನ್ನು ರಾಜ್ಯ ಸರ್ಕಾರ ಹೆಚ್ಚಿಸಿದೆ.

ಕೇಂದ್ರ ಸರ್ಕಾರದ ಸುಂಕ ಹೊರೆ

ಕೇಂದ್ರ ಸರ್ಕಾರವು ಈ ಬಜೆಟ್‌ನಲ್ಲಿ ಆದಾಯ ತೆರಿಗೆ ವಿನಾಯಿತಿಯನ್ನು ಘೋಷಿಸಿದ್ದರೂ, ದೈನಂದಿನ ಬಳಕೆಯ ಹಲವು ವಸ್ತುಗಳ ಮೇಲೆ ಆಮದು ಸುಂಕ, ಆಮದು ಸುಂಕ ಸೆಸ್ ಅನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿದೆ.

ಈ ಹಿಂದಿನ ಬಜೆಟ್‌ಗಳಲ್ಲಿ ಕಲ್ಲಿದ್ದಲಿನ ಮೇಲೆ ಜಿಎಸ್‌ಟಿ (5%), ರಾಯಧನ (30%), ಪ್ರತಿ ಟನ್‌ನ ಮೇಲೆ ₹400 ಸೆಸ್ ವಿಧಿಸಿದ ಕಾರಣ ಗೃಹಬಳಕೆ ಮತ್ತು ನಿರ್ಮಾಣ ಸಾಮಗ್ರಿಗಳ ಬೆಲೆ ವಿಪರೀತ ಎನ್ನುವಷ್ಟು ಏರಿಕೆಯಾಗಿತ್ತು. ಕಲ್ಲಿದ್ದಲಿನ ಮೇಲಿನ ಒಟ್ಟಾರೆ ತೆರಿಗೆ ಏರಿಕೆಯಾದ ಕಾರಣ, ಕಬ್ಬಿಣ, ಸಿಮೆಂಟ್, ಜಿಪ್ಸಂ, ರಸಗೊಬ್ಬರ ಮತ್ತು ವಿದ್ಯುತ್ ದರ ಏರಿಕೆಯಾಯಿತು. ವಿದ್ಯುತ್ ದರ ಏರಿಕೆ ಒಂದರಿಂದಲೇ ಬಹುತೇಕ ಗೃಹಬಳಕೆ ವಸ್ತುಗಳ ತಯಾರಿಕೆ ಮತ್ತು ಉತ್ಪಾದನಾ ವೆಚ್ಚ ಹೆಚ್ಚಳವಾಯಿತು. ಜನಸಾಮಾನ್ಯನ ತಿಂಗಳ ವೆಚ್ಚ ಹೆಚ್ಚಾಯಿತು.

ಈ ಮಧ್ಯೆ, ಕೇಂದ್ರವು ಹಲವು ವಸ್ತುಗಳ ದೇಶೀಯ ತಯಾರಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಬಜೆಟ್‌ನಲ್ಲಿ ಆಮದು ಸುಂಕ, ಸೆಸ್ ಹೆಚ್ಚಳ ಮಾಡಿದೆ. ಟಿ.ವಿ ಪ್ಯಾನಲ್‌ಗಳು, ಕಂಪ್ಯೂಟರ್-ಲ್ಯಾಪ್‌ಟಾಪ್ ಪ್ಯಾನಲ್‌ಗಳು, ಮೊಬೈಲ್ ಸಂಪರ್ಕ ಸಾಧನಗಳ ಬಿಡಿಭಾಗಗಳು ಮತ್ತಿತರ ವಸ್ತುಗಳ ಮೇಲೆ ಸುಂಕ ಹೆಚ್ಚಿಸಿದೆ. ಇದೇ ಏಪ್ರಿಲ್ 1ರಿಂದ ಈ ಎಲ್ಲ ವಸ್ತುಗಳಿಗೆ ಜನಸಾಮಾನ್ಯ ಹೆಚ್ಚು ಬೆಲೆ ತೆರಬೇಕಿದೆ. ಅವುಗಳ ವಿವರ ಈ ಮುಂದಿನಂತಿದೆ.

ಟಿವಿ, ಮಾನಿಟರ್ ತುಟ್ಟಿ

ಟಿ.ವಿ, ಮಾನಿಟರ್, ಟಚ್ ಪ್ಯಾನೆಲ್, ಇತರೆ ಎಲ್‌ಇಡಿ ಪ್ಯಾನಲ್‌ಗಳ ಮೇಲಿದ್ದ ಆಮದು ಸುಂಕವನ್ನು ಶೇ 10ರಿಂದ ಶೇ 20ಕ್ಕೆ ಏರಿಕೆ ಮಾಡಲಾಗಿದೆ. ಇದು ಬಿಡಿಭಾಗಗಳ ಮೇಲಿನ ಸುಂಕ ಹೆಚ್ಚಳವಾಗಿದ್ದರೂ, ಗ್ರಾಹಕ ಉತ್ಪನ್ನದ ಬೆಲೆ ಏರಿಕೆಗೆ ಕಾರಣವಾಗಲಿದೆ. ಟಿ.ವಿ ಮತ್ತು ಮಾನಿಟರ್‌ಗಳ ಮಾರುಕಟ್ಟೆ ಬೆಲೆಯಲ್ಲಿ ಶೇ 80ರಷ್ಟು ವೆಚ್ಚ ಪ್ಯಾನಲ್‌ಗಳದ್ದೇ ಇರುತ್ತದೆ. ಹೀಗಾಗಿ ಇನ್ನುಮುಂದೆ ಇವುಗಳನ್ನು ಖರೀದಿಸುವವರು ಹೆಚ್ಚು ಹಣ ನೀಡಬೇಕಾಗುತ್ತದೆ.

ನೇಯ್ದ ಬಟ್ಟೆಗಳು

ಸಿಂಥೆಟಿಕ್ ಮತ್ತು ಪಾಲಿಮರ್ ಬಳಸಿ ರೂಪಿಸಲಾದ ಬಟ್ಟೆಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ಸ್ವರೂಪದ ಬಟ್ಟೆಗಳ ಮೇಲಿನ ಆಮದು ಸುಂಕವನ್ನು ಶೇ10ರಿಂದ ಶೇ 20ಕ್ಕೆ ಏರಿಕೆ ಮಾಡಲಾಗಿದೆ. ಇಂತಹ ಬಹುತೇಕ ಬಟ್ಟೆಯನ್ನು ಭಾರತವು ಚೀನಾದಿಂದ ಆಮದು ಮಾಡಿಕೊಳ್ಳುತ್ತದೆ. ದೇಶೀಯ ಉತ್ಪನ್ನಕ್ಕಿಂತ ಚೀನಾದ ಉತ್ಪನ್ನದ ಬೆಲೆ ಗಣನೀಯ ಪ್ರಮಾಣದಷ್ಟು ಕಡಿಮೆ ಇರುವ ಕಾರಣಕ್ಕೆ ಜವಳಿ ಉದ್ಯಮವು ಚೀನಾವನ್ನು ಅವಲಂಬಿಸಿವೆ. ಈಗ ಸುಂಕ ಏರಿಕೆಯ ಬಿಸಿ ಜವಳಿ ಉದ್ಯಮಕ್ಕೆ ತಟ್ಟಲಿದೆ. ಜನ ಸಾಮಾನ್ಯ ದೈನಂದಿನ ಬಟ್ಟೆ, ಸೂಟು, ಸ್ವೆಟರ್, ಪಾರ್ಟಿವೇರ್ ಎಲ್ಲದಕ್ಕೂ ಹೆಚ್ಚಿನ ಹಣ ಕೊಡಬೇಕಾಗುತ್ತದೆ.

ಮೆಟ್ರೊ ಬಲು ದುಬಾರಿ

ಬೆಂಗಳೂರು ಮೆಟ್ರೊ ದರ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಕೆಲವು ನಿಲ್ದಾಣಗಳ ನಡುವಣ ದರ ಶೇ70ರವರೆಗೂ ತುಟ್ಟಿಯಾಗಿದೆ. ಮೆಟ್ರೊ ದರ ಪರಿಷ್ಕರಣೆ ಮಾಡುವವರು ಕೇಂದ್ರ ಸರ್ಕಾರದ ಅಧಿಕಾರಿಗಳು ಆಗಿದ್ದರೂ, ರಾಜ್ಯ ಸರ್ಕಾರದ ಪ್ರತಿನಿಧಿಗಳೂ ಸಂಬಂಧಿತ ಸಮಿತಿ ಮತ್ತು ಮಂಡಳಿಗಳಲ್ಲಿ ಇರುತ್ತಾರೆ.

ದೂರಸಂಪರ್ಕ ಸಾಧನಗಳು

ದೂರಸಂಪರ್ಕ ಸಾಧನಗಳಾದ ರೌಟರ್, ಮೋಡಂ, ಲ್ಯಾಂಡ್‌ಲೈನ್ ದೂರವಾಣಿ, ಡಾಟಾ ಕೇಬಲ್ ಮೊದಲಾದವುಗಳು ಮತ್ತು ಅವುಗಳ ಬಿಡಿಭಾಗಗಳ ಮೇಲಿನ ಆಮದು ಸುಂಕವನ್ನು ಶೇ10ರಿಂದ ಶೇ15ಕ್ಕೆ ಹೆಚ್ಚಿಸಲಾಗಿದೆ. ಇವು ನೇರವಾಗಿ ಇಂಟರ್‌ನೆಟ್ ಸೇವಾ ಕಂಪನಿಗಳ ವೆಚ್ಚವನ್ನು ಹೆಚ್ಚಿಸುತ್ತವೆ. ಆದರೆ ಪರೋಕ್ಷವಾಗಿ ಗ್ರಾಹಕ ಆ ಹೊರೆಯನ್ನು ಹೊರಬೇಕಾಗುತ್ತದೆ. ಇದೂ ಸಹ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಸಿನಿ ಬಿಟ್ಸ್

ಅಂಜಲಿ ಅನೀಶ್

ಈ ವರ್ಷದ ಪ್ರಾರಂಭದಿಂದ ಮಾರ್ಚ್ ಮೊದಲ ವಾರದ ತನಕವೂ ಸಾಲು, ಸಾಲು ಸಿನಿಮಾಗಳು ತೆರೆಕಂಡಿದ್ದವು. ಇವುಗಳಲ್ಲಿ ಬಹುತೇಕ 2024ರಲ್ಲಿಯೇ ಬಿಡುಗಡೆಯಾಗಬೇಕಿದ್ದ ಸಿನಿಮಾಗಳಾಗಿದ್ದವು. ಅದಕ್ಕೆ ಹೋಲಿಸಿದರೆ ಕಳೆದ ಎರಡು ವಾರಗಳಿಂದ ಸಿನಿಮಾ ಬಿಡುಗಡೆ ಪ್ರಮಾಣ ಗಣನೀಯವಾಗಿ ಇಳಿಕೆ ಕಂಡಿದ್ದು, ಇಂದು ಎರಡು ಚಿತ್ರಗಳು ಮಾತ್ರ ತೆರೆಯಲ್ಲಿವೆ.

ಮನದ ಕಡಲು

ಯೋಗರಾಜ್ ಭಟ್ ನಿರ್ದೇಶಿಸಿ, ಇ.ಕೃಷ್ಣಪ್ಪ ನಿರ್ಮಿಸಿದ್ದ 'ಮುಂಗಾರು ಮಳೆ' ಚಿತ್ರ ಸೂಪರ್ ಹಿಟ್ ಆಗಿತ್ತು. ಅದೇ ಜೋಡಿ 18 ವರ್ಷಗಳ ಬಳಿಕ ಮತ್ತೆ ಒಟ್ಟಾಗಿ ಮಾಡಿರುವ ಚಿತ್ರ 'ಮನದ ಕಡಲು'. ಚಿತ್ರವನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಚಿತ್ರತಂಡ ಪ್ರಚಾರಕ್ಕೆ ಸಾಕಷ್ಟು ಶ್ರಮ ಹಾಕಿದೆ. ನಟ ಯಶ್ ಈ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿದ್ದು ಪ್ರಚಾರಕ್ಕೆ ದೊಡ್ಡ ಬಲ ನೀಡಿದೆ.

ಈ ಹಿಂದೆ 'ಫಿಸಿಕ್ಸ್ ಟೀಚರ್' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದ ಸುಮುಖಗೆ ರಾಶಿಕಾ ಶೆಟ್ಟಿ, ಅಂಜಲಿ ಅನೀಶ್ ಜೋಡಿಯಾಗಿದ್ದಾರೆ. 'ಈ ಚಿತ್ರಕ್ಕಾಗಿ 'ಮುಂಗಾರು ಮಳೆ'ಯ ಹಳೆಯ ತಂಡ ಮತ್ತೆ ಒಂದಾಗಿದೆ. ಕೃಷ್ಣಪ್ಪನವರ ಬಳಿ ಕಥೆ ತೆಗೆದುಕೊಂಡು ಹೋಗಿ ಸ್ಟಾರ್ ನಟರನ್ನು ನಾಯಕನಾಗಿ ಸೂಚಿಸಿದೆ. ಹೊಸಬರಿಗೆ ಅವಕಾಶ ಕೊಡುವುದಿದ್ದರೆ ಮಾತ್ರ ಈ ಚಿತ್ರ ಮಾಡಿ ಎಂದರು. ಹೀಗಾಗಿ 'ಮುಂಗಾರು ಮಳೆ'ಯಂತೆ ಇಲ್ಲಿಯೂ ಹೊಸ ಕಲಾವಿದರಿಗೆ ಅವಕಾಶ ನೀಡಿರುವೆ. ಒಂದು ನವಿರಾದ ಪ್ರೇಮಕಥೆಯನ್ನು ಸುಂದರ ಸ್ಥಳಗಳಲ್ಲಿ ಚಿತ್ರೀಕರಿಸಿದ್ದೇವೆ. ವಿ.ಹರಿಕೃಷ್ಣ ಬತ್ತಳಿಕೆಯಿಂದ ಬಂದ ಚಿತ್ರದ ಹಾಡುಗಳು ಈಗಾಗಲೇ ಜನಪ್ರಿಯವಾಗಿವೆ. ಚಿತ್ರವನ್ನು ಜನ ಮೆಚ್ಚಿಕೊಳ್ಳುತ್ತಾರೆ ಎಂಬ ಬಲವಾದ ನಂಬಿಕೆಯಿದೆ' ಎನ್ನುತ್ತಾರೆ ಯೋಗರಾಜ್ ಭಟ್.

'ಸಿನಿಮಾ ಎಂಬುದೇ ಜೂಜಾಟ. ಸಿನಿಮಾ ಮಾಡುವ ರಿಸ್ಕ್ ತೆಗೆದುಕೊಳ್ಳುತ್ತೇವೆ ಎಂದರೆ ಹೊಸಬರಿಗೆ ಮಾಡೋಣ ಎಂದು ನಿರ್ದೇಶಕರಿಗೆ ಹೇಳಿದೆ. ಯಾವುದೇ ಕೊರತೆ ಬಾರದ ಹಾಗೆ ಒಂದೊಳ್ಳೆ ಸಿನಿಮಾ ಮಾಡಿದ್ದೀನಿ. ಮುಂದಿನದ್ದು ಪ್ರೇಕ್ಷಕರಿಗೆ ಬಿಟ್ಟಿದ್ದು' ಎಂದಿದ್ದಾರೆ ನಿರ್ಮಾಪಕ ಇ.ಕೃಷ್ಣಪ್ಪ.

ದತ್ತಣ್ಣ, ರಂಗಾಯಣ ರಘು, ಶಿವಧ್ವಜ್, ಸೂರಜ್ ಮುಂತಾದವರು ಚಿತ್ರದಲ್ಲಿದ್ದಾರೆ. ಸಂತೋಷ್ ರೈ ಪತಾಜೆ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

BAD

ಪಿ.ಸಿ.ಶೇಖರ್ ನಿರ್ದೇಶನದ ಚಿತ್ರ BAD. ಶೇಖರ್ ನಕುಲ್ ಗೌಡ ಚಿತ್ರದ ನಾಯಕ. ಎಸ್.ಆರ್. ವೆಂಕಟೇಶ್ ಗೌಡ ಬಂಡವಾಳ ಹೂಡಿದ್ದಾರೆ.

'ಇದು ನನ್ನ ನಿರ್ದೇಶನದ ಹನ್ನೊಂದನೇ ಚಿತ್ರ. ವಿಭಿನ್ನ ಚಿತ್ರಕಥೆಯಿದೆ. ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಪಾತ್ರಗಳು ಈ ಚಿತ್ರದಲ್ಲಿದೆ. ಅರ್ಜುನ್ ಜನ್ಯ ಸಂಗೀತ ನೀಡಿರುವ ಹಾಡುಗಳು ಈಗಾಗಲೇ ಎಲ್ಲರ ಮನ ಗೆದ್ದಿವೆ' ಎಂದಿದ್ದಾರೆ ನಿರ್ದೇಶಕರು.

'ಇದು ನನಗೆ ಎರಡನೆ ಚಿತ್ರ. ಪ್ರೇಕ್ಷಕರು ಕೊಟ್ಟ ದುಡ್ಡಿಗೆ ಮೋಸ ಆಗದಂತಹ ಚಿತ್ರವಿದು. ನನ್ನ ಪಾತ್ರ ಕೂಡ ವಿಭಿನ್ನವಾಗಿದೆ' ಎನ್ನುತ್ತಾರೆ ನಾಯಕ ನಕುಲ್ ಗೌಡ. ಮಾನ್ವಿತಾ ಹರೀಶ್ ಚಿತ್ರದ ನಾಯಕಿ. ಅಪೂರ್ವ ಭಾರದ್ವಾಜ್, ಅಶ್ವಿನಿ, ಪದ್ಮ ಶಿವಮೊಗ್ಗ, ಮಂಜುನಾಥ್ ಮುಂತಾದವರು ಚಿತ್ರದಲ್ಲಿದ್ದಾರೆ. ❖

ಮಾನ್ವಿತಾ ಹರೀಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ನಾಸಾ ಗಗನಯಾತ್ರಿ** ಸುನಿತಾ ವಿಲಿಯಮ್ಸ್ ಅವರ ಪತ್ರಿಕಾಗೋಷ್ಠಿಯ ವಿಡಿಯೊವೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಡಾ.ಕೃಷ್ಣ ಸಿಂಗ್ ಎಂಬುವವರು, ಒಂಬತ್ತು ತಿಂಗಳ ನಂತರ ತಾವು ಸುರಕ್ಷಿತವಾಗಿ ಭೂಮಿಗೆ ಮರಳುವುದಕ್ಕೆ ಭಗದ್ಗೀತೆ ಮತ್ತು ಉಪನಿಷತ್ತುಗಳು ಕಾರಣ ಎಂದು ಹೇಳಿದ್ದಾರೆ ಎಂದು ಪೋಸ್ಟ್ ಮಾಡಿದ್ದಾರೆ. ಇದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು.

✓ **ಭೂಮಿಗೆ** ಮರಳಿದ ನಂತರ ಸುನಿತಾ ವಿಲಿಯಮ್ಸ್ ಸುದ್ದಿಗೋಷ್ಠಿ ಮಾಡಿದ್ದಾರೆಯೇ ಎಂದು ಪರಿಶೀಲಿಸಲು ಗೂಗಲ್‌ನಲ್ಲಿ ಹುಡುಕಾಡಿದಾಗ ಯಾವುದೇ ಫಲಿತಾಂಶ ಸಿಗಲಿಲ್ಲ. 'ಎಕ್ಸ್'ನಲ್ಲಿ ಹಂಚಿಕೊಂಡಿರುವ ವಿಡಿಯೊವನ್ನು ಪರಿಶೀಲಿಸಿದಾಗ, 'ದೆಹಲಿಯಲ್ಲಿ ವಿಲಿಯಮ್ಸ್' ಎಂಬ ಒಕ್ಕಣೆ ಅದರಲ್ಲಿ ಕಾಣಿಸಿತು. ಮತ್ತೆ ಗೂಗಲ್‌ನಲ್ಲಿ ಹುಡುಕಿದಾಗ 2013ರ ಏಪ್ರಿಲ್ 2ರಂದು ದೆಹಲಿಯಲ್ಲಿ ಸುನಿತಾ ಮಾತನಾಡಿರುವ ಬಗ್ಗೆ ಎನ್‌ಡಿಟಿವಿ ಮಾಡಿರುವ ವರದಿ ಸಿಕ್ಕಿತು. 2013ರಲ್ಲಿ ದೆಹಲಿಯ ರಾಷ್ಟ್ರೀಯ ವಿಜ್ಞಾನ ಕೇಂದ್ರದಲ್ಲಿ ವಿದ್ಯಾರ್ಥಿಗಳೊಂದಿಗೆ ನಡೆದಿದ್ದ ಸಂವಾದ ಕಾರ್ಯಕ್ರಮದಲ್ಲಿ ಸುನಿತಾ ಮಾತನಾಡಿದ್ದರು. ಈ ಬಗ್ಗೆ ವಿವಿಧ ಮಾಧ್ಯಮಗಳು ವರದಿ ಮಾಡಿವೆ. ಸಂವಾದದಲ್ಲಿ ಭಗವದ್ಗೀತೆ, ಉಪನಿಷತ್ ಬಗ್ಗೆ ಸುನಿತಾ ಪ್ರಸ್ತಾಪಿಸಿದ್ದರು. ಆ ಹಳೆಯ ವಿಡಿಯೊವನ್ನು ಮುಂದಿಟ್ಟುಕೊಂಡು ಸುನಿತಾ ಅವರು ಮಾರ್ಚ್ 19ರಂದು ಭೂಮಿಗೆ ಮರಳಿದ ನಂತರ ಈ ಹೇಳಿಕೆ ನೀಡಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮಾರ್ಚ್ 28, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಚತುರ್ದಶಿ ಗಂ. 19-56 ನಕ್ಷತ್ರ: ಪೂರ್ವಾಭಾದ್ರ ಗಂ. 22-10 ಯೋಗ: ಶುಭ ಗಂ. 05-57 ನಂತರ ಶುಕ್ಲ(ಶುಕ್ರ) ಗಂ. 26-07, ಮೀನ ಮಾಸದ 14 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 4.
ರಾಹುಕಾಲ: ಬೆಳಿಗ್ಗೆ 10-30 - 12-00
ಸೂರ್ಯೋದಯ: 06-32 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ: 27 ರಂಜಾನ್, ದಿನ ವಿಶೇಷ : ಜಮತ್-ಉಲ್-ವಿದಾ (ಮುಸ್ಲಿಂ), ಸಬ್-ಎ-ಖಾದರ್ (ಹಿಂದಿನ ದಿನ) (ಮುಸ್ಲಿಂ), ಅದೃಷ್ಟ ಸಂಖ್ಯೆ : 3, 7

ಮೇಷ: ಸಾಧು ಸಂತರ ದರ್ಶನದಿಂದ ಕೆಲಸಗಳು ಗುರಿ ತಲುಪಲಿವೆ. ಮಾತೃ ಸಹಕಾರವೂ ದೊರೆಯಲಿದೆ. ಮಗಳಿಂದ ಸಂತೋಷದ ಸುದ್ದಿ ಕೇಳಲಿರುವಿರಿ.

ವೃಷಭ: ಹೊಸದೊಂದು ಆದಾಯದ ದಾರಿ ಬರಲಿದೆ. ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಒಪ್ಪಿಕೊಳ್ಳಿ. ಸರಳತೆ ದುರುಪಯೋಗವಾಗದಂತೆ ಎಚ್ಚರವಹಿಸಿ.

ಮಿಥುನ: ದೇವರ ದರ್ಶನಕ್ಕಾಗಿ ದೂರ ಪ್ರಯಾಣ ಕಂಡುಬರುವುದು. ಸಣ್ಣ ಮಕ್ಕಳ ವರ್ತನೆ ಸಂತೋಷ ತಂದುಕೊಡಲಿದೆ. ಗೌರವ ಹೆಚ್ಚಲು ಸಮಯ ಬೇಕಿದೆ.

ಕರ್ಕಾಟಕ: ಸಮಾಲೋಚಿಸಿ ಮಾಹಿತಿಗಳನ್ನು ಕಲೆಹಾಕಿ ಅಂತಿಮವಾಗಿ ನಿರ್ಧಾರ ಕೈಗೊಳ್ಳಿ. ವ್ಯಕ್ತಿಯೊಬ್ಬರ ಪರಿಚಯ ಜೀವನದ ಶೈಲಿಯನ್ನೇ ಬದಲಿಸಲಿದೆ. ಸಿಹಿತಿನಿಸು ಮಾರಾಟಗಾರರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಸಿಂಹ: ಜೀವನ ನಡೆಸುವ ವಿಧಾನವು ಮಾದರಿಯಾಗಿ ಇರಲಿದೆ. ಹರಿತಾಗಿರುವ ಯಂತ್ರಗಳ ಜತೆ ಕೆಲಸ ಮಾಡುವವರು ಜಾಗ್ರತರಾಗಿರಿ. ಬದುಕನ್ನು ಒಂದು ವ್ಯವಸ್ಥೆಗೆ ತರಲು ಸಮಯ ಮೀಸಲಿಡಿ.

ಕನ್ಯಾ: ಸ್ವಂತ ಮನೆ ಮಾಡುವ ಬಗ್ಗೆ ಯೋಚಿಸಿ. ಮುಖ್ಯ ಕೆಲಸಗಳಿಗೆ ಆಪ್ತರ ಸಲಹೆ ಸ್ವೀಕರಿಸುವುದು ಅಗತ್ಯ. ವೃತ್ತಿಯ ಕೆಲಸಗಳಿಗಾಗಿ ಓಡಾಟ ನಡೆಸಬೇಕಾಗಬಹುದು. ವಿದ್ಯಾರ್ಥಿಗಳಿಗೆ ವಿದೇಶ ಅಧ್ಯಯನದ ಯೋಗ ಸಿಗಲಿದೆ.

ತುಲಾ: ಖಾಸಗಿ ಸಂಸ್ಥೆಗಳ ಆಡಳಿತಾಧಿಕಾರಿಗಳೊಡನೆ ಫಲಪ್ರದ ಮಾತುಕತೆಗಳು ನಡೆಸುವಂತಾಗುವುದು. ಆದಾಯದಿಂದ ಸಂಸಾರದಲ್ಲಿ ಸಂತೋಷ. ಸಿನಿಮಾ ರಂಗದವರಿಗೆ ಉತ್ತಮ ಅವಕಾಶ ಲಭಿಸುವುದು.

ವೃಶ್ಚಿಕ: ಅಪವಾದ ಪರಿಹರಿಸಿಕೊಳ್ಳುವಲ್ಲಿ ಇತರರಿಗೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚಿರುವುದು.

ಧನು: ಷರತ್ತುಗಳನ್ನು ಹೊಂದಿದ ಯಾವುದೇ ರೀತಿಯ ವ್ಯವಹಾರಕ್ಕೂ ಕೈ ಹಾಕಬೇಡಿ. ವೃತ್ತಿಪರವಾಗಿ ನಿರೀಕ್ಷಿತ ಕಾರ್ಯಕ್ಕೆ ಸಲಹೆ ದೊರಕುವುದು. ಮನೆಯವರೊಂದಿಗೆ ಸಿಡುಕುತನ ಬೇಡ.

ಮಕರ: ಗೆಳೆಯರ ಅಭಿಪ್ರಾಯಕ್ಕೆ ಅಥವಾ ಗೆಳೆತನಕ್ಕೆ ಸಂಬಂಧಿಸಿದ ವಿಷಯಗಳಿಗೆ ಪ್ರೋತ್ಸಾಹ ಸಿಗುವುದು. ವಿದ್ಯಾಭ್ಯಾಸದಲ್ಲಿನ ಪ್ರಗತಿಯ ಫಲವಾಗಿ ವಿದ್ಯಾ ಸಂಸ್ಥೆಗಳಿಂದ ಮನ್ನಣೆ ಪಡೆಯುವಿರಿ.

ಕುಂಭ: ಆರ್ಥಿಕ ಸ್ಥಿತಿಯಲ್ಲಿ ತಾಪತ್ರಯಗಳಿರುವುದಿಲ್ಲ. ವ್ಯವಹಾರ ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ. ವ್ಯಕ್ತಿತ್ವಕ್ಕೆ ಯಾವುದೇ ಚ್ಯುತಿ ಇಲ್ಲದೆ ಸಮಾಜದಲ್ಲಿ ಗೌರವ ದೊರೆಯಲಿದೆ.

ಮೀನ: ಗೃಹ ನಿರ್ಮಾಣ ಅಥವಾ ನಿವೇಶನ ಖರೀದಿಯ ಕೆಲಸ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಬಹುದು. ಕಷ್ಟಕರ ಪರಿಸ್ಥಿತಿಯು ಸಮಾಧಾನಕರ ರೀತಿಯಲ್ಲಿ ಮುಗಿದು ಹೋಗುವುದು.

ಇತರರ ಜೊತೆ ಹೋಲಿಕೆ ಸರಿಯಲ್ಲ!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

162

ಉರಿಲಿಂಗಪೆದ್ದಿ ಎಂಬ ಶರಣರು ಇದ್ದರು. ಅವರು ಮೊದಲು ಕಳ್ಳರಾಗಿದ್ದರು. ಒಬ್ಬ ಗುರುವಿನ ದಯೆಯಿಂದ ಶರಣರಾದರು. ಅವರು ಹೀಗೆ ಹೇಳುತ್ತಾರೆ. 'ವೇದ, ವಚನ, ಆಗಮ, ಪುರಾಣ ಇವುಗಳನ್ನು ಓದಿ ತಿಳಿದುಕೊಳ್ಳುವುದರಿಂದ ಏನು ಫಲ ಬರುತ್ತದೆಯೋ ಅಷ್ಟೇ ಫಲ ನಿನ್ನ ಮನೆಯ ಬಾಗಿಲಿಗೆ ಬಂದ ಹಸಿದವನಿಗೆ ಅನ್ನ ಕೊಟ್ಟರೆ ಬರುತ್ತದೆ' ಎನ್ನುತ್ತಾರೆ ಅವರು. ದೇವರು ಏನು ಕೊಟ್ಟಿದ್ದಾನೆಯೋ ಅದನ್ನು ಹಂಚಿ ಹೋಗುವುದನ್ನು ಕಲಿಯಬೇಕು ಮನುಷ್ಯ. ಸಂಗ್ರಹ ಮಾಡದ ಹಾಗೆ ಹೇಗೆ ಬದುಕಬೇಕು ಎಂಬ ಕಲೆ ಅವರಿಗೆ ಗೊತ್ತಿತ್ತು. ಹಾಗೆಯೇ ಬದುಕಿದರು ನಮ್ಮ ಋಷಿಮುನಿಗಳು. ಅವರ ಬದುಕು ಹೇಗಿತ್ತು ಎಂದರೆ 'ಮನೆ ನೋಡಾ ಬಡವರು, ಮನ ನೋಡಾ ಘನ. ಸೋಂಕಿನಲ್ಲಿ ಶುಚಿ, ಸರ್ವಾಂಗ ಕಲಿಗಳು. ಪಸರಕ್ಕನುವಿಲ್ಲ, ಬಂದ ತತ್ಕಾಲಕೆ ಉಂಟು ಕೂಡಲಸಂಗನ ಶರಣರು ಸ್ವತಂತ್ರಧೀರರು' ಎಂದು ಶರಣರು ಹೇಳಿದಂತೆಯೇ ಇತ್ತು. ಶರಣರು ಹೇಗೆ ಬದುಕಿದರು ಎಂದರೆ ಮನೆಯಲ್ಲಿ ಬಡತನ ಇದ್ದರೂ ಮನಸ್ಸು ಘನವಾಗಿತ್ತು. ಸಂಪನ್ನರು ಅವರು.

ಶಾಲೆಯಲ್ಲಿ ಮೊದಲ ಸ್ಥಾನದ ವಿದ್ಯಾರ್ಥಿ ಜೊತೆಗೆ ಒಬ್ಬ ನಪಾಸಾಗುವ ಹುಡುಗನನ್ನು ಕುಳ್ಳಿರಿಸಿದರೆ ಆ ಹುಡುಗ ತಾನು ದಡ್ಡ ಎಂದು ತಿಳಿಯುತ್ತಾನೆ. ಅದೇ ನಪಾಸಾದ ಹುಡುಗನ ಪಕ್ಕದಲ್ಲಿ ಒಬ್ಬ ಅನಕ್ಷರಸ್ಥ ವ್ಯಕ್ತಿಯನ್ನು ಕುಳ್ಳಿರಿಸಿದರೆ ನಪಾಸಾದ ಹುಡುಗನೇ ಬುದ್ಧಿವಂತನಾಗುತ್ತಾನೆ. ಅಂದರೆ ದಡ್ಡತನ, ಜಾಣತನ ಹೊರಗೆ ಇಲ್ಲ. ಒಳಗೆ ಇದೆ. ನಮ್ಮೂರಲ್ಲಿ ನೂರು ಕೋಟಿ ಇರುವ ವ್ಯಕ್ತಿ ಇದ್ದಾನೆ ಎಂದರೆ ನಾವು ಅವನನ್ನು ಶ್ರೀಮಂತ ಎನ್ನುತ್ತೇವೆ. ಆದರೆ ಅವನು ಬೆಂಗಳೂರು ಅಥವಾ ಮುಂಬೈಯಲ್ಲಿ ಇರುವ ಸಾವಿರಾರು ಕೋಟಿಯ ವ್ಯಕ್ತಿ ಜೊತೆಗೆ ಹೋಲಿಸಿಕೊಂಡು ನಾನು ಬಡವ ಅನ್ನುತ್ತಾನೆ. ಅಂದರೆ ಬಡತನ ಇರುವುದು ಹೋಲಿಕೆಯಲ್ಲಿ ಅಷ್ಟೆ. ಈ ಭೂಮಿಯಲ್ಲಿ ಮನುಷ್ಯ ಮಾತ್ರ ಇತರರ ಜೊತೆಗೆ ಹೋಲಿಸಿಕೊಳ್ಳುತ್ತಾನೆ. ಪ್ರಾಣಿ, ಪಶು ಪಕ್ಷಿಗಳು ಇತರರ ಜೊತೆಗೆ ಹೋಲಿಸಿಕೊಳ್ಳುವುದಿಲ್ಲ. ಕೋಗಿಲೆ ತನ್ನ ಬಣ್ಣ ಸರಿ ಇಲ್ಲ, ದೇವರು ತನಗೆ ಬರೀ ಕಂಠ ಮಾತ್ರ ಕೊಟ್ಟ ಎಂದು ಅಂದುಕೊಂಡಿಲ್ಲ. ನವಿಲು ತನಗೆ ಕೇವಲ ಬಣ್ಣ ಇದೆ, ಕಂಠ ಇಲ್ಲ ಎಂದಿಲ್ಲ. ಕೋಗಿಲೆ ನವಿಲಿನ ಬಣ್ಣ ನೋಡಿ ಸಂತೋಷ ಪಡುತ್ತದೆ. ನವಿಲು ಕೋಗಿಲೆಯ ಕಂಠ ನೋಡಿ ಸಂತೋಷ ಪಡುತ್ತದೆ. ಇದು ನಿಸರ್ಗದ ರೀತಿ.

ಬಡತನ ಶ್ರೀಮಂತಿಕೆಯನ್ನು ನಾವು ಹೊರಗೆ ನೋಡಬಾರದು, ಒಳಗೆ ನೋಡಬೇಕು. ಬಹಳ ಎತ್ತರದ ಮನೆ ಕಟ್ಟಿಸಿದರೆ ಶ್ರೀಮಂತರಲ್ಲ. ಮನೆಗೆ ಬಂದವರಿಗೆ ಹತ್ತಿರ ಇರುವವರು ಶ್ರೀಮಂತರು. ಬಡತನ, ಶ್ರೀಮಂತಿಕೆ, ಮೇಲು, ಕೀಳು ಎಲ್ಲವೂ ನಮ್ಮ ನೋಡುವಿಕೆಯಲ್ಲಿ ಇದೆ. ಇತರರ ಜೊತೆ ಹೋಲಿಸಿಕೊಳ್ಳೂವುದರಲ್ಲಿ ಇದೆ. ನಮ್ಮ ಮನಸ್ಸಿನಲ್ಲಿ ಯುದ್ಧ ನಡೆದಿದೆ. ನಮ್ಮ ಹೃದಯದಲ್ಲಿ ರಣರಂಗ ಇದೆ. ಯಾಕೆ ಯುದ್ಧ ನಡೆದಿದೆ ಎಂದರೆ ನಮಗೆ ಬೇಕು ಎನ್ನುವ ಬಯಕೆ ಇದೆ. ನಮ್ಮ ಮನಸ್ಸಿನಲ್ಲಿ ವಿವೇಕ ಮತ್ತು ಬಯಕೆ ನಡುವೆ ಯುದ್ಧ ನಡೆದಿದೆ. ನಿಸರ್ಗ ಕೂಡ ಮನುಷ್ಯನ ಬಯಕೆಗೆ ಬಾಗಿದೆ. ಮಾವು ಬಾಗಿದೆ, ಬಾಳೆ ಬಾಗಿದೆ. ಆದರೆ ಮನುಷ್ಯನ ಬೇಕು ಎನ್ನುವ ಬಯಕೆ ಇನ್ನೂ ಮುಗಿದಿಲ್ಲ. ❖

ಪದಬಂಧ 5995

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
5.ಈತ ಆನೆ ನಡೆಸುವವನು (4)
6.ತೀಡೀ ತೀಡೀ ಸರಿಪಡಿಸುವಿಕೆ! (4)
8.ಪಾಪಿಗಳ ಲೋಕವಿದು (3)
11.ಬಳ್ಳಿ ಇಲ್ಲಿ ಕಾಣುತ್ತಿದೆ (3)
13.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವಿಕೆ (4)
17.ವಿದಾಯ ಹೇಳಲು ಸೇರಿದ ಗುಂಪು (4)
18.ಭಿಕ್ಷುಕ ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ
1.ತಿಳುವಳಿಕೆ ಇಲ್ಲದವನು ಮರದ ಹತ್ತಿರ ನಿಂತಿದ್ದಾನೆ (3)
2.ನೆಮ್ಮದಿ ಯನ್ನು ಹೀಗೆನ್ನಿ (4)
3.ಸಂಗಾತಿ ಹೇಳಿದ ವಿಚಾರ (3)
4.ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
7.ಕಾವು ಇದ್ದಾಗ ತೋರಿದ ಡೌಲು (3)
9.ಪೆದ್ದ ಇಲ್ಲಿದ್ದಾನೆ (3)
10.ಸ್ಲೇಟಿನ ಮೇಲೆ ಬರೆಯುವ ಸಾಧನ (3)
12.ಸೋಡಿಯನ್ನು ಹೀಗೂ ಹೇಳುವರು (4)
14.ಉಲ್ಟಾ ಮಾಡಿದರೂ ಇದು ದುರಸ್ತಿ (3)
15.ರಸ ಒಸರುವ ಜಿಹ್ವೆ (3)
16.ಈತ ಕೋಪಿಷ್ಠ (3)



5994ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ವಸಂತಮಾಸ
4.ವರ್ತಕ 5.ಮಾನಿನಿ
6.ತಕಲಿ 8.ಯನೀಹಮ
10.ಕವಾಡಿಗ 12.ನವಣೆ
15.ವದನ 16.ಆರಂಬ
17.ವಿಚಾರವಂತ

ಮೇಲಿಂದ ಕೆಳಕ್ಕೆ:
1.ತಲೆಬರಹ 3.ಸಮಾಸ
4.ವನಿತ 7.ಕನ್ನಡಿ
9.ನೀರವ 11.ವಾರಸುದಾರ
13.ಣೆವಬ 14.ಮನವಿ

ಸುಡೊಕು 6380

	4					6		1
9						2	7	
	7	2						8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6379 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

‘ನಟ, ನಿರ್ದೇಶಕ ಅಪ್‌ಗ್ರೇಡ್ ಆಗಬೇಕು’

ನಟ ಯಶ್ ತಮ್ಮ ಮೊದಲ ಸಿನಿಮಾ ನಿರ್ಮಾಪಕ ಇ.ಕೃಷ್ಣಪ್ಪ ನಿರ್ಮಿಸಿ, ಯೋಗರಾಜ್ ಭಟ್ ನಿರ್ದೇಶಿಸಿರುವ ‘ಮನದ ಕಡಲು’ ಚಿತ್ರದ ಟ್ರೇಲರ್ ಬಿಡುಗಡೆಗಾಗಿ ಇತ್ತೀಚೆಗೆ ವೇದಿಕೆಯಲ್ಲಿದ್ದರು. ಆ ಸಂದರ್ಭದಲ್ಲಿ ಚಿತ್ರರಂಗದ ಬೆಳವಣಿಗೆಗಾಗಿ ಅವರು ಆಡಿದ ಮಾತಿನ ಸಾರ ಇಲ್ಲಿದೆ...

ವಿನಾಯಕ ಕೆ.ಎಸ್

1. ನನ್ನನ್ನು ಬೆಳೆಸಿದವರನ್ನು ಇವತ್ತಿಗೂ ಮರೆತಿಲ್ಲ. ಸಾಮಾನ್ಯ ನಟನಾಗಿದ್ದಾಗ ಆದ ಅವಮಾನಗಳೂ ನೆನಪಿವೆ. ಧಾರಾವಾಹಿಯಲ್ಲಿ ನಟಿಸುತ್ತಿದ್ದ ದಿನಗಳಲ್ಲಿ ಸಾಕಷ್ಟು ಅವಮಾನ ಎದುರಿಸಿರುವೆ. ಆಗ ಸಿನಿಮಾದಲ್ಲಿ ನಟಿಸಲು ಅವಕಾಶ ಬರುತ್ತಿತ್ತು. ಆದರೆ ಸಿನಿಮಾದ ಕಥೆ ಅಥವಾ ಸ್ಕ್ರಿಪ್ಟ್ ಕೇಳಿದರೆ, ನಿನಗೇಕೆ ಹೇಳಬೇಕು ಎಂಬ ಮನಸ್ಥಿತಿಯಲ್ಲಿ ಕೆಲ ಚಿತ್ರತಂಡಗಳು ಇರುತ್ತಿದ್ದವು. ಹೀಗಾಗಿಯೇ ಅನೇಕ ಚಿತ್ರಗಳನ್ನು ತಿರಸ್ಕರಿಸಿದ್ದೆ. ಚಿತ್ರದ ಕಥೆ ಪೂರ್ತಿಯಾಗಿ ಗೊತ್ತಿಲ್ಲದೆ ಚಿತ್ರದಲ್ಲಿ ನನ್ನನ್ನು ನಾನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಹೇಗೆ ಸಾಧ್ಯ ಎಂಬುದು ನನ್ನ ಆಲೋಚನೆಯಾಗಿತ್ತು. ‘ಮೊಗ್ಗಿನ ಮನಸು’ ಚಿತ್ರದ ನಿರ್ಮಾಪಕ ಇ.ಕೃಷ್ಣಪ್ಪ, ನಿರ್ದೇಶಕ ಶಶಾಂಕ್ ಬಹಳ ವೃತ್ತಿಪರವಾಗಿ ನಡೆಸಿಕೊಂಡರು. ಹೀಗಾಗಿಯೇ ಇವತ್ತಿಗೂ ನನಗೆ ಅವರ ಮೇಲೆ ಅದೇ ಪ್ರೀತಿ ಇದೆ. ಚಿತ್ರೋದ್ಯಮದಲ್ಲಿ ಎಲ್ಲರೂ ಗೌರವಕ್ಕೆ ಅರ್ಹರು. ಎಲ್ಲರನ್ನೂ ಗೌರವಯುತವಾಗಿ ನಡೆಸಿಕೊಳ್ಳಿ.

2. ಒಬ್ಬ ವ್ಯಕ್ತಿ ತಾನಾಗಿಯೇ ಬೆಳೆದು ಬಿಡುವುದಿಲ್ಲ. ಅವರ ಸುತ್ತಮುತ್ತ ಸಾಕಷ್ಟು ಜನ ಪಿಲ್ಲರ್‌ಗಳಾಗಿ ನಿಂತು, ಅವರೆಲ್ಲರೂ ಬೆವರು ಹರಿಸಿ ಒಬ್ಬನನ್ನು ಮುಂದೆ ತಳ್ಳುತ್ತಾರೆ. ಆತನ ಬೆಳವಣಿಗೆಗಾಗಿ ಹಗಲು, ರಾತ್ರಿ ಶ್ರಮಿಸಿರುತ್ತಾರೆ. ಆ ರೀತಿ ತಳ್ಳಿದ್ದರಿಂದ ನಾನು ಇವತ್ತು ಈ ಸ್ಥಾನದಲ್ಲಿ ನಿಂತಿರುವೆ. ಅವರು ತಳ್ಳಿ ನೀಡಿದ ಬೆಂಬಲದಿಂದ ಜವಾಬ್ದಾರಿ ಇಟ್ಟುಕೊಂಡು ಇನ್ನೂ ಮುಂದೆ ಹೋಗಿ ಅವರು ಖುಷಿ ಪಡುವಂತಹ ಕೆಲಸ ಮಾಡಬೇಕು ಎಂಬ ಗುರಿ ಇಟ್ಟುಕೊಂಡಿರುವೆ. ಕನ್ನಡ ಚಿತ್ರರಂಗವನ್ನು ಇನ್ನಷ್ಟು ಎತ್ತರಕ್ಕೆ ಕೊಂಡುಹೋಗುವ ಕನಸಿದೆ.

3. ಇವತ್ತಿನ ದಿನದಲ್ಲಿ ಕನ್ನಡ ಸಿನಿಮಾ ಎಂದಾಗ ತುಂಬಾ ಗೋಳಾಟ ಕೇಳಿಸುತ್ತದೆ. ನಾನೂ ಒಂದು ಕಾಲದಲ್ಲಿ ಜನ ಕನ್ನಡ ಸಿನಿಮಾ ನೋಡಲ್ಲ ಅಂತ ಬೈಯ್ಯುತ್ತಿದ್ದೆ. ಜನರು ಬೇರೆ ಭಾಷೆ ಸಿನಿಮಾವನ್ನೇ ನೋಡುತ್ತಾರೆ ಅಂತ ಒಂದು ಸಂದರ್ಶನದಲ್ಲಿ ಮಾತಾಡಿದ್ದೆ. ಆಮೇಲೆ ಕುಳಿತು ಕನ್ನಡ ಸಿನಿಮಾ ನೋಡುತ್ತಿರುವಾಗ ನನಗೆ ಅನ್ನಿಸಿತು, ನಮ್ಮ ಕೆಲಸ ನಾವು ಸರಿ ಮಾಡಿಕೊಂಡು, ಒಳ್ಳೆ ಸಿನಿಮಾ ಕೊಟ್ಟರೆ ಕನ್ನಡ ಪ್ರೇಕ್ಷಕರು ಯಾವತ್ತೂ ಕೈಬಿಟ್ಟಿಲ್ಲ ಅಂತ. ಅಭಿಮಾನಿಗಳು ಯಾವತ್ತಿದ್ದರೂ ಒಳ್ಳೆಯ ಚಿತ್ರವನ್ನು ಹರಸಿಯೇ ಹರಸುತ್ತಾರೆ.

4. ಸಾಕಷ್ಟು ಜನ ಬಂದು ಹೊಸಬರನ್ನು ನೀವು ಲಾಂಚ್ ಮಾಡಿಕೊಡಿ, ನಮ್ಮ ಚಿತ್ರಕ್ಕೆ ಸಪೋರ್ಟ್ ಮಾಡಿ ಅಂತ ಆಗಾಗ ಕೇಳುತ್ತಲೇ ಇರುತ್ತಾರೆ. ಆ ರೀತಿ ಕಾರ್ಯಕ್ರಮಗಳಿಂದ ಪ್ರಚಾರ ಸಿಗಬಹುದು. ನಿಜವಾದ ಗೆಲುವು ಸಿಗೋದು ಸಿನಿಮಾ ಚೆನ್ನಾಗಿದ್ದಾಗ ಹೊರತು, ದೊಡ್ಡ ನಾಯಕರು ಬರುತ್ತಾರೆ ಅಂತಲ್ಲ. ನೀವು ಮಾಡುವ ಕೆಲಸದಿಂದ ನಿಮ್ಮ ಯಶಸ್ಸು ನಿರ್ಧಾರವಾಗುತ್ತದೆ.

5. ನಾನು ಇಂಡಸ್ಟ್ರಿಯಲ್ಲಿ ಎಲ್ಲರಲ್ಲಿಯೂ ಕೇಳಿಕೊಳ್ಳುತ್ತೇನೆ, ಅಪ್‌ಗ್ರೇಡ್ ಆಗೋಣ, ಕೆಲಸ ಕಲಿಯೋಣ, ದೊಡ್ಡ ಗುರಿಗಳನ್ನು ಇಟ್ಟುಕೊಳ್ಳೋಣ. ಸ್ವಾಭಿಮಾನ ಬೆಳೆಸಿಕೊಳ್ಳೋಣ. ಯಾರ ಮುಂದೆಯೂ ನಾವು ಕಡಿಮೆ ಎಂಬ ಯೋಚನೆ ಇಟ್ಟುಕೊಳ್ಳಬೇಡಿ, ತಲೆ ತಗ್ಗಿಸಬೇಡಿ. ಬೇಡೋದು ಬೇಡ. ಕಷ್ಟಪಟ್ಟು ಕೆಲಸ ಮಾಡೋಣ. ಬೇರೆಯವರೆಲ್ಲ ನಮಗೆ ಗೌರವ ಕೊಡುವ ರೀತಿ ದುಡಿಯೋಣ. ಧೈರ್ಯವಾಗಿ ಚಿತ್ರರಂಗಕ್ಕೆ ಬನ್ನಿ. ಇವತ್ತು ಇಂಡಸ್ಟ್ರಿಗೆ ತುಂಬ ಯಂಗ್‌ಸ್ಟಾರ್ ಬರುತ್ತಿದ್ದಾರೆ. ಹೊಸ ತಲೆಮಾರಿನ ನಾಯಕರುಗಳು ಬರಬೇಕು.

6. ನಟರು ಸಿನಿಮಾ ಎಂದರೆ ಕೇವಲ ನಟನೆ ಅಷ್ಟೆ ಅಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ನೀವು ಹೇಗೆ ಉದ್ಯಮದಲ್ಲಿ ಭವಿಷ್ಯ ರೂಪಿಸಿಕೊಳ್ಳಬೇಕು, ಶಿಸ್ತು ಇರಬೇಕು, ಟ್ರೆಂಡ್ ಏನಾಗುತ್ತಿದೆ, ನಿಮ್ಮ ಜವಾಬ್ದಾರಿ ಏನು ಎಂಬುದನ್ನು ತಿಳಿದುಕೊಂಡು ಬರಬೇಕು. ನಿರ್ದೇಶಕರು ಕೂಡ ಚಿತ್ರರಂಗಕ್ಕೆ ಬರುವ ಮೊದಲು ಸಿದ್ಧತೆ ನಡೆಸಿಕೊಂಡು ಬರಬೇಕು. ಆಗ ಮಾತ್ರ ಒಳ್ಳೆಯ ಚಿತ್ರಗಳು ಬರಲು ಸಾಧ್ಯ.

7. ಅಭಿಮಾನಿಗಳ ಕಿರುಚಾಟ ದೊಡ್ಡಸ್ತಿಕೆ ತಂದುಕೊಡಲ್ಲ, ಜವಾಬ್ದಾರಿ ತಂದುಕೊಡುತ್ತೆ. ಅದು ಕುಗ್ಗುವಂತೆ ನಡೆದುಕೊಳ್ಳಬಾರದು. ‘ಮನದ ಕಡಲು’ ಚಿತ್ರದ ವೇದಿಕೆಯಲ್ಲಿ ‘ಟಾಕ್ಸಿಕ್’ ಬಗ್ಗೆ ಮಾತನಾಡಲಾರೆ. ಆ ಚಿತ್ರಕ್ಕೆ ದೊಡ್ಡಮಟ್ಟದಲ್ಲಿ ಕೆಲಸ ಮಾಡುತ್ತಿದ್ದೇವೆ. ಮುಗಿದ ನಂತರ ನಿಮ್ಮೆದುರಿಗೆ ಬರುತ್ತೇವೆ. ❖

‘ಟೈಟಾನಿಕ್’ ಸೆಟ್‌ನಂತೆ...

‘ನಟ ಯಶ್ ಅವರ ‘ಟಾಕ್ಸಿಕ್’ ಚಿತ್ರದ ಸೆಟ್‌ಗೆ ಭೇಟಿ ನೀಡಿದ್ದೆ. ಟೈಟಾನಿಕ್ ಚಿತ್ರದ ಸೆಟ್‌ಗಿಂತಲೂ ಅದ್ದೂರಿಯಾಗಿತ್ತು. ಬಹುಶಃ ಕನ್ನಡದಲ್ಲಿ ಈತನಕ ಇಷ್ಟು ಅದ್ದೂರಿಯಾಗಿ ಸಿನಿಮಾ ನಿರ್ಮಾಣ ಆಗಿಲ್ಲ. ಕನ್ನಡದ ಜೊತೆಗೆ ಇಂಗ್ಲಿಷ್‌ನಲ್ಲಿಯೂ ಚಿತ್ರ ಬರುತ್ತಿದೆ. ಕನ್ನಡದಿಂದ ಹಾಲಿವುಡ್‌ಗೆ ಪೈಪೋಟಿ ನೀಡುವ ಚಿತ್ರವಾಗಲಿದೆ ಎನ್ನಿಸಿತು’ ಎಂದರು ಇ.ಕೃಷ್ಣಪ್ಪ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ
ಸಿನಿಮಾಗಳಿಗೆ ಆಹ್ವಾನ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ‘ಸಿನಿ ಸಮ್ಮಾನ’ದ ಮೂರನೇ ಆವೃತ್ತಿಗೆ ವೇದಿಕೆ ಸಜ್ಜಾಗುತ್ತಿದೆ. 2023ರಲ್ಲಿ ತನ್ನ ಅಮೃತ ಸಂಭ್ರಮದ ಸಂದರ್ಭದಲ್ಲಿ ‘ಪ್ರಜಾವಾಣಿ’ ಪ್ರಾರಂಭಿಸಿದ ಈ ಕಾರ್ಯಕ್ರಮ ಕನ್ನಡ ಚಿತ್ರರಂಗದವರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಎರಡು ಆವೃತ್ತಿಗಳನ್ನು ಯಶಸ್ವಿಯಾಗಿ, ಅದ್ದೂರಿಯಾಗಿ ನಡೆಸಲಾಗಿದೆ. ಇದೀಗ 2024ರಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗುತ್ತಿದೆ. ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಸಂಕ್ರಾಂತಿಗೆ ಕೆವಿಎನ್ ದಳಪತಿ ‘ಜನ ನಾಯಗನ್’

ದಳಪತಿ ವಿಜಯ್

ಕಾಲಿವುಡ್‌ನ ಸ್ಟಾರ್ ನಟ ದಳಪತಿ ವಿಜಯ್ ಈಗ ಸಿನಿಮಾಗಿಂತಲೂ ರಾಜಕೀಯದ ಕಡೆ ಹೆಚ್ಚಾಗಿ ಗಮನ ಹರಿಸುತ್ತಿದ್ದಾರೆ. ತಮ್ಮದೇ ಹೊಸ ಪಕ್ಷ ಸ್ಥಾಪಿಸಿಕೊಂಡು ರಾಜಕೀಯಕ್ಕೆ ಧುಮುಕಿದ್ದಾರೆ. ಹೀಗಾಗಿ ಚಿತ್ರರಂಗಕ್ಕೆ ಗುಡ್ ಬೈ ಹೇಳಿದ್ದು, ಅವರ ನಟನೆಯ ಕೊನೆಯ ಸಿನಿಮಾ ‘ಜನ ನಾಯಗನ್’ ಮೇಲೆ ಅಭಿಮಾನಿಗಳಿಗೆ ಬಹಳ ನಿರೀಕ್ಷೆ ಇದೆ.

ಹೌದು, ಜನವರಿ 15, 2026 ತಮಿಳುನಾಡಿನಲ್ಲಿ ಪೊಂಗಲ್ ಸಂಭ್ರಮದ ದಿನ. ಅದೇ ದಿನ ಕೆವಿಎನ್ ಪ್ರೊಡಕ್ಷನ್ಸ್ ನಿರ್ಮಾಣದ ದೊಡ್ಡ ಬಜೆಟ್ ಸಿನಿಮಾ ‘ಜನ ನಾಯಗನ್’ ತೆರೆಗೆ ಬರಲಿದೆ. ಈ ಸಿನಿಮಾದಲ್ಲಿ ಹಲವು ವಿಶೇಷತೆಗಳಿವೆ. ಇದು ದಳಪತಿ ವಿಜಯ್ ಅಭಿನಯದ 69ನೇ ಸಿನಿಮಾ ಮತ್ತು ಸಿನಿ ಬದುಕಿನಿಂದ ನಿವೃತ್ತಿ ಪಡೆದು ಪೂರ್ಣಪ್ರಮಾಣದಲ್ಲಿ ರಾಜಕಾರಣಿಯಾಗಲು ಹೊರಟಿರುವ ವಿಜಯ್ ಅವರ ಕೊನೆಯ ಸಿನಿಮಾ.

ಕೆವಿಎನ್ ಪ್ರೊಡಕ್ಷನ್ಸ್ ದಕ್ಷಿಣ ಭಾರತದ ಚಿತ್ರೋದ್ಯಮದಲ್ಲಿ ಮೈಲಿಗಲ್ಲನ್ನೇ ಸ್ಥಾಪಿಸಿದೆ. ಸ್ಯಾಂಡಲ್‌ವುಡ್ ಸೇರಿದಂತೆ ಬಾಲಿವುಡ್, ಟಾಲಿವುಡ್ ಹಾಗೂ ಕಾಲಿವುಡ್ ಸಿನಿಮಾಗಳನ್ನು ನಿರ್ಮಿಸುತ್ತಿದೆ. ಸಿನಿಮಾ ಅದ್ದೂರಿಯಾಗಿ ಮೂಡಿ ಬರಬೇಕು ಎನ್ನುವುದು ಕೆವಿಎನ್ ಪ್ರೊಡಕ್ಷನ್ಸ್ ಆಶಯ. ಹಣ ಕೊಟ್ಟು ಸಿನಿಮಾ ನೋಡುವ ಪ್ರೇಕ್ಷಕರಿಗೆ ಮೋಸವಾಗಬಾರದು ಎಂಬುದು ಸಂಸ್ಥೆಯ ಆಶಯ. ಸಿನಿಮಾ ನೋಡಿ ಎದ್ದು ಹೊರಬರುವ ಪ್ರೇಕ್ಷಕರ ಮನದಲ್ಲಿ ಮತ್ತೊಮ್ಮೆ ಸಿನಿಮಾ ನೋಡಬೇಕು ಎನ್ನಿಸುವಂತೆ ಚಿತ್ರ ನಿರ್ಮಿಸುವ ಗುರಿ ಕೆವಿಎನ್ ಸಂಸ್ಥೆಯದ್ದು.

ವೆಂಕಟ್ ಕೆ. ನಾರಾಯಣ

ಕೆವಿಎನ್ ಪ್ರೊಡಕ್ಷನ್ಸ್ ಸಂಸ್ಥೆಯ ಮುಖ್ಯಸ್ಥ ವೆಂಕಟ್ ಕೆ. ನಾರಾಯಣ ಎಲ್ಲಾ ಭಾಷೆಗಳಲ್ಲಿ ದೊಡ್ಡ ಸ್ಟಾರ್‌ಗಳ ಜೊತೆಗೆ ದೊಡ್ಡ ಬಜೆಟ್‌ನ ಸಿನಿಮಾಗಳನ್ನು ಮಾಡುತ್ತಿದ್ದಾರೆ. ಕೆವಿಎನ್ ಸಾರಥ್ಯದಲ್ಲಿ ಮೂಡಿ ಬರುತ್ತಿರುವ ‘ಜನ ನಾಯಗನ್’ ಸಿನಿಮಾ ಚಿತ್ರೀಕರಣ ಭರದಿಂದ ಸಾಗಿದೆ.

ಈ ಚಿತ್ರದ ಆಗಮನಕ್ಕಾಗಿ ದಳಪತಿ ವಿಜಯ್ ಅಭಿಮಾನಿಗಳಷ್ಟೆ ಅಲ್ಲ, ಇಡೀ ದಕ್ಷಿಣ ಭಾರತ ಕಾಯುತ್ತಿದೆ. ಈ ಸಿನಿಮಾಗೆ ಬಂಡವಾಳ ಹಾಕಿರುವ ಕೆವಿಎನ್ ಪ್ರೊಡಕ್ಷನ್ಸ್ ಯಾವುದಕ್ಕೂ ಕೊರತೆ ಇಲ್ಲದಂತೆ ಚಿತ್ರ ನಿರ್ಮಾಣ ಮಾಡುತ್ತಿದೆ. ಸಂಸ್ಥೆ ಯಾವುದೇ ಸಿನಿಮಾ ಮಾಡಲಿ, ನಿರ್ಮಾಣದಲ್ಲಿ ಸಣ್ಣದೊಂದು ಲೋಪವೂ ಕಾಣಿಸುವುದಿಲ್ಲ!.

ಎಚ್. ವಿನೋತ್ ನಿರ್ದೇಶಿಸಿ, ಅನಿರುದ್ಧ್ ರವಿಚಂದರ್ ಸಂಗೀತ ನೀಡಿರುವ ಸಿನಿಮಾ, ದಳಪತಿ ವಿಜಯ್ ಅವರ ಕೋಟ್ಯಂತರ ಅಭಿಮಾನಿಗಳ ಹೃದಯ ಗೆಲ್ಲುವುದರಲ್ಲಿ ಅನುಮಾನವಿಲ್ಲ. ‘ಜನ ನಾಯಗನ್’ ನೋಡಲು ಜನ ಕೂಡ ಕಾತರದಿಂದ ಕಾಯುತ್ತಿದ್ದಾರೆ.

ಕೆವಿಎನ್ ಪ್ರೊಡಕ್ಷನ್ಸ್ ಹಲವಾರು ದೊಡ್ಡ ಸಿನಿಮಾಗಳೊಂದಿಗೆ ವಿತರಣೆಯಲ್ಲೂ ಒಳ್ಳೆಯ ಹೆಸರು ಮಾಡಿದೆ. ಇನ್ನು ನಿರ್ಮಾಣದ ವಿಚಾರಕ್ಕೆ ಬಂದರೆ, ದೊಡ್ಡ ಸ್ಟಾರ್‌ಗಳ ದೊಡ್ಡ ಬಜೆಟ್ ಸಿನಿಮಾ ನಿರ್ಮಾಣದ ಮೂಲಕ ದೇಶದಾದ್ಯಂತ ಹೆಸರು ಮಾಡಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಇಂದಿನಿಂದ ಅಮೋಘ ಪ್ರಾರಂಭ

ವಿಶಾಲ ಕರ್ನಾಟಕಕ್ಕೆ ಹಂಚಿಕೆದಾರರು ಇ.ಕೆ.ಪಿಕ್ಚರ್ಸ್, ಬೆಂಗಳೂರು. 9148819555 - 9844080063

ತ್ರಿವೇಣಿ ಕೆಂಪೇಗೌಡ ಸರ್ಕಲ್ DOLBY DIGITAL 7.1 4K DIGITAL SCRABBLE 4ಆಟ

ವೀರೇಶ್ ಸಿನಿಮಾಸ್ (4ಆಟ)

PVR INOX: MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD

cinépolis: ETA | MEENAKSHI | ORION EAST | LULU | SHANTINIKETAN | SJR

GOPALAN CINEMAS: ARCH | INNOVATION | GRAND | SIGNATURE | LEGACY

ROCKLINE cinemas JALAHALLI

MIRAJ SUNKADAKATTE

CINEPHILE THE MOVIE HUB HSR LAYOUT

INNOVATIVE MULTIPLEX MARATHHALLI

KINO CINEMAS SEEGEHALLI

new Fangled M.G.ROAD

MOVIETIME CINEMAS R.R.NAGAR

VAISHNAVI VAIBHAVI UTHARAHALLI

Balaji Cinemas : Multiplex CHIKKALASANDRA

V CINEMAS RAMMURTHYNAGAR

ಕಮಲಾನಗರ(5ಆಟ) ವೀರಭದ್ರೇಶ್ವರ
ರಾಜಾಜಿನಗರ(4ಆಟ) ನವರಂಗ್
ಸಂಜಯನಗರ(4ಆಟ) ವೈಭವ್
ಜೆ.ಪಿ.ನಗರ(4ಆಟ) ಸಿದ್ಧೇಶ್ವರ
ಕತ್ರಿಗುಪ್ಪೆ(4ಆಟ) ಕಾಮಾಕ್ಯ
ಕೆಂಗೇರಿ(4ಆಟ) ರಾಬಿನ್
ಆವಲಹಳ್ಳಿ(4ಆಟ) ವೆಂಕಟೇಶ್ವರ
ಸುಂಕದಕಟ್ಟೆ(4ಆಟ) ಮೋಹನ್
ಪೀಣ್ಯ(4ಆಟ) ಭಾರತಿ
ಗೌಡನಪಾಳ್ಯ(4ಆಟ) ಶ್ರೀನಿವಾಸ
ಗೊಲ್ಲರಹಟ್ಟಿ(4ಆಟ) ವೆಂಕಟೇಶ್ವರ
ಕೊಡಿಗೇಹಳ್ಳಿ(4ಆಟ) ರಾಜ್‌ಮುರಳಿ
ತುಮಕೂರು(4ಆಟ) ಗಾಯತ್ರಿ, PVR INOX
ದೊಡ್ಡಬಳ್ಳಾಪುರ(4ಆಟ) ರಾಜ್‌ಕಮಲ್
ರಾಮನಗರ(4ಆಟ) ಶಾನ್
ನೆಲಮಂಗಲ(4ಆಟ) ರೂಪ
ಕನಕಪುರ(4ಆಟ) ಗೋಪಾಲಕೃಷ್ಣ
ತಿಪಟೂರು(4ಆಟ) ಲಕ್ಷ್ಮಿ
ಚನ್ನಪಟ್ಟಣ(4ಆಟ) ಶಿವಾನಂದ

ಕುಣಿಗಲ್(4ಆಟ) ಪದ್ಮ
ಮಾಗಡಿ(4ಆಟ) ಬಾಲಾಜಿ
ಶಿರಾ(4ಆಟ) ಭಾಗ್ಯಲಕ್ಷ್ಮಿ
ಮೈಸೂರು(4ಆಟ) ವುಡ್‌ಲ್ಯಾಂಡ್ಸ್, PVR INOX GARUDA | FORUM | SATYAM, DRC CINEMAS, VISION CINEMAS
ಮಂಡ್ಯ(4ಆಟ) ಗುರುಶ್ರೀ
ಹಾಸನ(4ಆಟ) ಎಸ್.ಬಿ.ಜಿ
ಚಾಮರಾಜನಗರ(4ಆಟ) ಸಿಂಹ
ಕೊಳ್ಳೇಗಾಲ(4ಆಟ) ಶಾಂತಿ
ಚನ್ನರಾಯಪಟ್ಟಣ(4ಆಟ) ಗಾಯತ್ರಿ
ಗುಂಡ್ಲುಪೇಟೆ(4ಆಟ) ಸೂರ್ಯ
ಕೆ.ಆರ್.ನಗರ(4ಆಟ) ಗೌರಿಶಂಕರ
ಕೆ.ಆರ್.ಪೇಟೆ(4ಆಟ) ಬಸವೇಶ್ವರ
ಹೊಳೆನರಸೀಪುರ(4ಆಟ) ಚೆನ್ನಾಂಬಿಕಾ
ಮದ್ದೂರು(4ಆಟ) ಸಂಜಯ
ಪಿರಿಯಾಪಟ್ಟಣ(4ಆಟ) ಶಾರದ
ಮಳವಳ್ಳಿ(4ಆಟ) ಮಹಾಲಕ್ಷ್ಮಿ
ಟಿ.ನರಸೀಪುರ(4ಆಟ) ವಿಜಯಭಗವಾನ್

ಅರಸೀಕೆರೆ(4ಆಟ) ರತ್ನ
ಚಿತ್ರದುರ್ಗ(4ಆಟ) ವೆಂಕಟೇಶ್ವರ
ದಾವಣಗೆರೆ(4ಆಟ) ತ್ರಿನೇತ್ರ, MOVIETIME CINEMAS
ಬಳ್ಳಾರಿ(4ಆಟ) ನಟರಾಜಕಾಂಪ್ಲೆಕ್ಸ್, MOVIETIME CINEMAS
ಹೊಸಪೇಟೆ(4ಆಟ) ಲಕ್ಷ್ಮಿ
ಹಿರಿಯೂರು(4ಆಟ) ನಂಜುಂಡೇಶ್ವರ
ಶಿವಮೊಗ್ಗ(4ಆಟ) ಮಲ್ಲಿಕಾರ್ಜುನ, Bharath Cinemas
ಚಿಕ್ಕಮಗಳೂರು(4ಆಟ) ನಾಗಲಕ್ಷ್ಮಿ
ಭದ್ರಾವತಿ(4ಆಟ) ಸತ್ಯ
ಕಡೂರು(4ಆಟ) ವಿಜಯಲಕ್ಷ್ಮಿ
ಹುಬ್ಬಳ್ಳಿ(4ಆಟ) LAXMI CITY PRIDE MULTIPLEX, cinépolis
ಧಾರವಾಡ(4ಆಟ) ಪದ್ಮ, PVR INOX
ಬೆಳಗಾವಿ(4ಆಟ) ಪ್ರಕಾಶ್, PVR INOX, KAPEEL
ಗದಗ(4ಆಟ) ಕೃಷ್ಣ
ಬಿಜಾಪುರ(4ಆಟ) ಡ್ರೀಮ್‌ಲ್ಯಾಂಡ್
ರಾಣೆಬೆನ್ನೂರು ಶಿವಶಕ್ತಿ

ಹಾವೇರಿ(4ಆಟ) ಮಾಧವಿ
ಬಾಗಲಕೋಟೆ(4ಆಟ) ವಾಸವಿ
ಗೋಕಾಕ್(4ಆಟ) ಲಕ್ಷ್ಮಿ
ನಿಪ್ಪಾಣಿ MAGNUM CINEMAS
ಗುಲ್ಬರ್ಗ(4ಆಟ) ಸಂಗಮ್, PVR INOX, MIRAJ, SHETTY'S MULTIPLEX
ರಾಯಚೂರು MIRAJ
ಬೀದರ್ ಸಪ್ನ
ಗಂಗಾವತಿ(4ಆಟ) ಶಿವೆ
ಕೊಪ್ಪಳ(4ಆಟ) ಲಕ್ಷ್ಮಿ
ಮಂಗಳೂರು PVR INOX, cinépolis, Bharath Cinemas
ಉಡುಪಿ Bharath Cinemas
ಮಣಿಪಾಲ PVR INOX, Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas
ಪುತ್ತೂರು Bharath Cinemas

ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಯುಗಾದಿ
SALE
UPTO 20% ಕ್ಯಾಷ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
1 ಇ.ಎಮ್.ಐ ಉಚಿತ
UPTO ₹25,000 ಕಡಿತ ಎಕ್ಸ್ಚೇಂಜ್ ಮೇಲೆ
Upto 70% ಕಡಿತ*
ಫೈನಾನ್ಸ್ ಬೊನಾಂಜಾ Upto 10,000 ಕ್ಯಾಷ್ ಬ್ಯಾಕ್*
HDFC BANK 10% CASH BACK ON CC & DC EMI* MIN SWIPE ₹20,000 MAX CASH BACK UPTO ₹3,000
LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER INDUCTION COOKER STEAM IRON KETTLE DRY IRON
ಏರ್ ಕಂಡಿಷನರ್ ಮೇಲೆ ಉಚಿತ ಇನ್‌ಸ್ಟಾಲೇಷನ್*
24H SERVICE
STORE LOCATOR
ನಮ್ಮ ಮಳಿಗೆಗಳು 9.30AM - 10.30PM ತೆರೆದಿರುತ್ತವೆ
DAIKIN 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹3,366
BLUE STAR 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹3,249
LG 1.5 TON 3 STAR SPLIT AIR CONDITIONER US-Q18ENXE UPTO 5% CASH BACK ಇ.ಎಮ್.ಐ ₹3,583
SAMSUNG 2.0TON 3 STAR SPLIT AIR CONDITIONER AR60F24D13W UPTO 5% CASH BACK ಇ.ಎಮ್.ಐ ₹7,749
Panasonic 1.0 TON 5 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹5,486
Haier 1.5 TON 3STAR SPLIT AIR CONDITIONER UPTO 5% CASH BACK ಇ.ಎಮ್.ಐ ₹2,994
VOLTAS 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹3,589
Godrej 2.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹4,839
HITACHI 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹4,611
ಉಚಿತ: ₹20000 ಮೌಲ್ಯದ FIREBOLTT SMART CALLING WATCH
WIDEST RANGE OF AIRCOOLERS UPTO 5% CASH BACK EMI STARTS FROM ₹1,333
Symphony KENSTAR BAJAJ
TOSHIBA 587 ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ 10% CASH BACK ಇ.ಎಮ್.ಐ ₹4,293
LG 650 ಲೀ ಸೈಡ್ ಬೈ ಸೈಡ್ REFRIGERATOR WITH HYGIENE FRESH+ GL-B257DBM3 20% CASH BACK ಇ.ಎಮ್.ಐ ₹4,999
SAMSUNG 653 ಲೀ ಸೈಡ್ ಬೈ ಸೈಡ್ RS76CG8103S9HL 20% CASH BACK ಇ.ಎಮ್.ಐ ₹4,990
NEW ARRIVAL Haier 520 LITRES BLACK GLASS 4 DOOR SIDE BY SIDE WI-FI REFRIGERATOR 10% CASH BACK ಇ.ಎಮ್.ಐ ₹2,994
Whirlpool 260 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ DOUBLE DOOR 10% CASH BACK ಇ.ಎಮ್.ಐ ₹2,499
Panasonic 235 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ DOUBLE DOOR 10% CASH BACK ಇ.ಎಮ್.ಐ ₹2,166
LAPTOP 10% CASH BACK EMI STARTS FROM ₹2,749 ₹32,990 Onwards ಉಚಿತ: GIFTS UPTO ₹8990*
OPPO F27 5G 8+128 ₹2,000* CASH BACK SPECIAL PRICE ₹19,690* ಇ.ಎಮ್.ಐ ₹1,641 ಉಚಿತ: 10,000 MAH POWER BANK WORTH ₹1499*
vivo V50 EFFECTIVE PRICE ₹30,400* (PRICE AFTER CASH BACK) ಇ.ಎಮ್.ಐ ₹1,590 ಉಚಿತ: SMART WATCH WORTH ₹8499*
realme 14X 5G 6 + 128 10% CASH BACK EFFECTIVE PRICE ₹13,490* (PRICE AFTER CASH BACK) ಇ.ಎಮ್.ಐ ₹1,208 ಉಚಿತ: BT NECKBAND WORTH ₹1499*
iPhone 16 / 16E EFFECTIVE PRICE ₹54,890* (PRICE AFTER CASH BACK) ONWARDS EMI STARTS FROM ₹3,272 ಉಚಿತ: MAGSAFE POWERBANK 10000 MAH WORTH ₹7499
SAMSUNG S25 10% CASH BACK EFFECTIVE PRICE ₹73,999* (PRICE AFTER CASH BACK) EMI STARTS FROM ₹3,375
Panasonic 43 4K ULTRA HD SMART ಎಲ್ಇಡಿ GOOGLE TV 10% CASH BACK ಇ.ಎಮ್.ಐ ₹5,186
Haier 55 4K SMART GOOGLE ಎಲ್ಇಡಿ 10% CASH BACK ಇ.ಎಮ್.ಐ ₹1,994
SONY 55 4K ULTRA HD SMART ಎಲ್ಇಡಿ GOOGLE TV K-55XR70 10% CASH BACK ಇ.ಎಮ್.ಐ ₹5,500
BOSCH 8 ಕೆಜಿ ಫ್ರಂಟ್ ಲೋಡಿಂಗ್ 10% CASH BACK ಇ.ಎಮ್.ಐ ₹3,299
IFB DISHWASHER 16 PLACE SETTING 5% CASH BACK ಇ.ಎಮ್.ಐ ₹4,741
LG 32 L SCAN-TO-COOK CHARCOAL MICROWAVE OVEN WITH HEALTHY HEART™, CHARCOAL LIGHTING HEATER, MOTORISED ROTISSERIE, BLACK MJEN326SFW 10% CASH BACK ಇ.ಎಮ್.ಐ ₹2,833
LG SOUNDBAR S40T 2.1 CH, 300W, AI SOUND PRO, DOLBY DIGITAL ಇ.ಎಮ್.ಐ ₹971 SPECIAL PRICE: ₹11,650 MRP: ₹26,990
CHIMNEY UPTO 54% OFF KAFF FABER HÄFELE Crompton Prestige BOSCH
ELECTRIC WATER HEATER UPTO 60% OFF Racold Haier HAVELLS BAJAJ V-GUARD KENSTAR
WATER PURIFIERS EMI STARTS FROM ₹1,000 EUREKA FORBES HAVELLS LG Livpure
VACCUM CLEANERS EMI STARTS FROM ₹875 EUREKA FORBES LG Panasonic dyson
MIXER GRINDER EMI STARTS FROM ₹1,167 Preethi Panasonic Butterfly HAVELLS BAJAJ BOSCH V-GUARD Prestige
LG SAMSUNG SONY Haier Panasonic ONIDA IFB godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo OPPO ONEPLUS mi iPhone JBL
BLUE STAR HÄFELE Symphony HAVELLS USHA DAIKIN O GENERAL Prestige VOLTAS HITACHI VOLTAS beko Butterfly Preethi ULTRA EUREKA FORBES Livpure FABER KENSTAR BAJAJ Crompton MAHARAJA V-GUARD ZEBRONICS KAFF OZONE
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.10000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fer clearing 3 EMI. *Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
171 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

‘ಹರಿಯಾಣದಲ್ಲಿ ಶೀಘ್ರ ‘ನಂದಿನಿ’ ಹಾಲು ಲಭ್ಯ’

ನವದೆಹಲಿ (ಪಿಟಿಐ): ಉತ್ತರ ಭಾರತದಲ್ಲೂ ನಂದಿನಿ ಉತ್ಪನ್ನಗಳ ಮಾರಾಟ ಜಾಲ ವಿಸ್ತರಿಸುವ ಭಾಗವಾಗಿ ಶೀಘ್ರವೇ ಹರಿಯಾಣದಲ್ಲಿ ‘ನಂದಿನಿ’ ಹಸು ಹಾಲು ಮಾರಾಟ ಕೇಂದ್ರಕ್ಕೆ ಚಾಲನೆ ನೀಡಲಾಗುವುದು ಎಂದು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಗುರುವಾರ ತಿಳಿಸಿದೆ.

ಉತ್ತರ ಪ್ರದೇಶ, ಉತ್ತರಾಖಂಡ, ರಾಜಸ್ಥಾನ ಮತ್ತು ದೆಹಲಿಯಲ್ಲಿ ಈಗಾಗಲೇ ಕೆಎಂಎಫ್ ತನ್ನ ಜಾಲವನ್ನು ಹೊಂದಿದೆ.

ಈ ಕುರಿತು ಪ್ರತಿಕ್ರಿಯಿಸಿದ ಉತ್ತರ ಭಾರತದ ಕೆಎಂಎಫ್ ಮುಖ್ಯಸ್ಥ ಅಮಿತ್ ಸಿಂಗ್, ‘ಶೀಘ್ರವೇ ಹರಿಯಾಣದಲ್ಲೂ ನಂದಿನ ಹಾಲು ಲಭ್ಯವಾಗಲಿದೆ’ ಎಂದರು.

ಉತ್ತರ ಭಾರತದಲ್ಲಿ ನಂದಿನಿ ಹಾಲು ಉತ್ಪನ್ನಗಳ ಪೂರೈಕೆ ಜಾಲಕ್ಕೆ ಬಲ ತುಂಬಲು ಉತ್ತರ ಭಾರತದ ಹಂಚಿಕೆದಾರರ ಜೊತೆಗೆ ಕೆಎಂಎಫ್ ಸಭೆ ನಡೆಸಿತು. ನಂದಿನಿ ಹಾಲಿನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ‘ಹರ್ ಘರ್ ನಂದಿನಿ ಅಭಿಯಾನ’ಕ್ಕೆ ಚಾಲನೆ ನೀಡಲಾಗಿದೆ.

ಉಚ್ಚಾಟನೆ ಮರು ಪರಿಶೀಲನೆಗೆ ಪಕ್ಷದ ಹೈಕಮಾಂಡ್‌ಗೆ ಪತ್ರ: ಶಾಸಕ ರಮೇಶ ಜಾರಕಿಹೊಳಿ

‘ಬಿಜೆಪಿ ಭಿನ್ನಮತೀಯರ ಸಭೆ ಇಂದು’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಬಸನಗೌಡ ಪಾಟೀಲ ಯತ್ನಾಳ ವಿರುದ್ಧದ ಕ್ರಮ ನಿರೀಕ್ಷಿತವಾಗಿತ್ತು. ಆದರೆ, ಅವರ ಉಚ್ಚಾಟನೆ ವಿಷಯ ಮರು ಪರಿಶೀಲನೆಗೆ ಕೋರಿ ಬಿಜೆಪಿ ಹೈಕಮಾಂಡ್‌ಗೆ ಪತ್ರ ಬರೆಯುತ್ತೇವೆ. ಈ ಸಂಬಂಧ ಎಲ್ಲ ಭಿನ್ನಮತೀಯರು ಬೆಂಗಳೂರಿನಲ್ಲಿ ಶುಕ್ರವಾರ (ಮಾರ್ಚ್ 28) ಸಭೆ ಸೇರುತ್ತೇವೆ’ ಎಂದು ಶಾಸಕ ರಮೇಶ ಜಾರಕಿಹೊಳಿ ಗುರುವಾರ ಹೇಳಿದರು.



ರಮೇಶ ಜಾರಕಿಹೊಳಿ

‘ಯತ್ನಾಳ ಒಂಟಿ ಅಲ್ಲ. ಅವರೊಂದಿಗೆ ನಾವೆಲ್ಲರೂ ಗಟ್ಟಿಯಾಗಿ ನಿಲ್ಲುತ್ತೇವೆ. ಅವರು ಬಿಜೆಪಿಗೆ ವಾಪಸ್ ಆಗುವರು ಎಂಬ ವಿಶ್ವಾಸವಿದೆ. ಏನೇ ಆದರೂ, ಯತ್ನಾಳ ಮತ್ತು ನಮ್ಮ ತಂಡದವರು ಬಿಜೆಪಿಯಲ್ಲೇ ಇರುತ್ತೇವೆ. ಮುಂದಿನ ಸಲ ನಮ್ಮದೇ ಸರ್ಕಾರ ತರಲು ಪ್ರಯತ್ನಿಸುತ್ತೇವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ಪಕ್ಷದ ದೊಡ್ಡ ನಾಯಕ ಯತ್ನಾಳ ದೊಡ್ಡ ಸಮುದಾಯದವರು. ಅವರನ್ನು ಪಕ್ಷ ಸರಿಯಾಗಿ ಬಳಸಿಕೊಳ್ಳಬೇಕಿತ್ತು. ಹಾಗೆಂದು ಪಕ್ಷದ ನಿರ್ಣಯ ಪ್ರಶ್ನಿಸುವಷ್ಟು ದೊಡ್ಡ ವ್ಯಕ್ತಿ ನಾನಲ್ಲ’ ಎಂದರು.

‘ಪಕ್ಷದ ನಾಯಕರ ವಿರುದ್ಧ ನಾನೂ ಮಾತನಾಡಿದ್ದೇನೆ. ಸೋಮಶೇಖರ ಅವರಿಗೂ ನೋಟಿಸ್ ಜಾರಿಯಾಗಿದೆ. ಆದರೆ, ಯತ್ನಾಳ ಅವರ ಮೇಲೆ ಪಕ್ಷಕ್ಕೆ ಹೆಚ್ಚು ಪ್ರೀತಿ ಇದೆ. ಅದೇ ಕಾರಣಕ್ಕೆ ಅವರ ಉಚ್ಚಾಟನೆಯಾಗಿದೆ’ ಎಂದರು.

‘ಕೇಂದ್ರದ ಪ್ರಮುಖ ನಾಯಕರೊಂದಿಗೆ ಮಾತನಾಡಿ, ಬಿಜೆಪಿಯು ತಂದೆ-ತಾಯಿ ಸಮಾನ ಎಂದು ತಿಳಿಸಿದ್ದೇನೆ. ಬಿ.ವೈ.ವಿಜಯೇಂದ್ರ ಕುರಿತು ನಾನು ಏನನ್ನೂ ಹೇಳುವುದಿಲ್ಲ. ಆದರೆ, ಈ ಹಿಂದೆ ಅವರ ಬಗ್ಗೆ ಆಡಿದ ಎಲ್ಲ ಮಾತಿಗೆ ನಾನು ಬದ್ಧನಿದ್ದೇನೆ’ ಎಂದರು.

> **ಯತ್ನಾಳ ಅವರ ಉಚ್ಚಾಟನೆಯಿಂದ ಬಿಜೆಪಿಗೆ ನಷ್ಟ. ನಿರ್ಣಯವನ್ನು ಮರುಪರಿಶೀಲಿಸಲು ವರಿಷ್ಠರೊಂದಿಗೆ ಚರ್ಚಿಸುವೆ ಹೊರತು ಉಚ್ಚಾಟನೆ ಕುರಿತು ಪ್ರಶ್ನಿಸುವುದಿಲ್ಲ**
> **ಬಿ.ಶ್ರೀರಾಮುಲು,** ಮಾಜಿ ಸಚಿವ

> **ಯತ್ನಾಳ ಅವರ ಉಚ್ಚಾಟನೆ ಪಕ್ಷದ ನಿರ್ಣಯ. ನಾನು ಪ್ರತಿಕ್ರಿಯೆ ನೀಡಲ್ಲ. ಆದರೆ, ಎರಡು ಮೂರು ದಿನಗಳಲ್ಲಿ ಅದರ ಪರಿಣಾಮ ಗೊತ್ತಾಗಲಿದೆ**
> **ಶಿವರಾಮ ಹೆಬ್ಬಾರ,** ಶಾಸಕ

> **ಯತ್ನಾಳ ಒಂದು ವರ್ಷದಿಂದ ಪಕ್ಷದ ವಿರುದ್ಧ ಹೇಳಿಕೆ ನೀಡುತ್ತಿದ್ದರು. ತಿದ್ದಿಕೊಳ್ಳಲು ಹಲವು ಅವಕಾಶ ನೀಡಿದರೂ ಸುಧಾರಿಸಿಲ್ಲ. ವ್ಯಕ್ತಿಗಿಂತ ಪಕ್ಷ ದೊಡ್ಡದು**
> **ಮುರುಗೇಶ ನಿರಾಣಿ,** ಮಾಜಿ ಸಚಿವ

> **ಪಕ್ಷ ಹಲವು ಕಾರಣಕ್ಕೆ ಅನಿವಾರ್ಯ ತೀರ್ಮಾನಕ್ಕೆ ಬಂದಿದೆ. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ, ಈ ವಿಚಾರದ ಬಗ್ಗೆ ವಿಶ್ಲೇಷಣೆ ಮಾಡುವುದಿಲ್ಲ**
> **ಸಿ.ಟಿ. ರವಿ,** ವಿಧಾನ ಪರಿಷತ್ ಸದಸ್ಯ

‘ಉಚ್ಚಾಟನೆ: ಹಿಂಪಡೆಯಲು ಏ.10 ಗಡವು’



ಬಸವಜಯ ಮೃತ್ಯುಂಜಯ ಸ್ವಾಮೀಜಿ

‘ಬಸನಗೌಡ ಪಾಟೀಲ ಯತ್ನಾಳ ಅವರ ಉಚ್ಚಾಟನೆ ಆದೇಶವನ್ನು ಏಪ್ರಿಲ್ 10ರೊಳಗೆ ಹಿಂಪಡೆಯಬೇಕು. ಇಲ್ಲದಿದ್ದರೆ, ಏಪ್ರಿಲ್ 13ರಿಂದ ಸಮಾಜದಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು’ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.‘ಯಡಿಯೂರಪ್ಪ, ವಿಜಯೇಂದ್ರ ಕುತಂತ್ರದಿಂದ ಯತ್ನಾಳ ಉಚ್ಚಾಟನೆಯಾಗಿದೆ. ಲಿಂಗಾಯತರನ್ನು ಕಡೆಗಣಿಸಿ ರಾಜ್ಯದಲ್ಲಿ ಸರ್ಕಾರಗಳು ಉಳಿದಿಲ್ಲ. ದೊಡ್ಡ ಬಲ ಹೊಂದಿದ ಪಂಚಮಸಾಲಿ ನಾಯಕರನ್ನು ತುಳಿದವರು ಉದ್ಧಾರವಾಗಿಲ್ಲ. ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲ, ಜೆ.ಎಚ್. ಪಟೇಲ್ ಅವರ ಕಾಲದಿಂದ ಇದಕ್ಕೆ ಉದಾಹರಣೆಗಳಿವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಉತ್ತರ ಕರ್ನಾಟಕದ ಅಭಿವೃದ್ಧಿ, ಪಂಚಮಸಾಲಿ ಸಮಾಜದ ಮೀಸಲಾತಿ, ಹಿಂದೂ ಪರ ನಿಲುವಿಗೆ ಯತ್ನಾಳ ಅವರು ಯಾವಾಗಲೂ ಮುಂದಿದ್ದಾರೆ. ಎಲ್ಲ ಜಾತಿ, ಸಮಾಜದವರೊಂದಿಗೂ ನಿಂತಿದ್ದಾರೆ. ಈಗ ಎಲ್ಲರೂ ಅವರ ಬೆಂಬಲಕ್ಕೆ ನಿಲ್ಲುವರು’ ಎಂದರು.

‘ಯತ್ನಾಳ ಅವರ ಬಗ್ಗೆ ಪಂಚಮಸಾಲಿ ಸಮಾಜದ ಎಲ್ಲ ಶಾಸಕರು, ಸಂಸದರು ಬಿಜೆಪಿ ವರಿಷ್ಠರಿಗೆ ಮನವರಿಕೆ ಮಾಡಿಕೊಡಬೇಕು. ಸಮಾಜದವರೂ ಅವರ ಪರ ನಿಲ್ಲಬೇಕು’ ಎಂದರು.

ಸುದ್ದಿ 2 ನಿಮಿಷ

ಮಾಧ್ಯಮದವರಿಂದ ಅಂತರ ಕಾಯ್ದುಕೊಂಡ ಯತ್ನಾಳ

ಕಲಬುರಗಿ: ಉಚ್ಚಾಟಿತರಾದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬುಧವಾರ ತಡರಾತ್ರಿ ಚಿಂಚೋಳಿಗೆ ಬಂದು, ತಮ್ಮ ಸಿದ್ಧಸಿರಿ ಎಥೆನಾಲ್ ಪವರ್ ಘಟಕದ ಅತಿಥಿ ಗೃಹದಲ್ಲಿ ವಾಸ್ತವ್ಯ ಹೂಡಿದ್ದಾರೆ. ಮಾಧ್ಯಮ ಪ್ರತಿನಿಧಿಗಳು ಗುರುವಾರ ಇಡೀ ದಿನ ಅತಿಥಿ ಗೃಹದ ಮುಂಭಾಗ ಕಾದು ಕುಳಿತರೂ ಕಾಣಿಸಿಕೊಳ್ಳದೇ ಅಂತರ ಕಾಯ್ದುಕೊಂಡರು.

ದೆಹಲಿಯಿಂದ ವಿಮಾನದಲ್ಲಿ ಹೈದರಾಬಾದ್‌ಗೆ ಬಂದ ಯತ್ನಾಳ, ಅಲ್ಲಿಂದ ಕಾರಿನಲ್ಲಿ ಚಿಂಚೋಳಿಗೆ ಬಂದು ಅತಿಥಿ ಗೃಹದಲ್ಲಿ ತಂಗಿದರು. ಅವರೊಂದಿಗೆ ಪುತ್ರ ರಾಮನಗೌಡ ಪಾಟೀಲ, ಕಾರ್ಖಾನೆಯ ನಿರ್ದೇಶಕರು ಇದ್ದರು. ಯತ್ನಾಳ ಅವರನ್ನು ಮಾತನಾಡಿಸಲು ಮಾಧ್ಯಮ ಪ್ರತಿನಿಧಿಗಳು ಅತಿಥಿ ಗೃಹದ ಆವರಣ ಪ್ರವೇಶಿಸುತ್ತಿದ್ದಂತೆ ಭದ್ರತಾ ಸಿಬ್ಬಂದಿ ತಡೆದು ಅವರನ್ನು ಹೊರಗೆ ಕಳುಹಿಸಿದರು.

ಉಚ್ಚಾಟನೆ ಖಂಡಿಸಿ ಪ್ರತಿಭಟನೆ

ವಿಜಯಪುರ: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿದ್ದನ್ನು ಖಂಡಿಸಿ ನಗರದ ಗಾಂಧಿ ಚೌಕಿಯಲ್ಲಿ ಗುರುವಾರ ಪಂಚಮಸಾಲಿ ಸಮಾಜದವರು ಪ್ರತಿಭಟನೆ ನಡೆಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ಮಾನವ ಸರಪಳಿ ರಚಿಸಿ, ರಸ್ತೆ ಸಂಚಾರ ಬಂದ್ ಮಾಡಿದರು.

‘ಯತ್ನಾಳ ಅವರನ್ನು ಉಚ್ಚಾಟಿಸಿದ ನಿರ್ಣಯವನ್ನು ಪಕ್ಷದ ವರಿಷ್ಠರು ಹಿಂಪಡೆಯಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ಮಾಡುತ್ತೇವೆ’ ಎಂದು ಸಮಾಜದ ಮುಖಂಡರು ಎಚ್ಚರಿಕೆ ನೀಡಿದರು.

ಪಂಚಮಸಾಲಿ ಸಮಾಜದ ಮುಖಂಡ ಎಂ.ಎಸ್.ರುದ್ರಗೌಡ, ಬಿ.ಎಸ್.ಪಾಟೀಲ ನಾಗರಾಳಹುಲಿ, ಲಕ್ಷ್ಮೀ ಕನ್ನೊಳ್ಳಿ, ಅಶೋಕ ಗಂಗಣ್ಣವರ, ಡಾ.ಸಿ.ಎಸ್.ಸೋಲಾಪುರ, ರಾಜುಗೌಡ ಪಾಟೀಲ ಕುದರಿ ಸಾಲವಾಡಗಿ ಇದ್ದರು.

ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ ತಿರುಗೇಟು

‘ಸಮಾಜಕ್ಕೆ ತಳಕು ಹಾಕಬೇಡಿ’

ಪ್ರಜಾವಾಣಿ ವಾರ್ತೆ

ಕೂಡಲಸಂಗಮ (ಬಾಗಲಕೋಟೆ): ‘ಯತ್ನಾಳ ಉಚ್ಚಾಟನೆ ಒಂದು ಪಕ್ಷದ ನಿರ್ಣಯವೇ ಹೊರತು ಪಂಚಮಸಾಲಿ ಸಮಾಜ, ಪೀಠದ ನಿರ್ಣಯವಲ್ಲ. ಅದನ್ನು ಸಮಾಜಕ್ಕೆ ತಳಕು ಹಾಕುವ ಕೆಲಸ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾಡಬಾರದು’ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

‘ಉಚ್ಚಾಟನೆ ವಿಷಯಕ್ಕೆ ಪೂರಕವಾಗಿ ಹೋರಾಟಕ್ಕೆ ಕರೆ ಕೊಡಲು ಸ್ವಾಮೀಜಿಗೆ ನೈತಿಕ ಹಕ್ಕಿಲ್ಲ.

ವಿಜಯಾನಂದ ಕಾಶಪ್ಪನವರ

ಗುರುಗಳು ಎಲ್ಲ ನಾಯಕರಿಗೂ ಸಮಾನವಾಗಿರಬೇಕು. ಒಂದು ಪಕ್ಷ, ವ್ಯಕ್ತಿಗೆ ಸೀಮಿತರಾಗಬಾರದು. ಗುರುಗಳಿಗೆ ಸಲಹೆ ಕೊಡುವಷ್ಟು ನಾನು ದೊಡ್ಡವನಲ್ಲ. ಆದರೆ, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷನಾಗಿ ನನ್ನ ಕರ್ತವ್ಯ ನಿರ್ವಹಿಸಿದ್ದೇನೆ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಗುರುಗಳು ಹಲವು ತಪ್ಪು ಹೆಜ್ಜೆ ಇಟ್ಟಿದ್ದಾರೆ. ರಾಜೀನಾಮೆಗೆ ಕರೆಕೊಟ್ಟರೆ, ಸಮಾಜದ ಶಾಸಕರು ರಾಜೀನಾಮೆ ಕೊಡಲ್ಲ. ನಾವು ಜನರನ್ನು ನಂಬಿ ರಾಜಕಾರಣ ಮಾಡುತ್ತೇವೆ ಹೊರತು ಗುರುಗಳನ್ನು ಆಧರಿಸಿ ಅಲ್ಲ. ಗುರುಗಳು ಇಂಥ ವಿಷಯ ಚರ್ಚಿಸಬಾರದು. ನಾವು ಈಗಾಗಲೇ ಅವರನ್ನು ಬಿಜೆಪಿಯ ಗುರುಗಳು ಎಂದು ಪರಿಗಣಿಸಿದ್ದೇವೆ’ ಎಂದರು.

‘ಬಸವಣ್ಣನವರ ಬಗ್ಗೆ ಕೀಳಾಗಿ ಮಾತಾಡಿದಕ್ಕೆ ಯತ್ನಾಳ ಅವರಿಗೆ ಈ ಗತಿ ಬಂದಿದೆ. ಬಿಜೆಪಿ ಸೂಕ್ತ ನಿರ್ಣಯ ತೆಗೆದುಕೊಂಡಿದೆ. ಒಂದು ವೇಳೆ ಯತ್ನಾಳ ಕಾಂಗ್ರೆಸ್‌ಗೆ ಸೇರ್ಪಡೆಯಾದರೆ, ನಾನು ವಿರೋಧಿಸುವೆ’ ಎಂದರು.

ರಂಜಾನ್ ಸಡಗರ

ರಂಜಾನ್ ಹಬ್ಬದ ಅಂಗವಾಗಿ ಕಲಬುರಗಿ ಮಾರುಕಟ್ಟೆಯಲ್ಲಿ ಬಣ್ಣ ಬಣ್ಣದ ನಮಾಜ್ ಟೊಪ್ಪಿಗಳನ್ನು ಜನ ಖರೀದಿಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

₹ 1 ಲಕ್ಷ ಲಂಚ: ಸಿಕ್ಕಿಬಿದ್ದ ಮಾಹಿತಿ ಆಯೋಗದ ಆಯುಕ್ತ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಪ್ಪು ಪಟ್ಟಿಯಿಂದ ಹೆಸರನ್ನು ಕೈಬಿಡಲು ಅರ್ಜಿದಾರರಿಂದ ₹ 1 ಲಕ್ಷ ಲಂಚ ಪಡೆದ ಆರೋಪದಡಿ ರಾಜ್ಯ ಮಾಹಿತಿ ಆಯೋಗ ಕಲಬುರಗಿ ಪೀಠದ ಆಯುಕ್ತ ರವೀಂದ್ರ ಗುರುನಾಥ ಡಾಕಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

‘ಕಲಬುರಗಿ ಕಲರವ’ ಮಾಸ ಪತ್ರಿಕೆ ಸಂಪಾದಕ ಸಾಯಿಬಣ್ಣ ನಾಸಿ ಅವರು ನೀಡಿದ ದೂರಿನ ಅನ್ವಯ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದರು.

ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸಾಯಿಬಣ್ಣ ಅವರು ಆರ್‌ಟಿಐ ಅಡಿ 117 ಅರ್ಜಿಗಳನ್ನು ಸಲ್ಲಿಸಿದ್ದರು. ವೈಯಕ್ತಿಕ ಹಿತಾಸಕ್ತಿಗಾಗಿ ಮಾಹಿತಿ ಕೇಳಿದ್ದಾರೆ ಎಂದು ಏಕಪಕ್ಷೀಯವಾಗಿ ತೀರ್ಮಾನಿಸಿದ್ದ ಆಯುಕ್ತರು, 117 ಅರ್ಜಿಗಳನ್ನು ವಜಾಗೊಳಿಸಿದ್ದರು. ಜತೆಗೆ ಸಾಯಿಬಣ್ಣ ಅವರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸಲು ಸೂಚಿಸಿದ್ದರು. ಒಂದು ಅರ್ಜಿಗೆ ಮಾತ್ರ ₹1,000 ದಂಡ ವಿಧಿಸಿದ್ದರು. ಉಳಿದ 116 ಅರ್ಜಿಗಳ ಮೇಲ್ಮನವಿ ವಿಚಾರಣೆಯ ಆದೇಶ

ರವೀಂದ್ರ ಗುರುನಾಥ ಡಾಕಪ್ಪ

ಪ್ರತಿ ನೀಡಿರಲಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಾಯಿಬಣ್ಣ ಅವರ ಹೆಸರನ್ನು ಕಪ್ಪು ಪಟ್ಟಿಯಿಂದ ಕೈಬಿಡಲು ಡಾಕಪ್ಪ ಅವರು ₹ 3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಡಾಕಪ್ಪ ಅವರು ಗುರುವಾರ ಲಂಚದ ಹಣ ₹ 1 ಲಕ್ಷವನ್ನು ತಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡ ಬಳಿಕ ಅವರನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಯ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಲೋಕಾಯುಕ್ತ ಎಸ್ಪಿ ಬಿ.ಕೆ. ಉಮೇಶ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಡಿವೈಎಸ್ಪಿ ಗೀತಾ ಬೇನಾಳ, ಪೊಲೀಸ್ ಇನ್‌ಸ್ಪೆಕ್ಟರ್ ಅರುಣಕುಮಾರ್, ಸಿಬ್ಬಂದಿ ಮಲ್ಲಿನಾಥ, ಹನುಮಂತ, ಬಸವರಾಜ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಏಮ್ಸ್: ಕೇಂದ್ರ ಸರ್ಕಾರ ಮಲತಾಯಿ ಧೋರಣೆ– ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ವಿಷಯದಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದ ಸಂಸದರೊಂದಿಗೆ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಮ್ಮ ಸಂಸದರು ರಾಜ್ಯದ ಸ್ವಾಭಿಮಾನ ಹಾಗೂ ಗೌರವ ಉಳಿಸಲು ಹೋರಾಟ ಮಾಡುತ್ತಿದ್ದಾರೆ. ರಾಯಚೂರಿನಲ್ಲಿ ಏಮ್ಸ್ ಆರಂಭಿಸಬೇಕು ಎಂದು ಪ್ರಸ್ತಾಪ ಮಾಡಲಾಗಿತ್ತು. ನಾನು ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದಾಗಲೂ ಪ್ರಸ್ತಾವನೆ ಸಲ್ಲಿಸಲಾಗಿತ್ತು. ರಾಯಚೂರಿನಲ್ಲಿ ಜಾಗ ನೀಡುವುದು ಸೇರಿದಂತೆ ಎಲ್ಲ ರೀತಿಯ ಸಹಕಾರ ನೀಡಲು ರಾಜ್ಯ ಸರ್ಕಾರ ಒಪ್ಪಿತ್ತು. ಆದರೆ, ಕೇಂದ್ರ ಸರ್ಕಾರ ಸಹಕಾರ ನೀಡುತ್ತಿಲ್ಲ’ ಎಂದರು.

‘ಎಲ್ಲ ವಿಚಾರಗಳಲ್ಲೂ ಕೇಂದ್ರ ಸರ್ಕಾರವು ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತೋರುತ್ತಾ ಬಂದಿದೆ ಎಂಬುದಕ್ಕೆ ಇದೇ ಸಾಕ್ಷಿ. ಈ ಬಾರಿ ಬಜೆಟ್‌ನಲ್ಲಿ ಏಮ್ಸ್ ಘೋಷಣೆ ಮಾಡುತ್ತಾರೆ ಎಂದು ಭಾವಿಸಿದ್ದೆವು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದು, ನಮ್ಮ ರಾಜ್ಯಕ್ಕೆ ಏಮ್ಸ್ ನೀಡಲೇಬಾರದು ಎಂದು ಕೇಂದ್ರ ತೀರ್ಮಾನಿಸಿದಂತಿದೆ. ಇದರ ವಿರುದ್ಧ ಸಂಸತ್ ಸದಸ್ಯರು ಹೋರಾಟಕ್ಕೆ ಮುಂದಾಗಿದ್ದಾರೆ. ಸಂಸದರಿಗೆ ಶಕ್ತಿ ತುಂಬಲು ಸರ್ಕಾರ ಕೂಡ ಹೋರಾಟ ಮಾಡಲಿದೆ. ರಾಯಚೂರಿಗೆ ಏಮ್ಸ್ ಘೋಷಿಸಬೇಕು ಎಂದು ಈಗಲೂ ಕೋರುತ್ತೇವೆ’ ಎಂದರು.

ಜಿ.ಕುಮಾರ ನಾಯಕ ಮಾತನಾಡಿ, ‘ರಾಯಚೂರಿನಲ್ಲೇ ಏಮ್ಸ್ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿಯವರು ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಏಮ್ಸ್‌ಗಾಗಿ ಜಿಲ್ಲೆಯಲ್ಲಿ ಸಾವಿರ ದಿನಗಳಿಂದ ಹೋರಾಟ ನಡೆಯುತ್ತಿದೆ. ಕೇಂದ್ರಕ್ಕೆ ಮತ್ತೊಮ್ಮೆ ಮನವರಿಕೆ ಮಾಡಿಕೊಡಲು ನಿಯೋಗ ಹೋಗಲಾಗುವುದು’ ಎಂದರು.

> **ಸತೀಶ್ ಜಾರಕಿಹೊಳಿ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭೇಟಿ ಬಗ್ಗೆ ಗೊತ್ತಿಲ್ಲ. ಈ ವಿಷಯದ ಬಗ್ಗೆ ಅವರ ಬಳಿಯೇ ಕೇಳಿ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಜಲಾಶಯ ನೀರು ನಿರ್ವಹಣೆಗೆ ಸಿಎಸ್ ನೇತೃತ್ವದ ಸಮಿತಿ

ಪ್ರಜಾವಾಣಿ ವಾರ್ತೆ

ಸಚಿವ ಸಂಪುಟ ಸಭೆ

ಬೆಂಗಳೂರು: ಬೇಸಿಗೆ ಹತ್ತಿರ ಬರುತ್ತಿರುವ ಕಾರಣ ರಾಜ್ಯದ ಜಲಾಶಯಗಳಿಂದ ಕುಡಿಯುವ ನೀರು ಹರಿಸುವುದು ಮತ್ತು ಅದರ ನಿರ್ವಹಣೆಗಾಗಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆ ಯಲ್ಲಿ ಸಮಿತಿ ರಚಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

‘ಈ ಸಮಿತಿಯ ಒಪ್ಪಿಗೆ ಪಡೆಯದೇ ಜಲಾಶಯಗಳಿಂದ ನೀರು ಹರಿಸುವಂತಿಲ್ಲ’ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಪ್ರಮುಖ ಜಲಾಶಯಗಳ ನಿರ್ವಹಣೆಯನ್ನು ಕಂದಾಯ ಇಲಾಖೆಗೆ (ವಿಪತ್ತು ನಿರ್ವಹಣೆ) ವಹಿಸಲಾಗುವುದು. ಹಿರಿಯ ಅಧಿಕಾರಿಗಳನ್ನು ಒಳಗೊಂಡ ಸಮಿತಿಯ ಅಧ್ಯಕ್ಷತೆಯನ್ನು ಮುಖ್ಯಕಾರ್ಯದರ್ಶಿ ವಹಿಸುತ್ತಾರೆ. ಜಲಾಶಯಗಳಿಂದ ನೀರು ಹರಿಸಲು ಸಮಿತಿಯ ಅನುಮತಿ ಪಡೆಯುವುದು ಕಡ್ಡಾಯ ಎಂದು ಹೇಳಿದರು.

ಆಲಮೇಲದಲ್ಲಿ ತೋಟಗಾರಿಕೆ ಕಾಲೇಜು: ವಿಜಯಪುರ ಜಿಲ್ಲೆ ಸಿಂಧಗಿಯಲ್ಲಿ ಹೊಸ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ಹಂತ ಹಂತವಾಗಿ ₹145.73 ಕೋಟಿ ಬಿಡುಗಡೆ ಮಾಡಲು, 126 ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು, ಮೊದಲ ಹಂತದಲ್ಲಿ ಆಡಳಿತ ಮತ್ತು ಶೈಕ್ಷಣಿಕ ಭವನ ನಿರ್ಮಾಣಕ್ಕೆ ₹39 ಕೋಟಿ ವಿನಿಯೋಗಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಪಾಟೀಲ ತಿಳಿಸಿದರು.

ಕೇಂದ್ರಕ್ಕೆ ವನ್ಯಜೀವಿಧಾಮ ಪ್ರಸ್ತಾಪ: ಬಂಕಾಪುರ ತೋಳ ವನ್ಯಜೀವಿಧಾಮ, ಉತ್ತಾರೆಗುಡ್ಡ ವನ್ಯಜೀವಿಧಾಮ ಮತ್ತು ಅರಸೀಕೆರೆ ಕರಡಿ ವನ್ಯಜೀವಿಧಾಮಗಳ ಸುತ್ತಮುತ್ತಲಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯಗಳೆಂದು ಘೋಷಿಸುವ ಹೊಸ ಪ್ರಸ್ತಾವನೆಗಳು ಹಾಗೂ ಭದ್ರಾ ವನ್ಯಜೀವಿಧಾಮ ಪರಿಷ್ಕೃತ ಪರಿಸರ ಸೂಕ್ಷ್ಮವಲಯದ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದರು.

ಪ್ರಮುಖ ತೀರ್ಮಾನಗಳು

- ಬೆಂಗಳೂರಿನ ವಿಕಾಸಸೌಧ ಮುಂದಿನ 25 ಗುಂಟೆ ಜಾಗದಲ್ಲಿ ‘ಡಾ.ಅಂಬೇಡ್ಕರ್ ಸ್ಫೂರ್ತಿಸೌಧ’ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ₹87 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ
- ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿಗೃಹ ಕಟ್ಟಡಗಳ ಸಮಗ್ರ ನವೀಕರಣ ಕಾಮಗಾರಿಗೆ ₹14.64 ಕೋಟಿ
- ಗದಗ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಹೆಸರನ್ನು ಕೆ.ಎಚ್.ಪಾಟೀಲ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಎಂದು ಹೆಸರಿಸಲು ತೀರ್ಮಾನ
- ಸಿಂಧಗಿ, ಆನೇಕಲ್, ಮಳವಳ್ಳಿ, ಹೊಸಕೋಟೆ ಪ್ರಜಾ ಸೌಧಕ್ಕೆ ಅನುದಾನ, ಚಿಕ್ಕಮಗಳೂರಿನಲ್ಲಿ ಪ್ರಜಾಸೌಧ ಜಿಲ್ಲಾ ಆಡಳಿತ ಕೇಂದ್ರ ಕಟ್ಟಡ ಕಾಮಗಾರಿಗೆ ಒಪ್ಪಿಗೆ
- ನೋಂದಣಿ ಮತ್ತು ಮುದ್ರಾಂಕ ಇಲಾಖೆ ಕಚೇರಿಗಳಲ್ಲಿ ಬಿಲ್ಡ್– ಓನ್– ಆಪರೇಟ್ ಮಾದರಿಯಲ್ಲಿ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲ ನಿಯೋಜನೆ ಮತ್ತು ಐಟಿ ಮೂಲಸೌಕರ್ಯಗಳ ಸ್ಥಾಪನೆ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ₹637.45 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ
- ರಾಜ್ಯ ವಿಪತ್ತು ಉಪಶಮನ ನಿಧಿ ಅಡಿ ₹194.81 ಕೋಟಿ ಅಂದಾಜು ವೆಚ್ಚದ ಒಟ್ಟು 330 ಉಪಶಮನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳಿಗೆ ಅನುಮತಿ
- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮೈಸೂರಿನ ಡಾ. ಅಂಬೇಡ್ಕರ್ ಭವನದ ಬಾಕಿ ಇರುವ ಕಾಮಗಾರಿಗಳ ₹23.83 ಕೋಟಿ ಪರಿಷ್ಕೃತ ಅಂದಾಜಿಗೆ ಅನುಮೋದನೆ
- ಕರ್ನಾಟಕ ರಾಜ್ಯ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮ 2025ಕ್ಕೆ ಅನುಮೋದನೆ

‘ನಿಪುಣ್ ಕರ್ನಾಟಕ’ ಮಾರ್ಗಸೂಚಿ ಬದಲು

‘ನಿಪುಣ್ ಕರ್ನಾಟಕ’ ಯೋಜನೆಯ ಮಾರ್ಗಸೂಚಿಗಳನ್ನು ಜಾರಿಗೆ ತಂದ ಬಳಿಕ ಆಸಕ್ತ ಉದ್ಯಮ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಲಾಯಿತು. ಅವರು ಕೆಲವು ಬದಲಾವಣೆಗಳನ್ನು ಸೂಚಿಸಿದ್ದು, ಅದಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಪಾಟೀಲ ತಿಳಿಸಿದರು.

ಏನೇನು ಬದಲಾವಣೆ?: * ಪಾಲುದಾರಿಕೆ ಹೊಂದಿರುವ ಕಂಪನಿಯು ಈಗಾಗಲೇ ಉದ್ಯೋಗದಲ್ಲಿರುವವರನ್ನು ಹೊರತುಪಡಿಸಿ, ತರಬೇತಿ ಪಡೆದವರಲ್ಲಿ ಕನಿಷ್ಠ ಶೇ 70ರಷ್ಟು ನೇಮಕಾತಿ ಖಚಿತಪಡಿಸಿಕೊಳ್ಳಬೇಕು.

- ಕೋರ್ಸ್ ಮುಗಿದ 8 ತಿಂಗಳೊಳಗೆ ಶೇ 70ರಷ್ಟು ತರಬೇತಿ ಪಡೆದ ಅಭ್ಯರ್ಥಿಗಳನ್ನು ಹಂತ ಹಂತವಾಗಿ ನೇಮಕಾತಿ ಮಾಡಿಕೊಳ್ಳಬೇಕು.
- 8ನೇ ತಿಂಗಳ ಕೊನೆಯಲ್ಲಿ ನೇಮಕಾತಿಯು ಶೇ 70ಕ್ಕಿಂತ ಕಡಿಮೆ ಇದ್ದರೆ, ನೇಮಕಾತಿ ಹೆಚ್ಚಿಸಲು ಮತ್ತು ನೇಮಕಾತಿ ಸುಗಮಗೊಳಿಸಲು ಪಾಲುದಾರ ಸಂಸ್ಥೆಯು ಕಡ್ಡಾಯವಾಗಿ ರಿಫ್ರೆಶರ್ ಕೋರ್ಸ್ ಅನ್ನು ತನ್ನ ಸ್ವಂತ ವೆಚ್ಚದಲ್ಲಿ ಆಯೋಜಿಸಬೇಕು. ರಿಫ್ರೆಶರ್ ಕೋರ್ಸ್ ಮುಗಿದ ನಂತರ ಪಾಲುದಾರ ಕಂಪನಿಯು ಕನಿಷ್ಠ ಶೇ 40 ರಷ್ಟು ತರಬೇತಿ ಪಡೆದವರನ್ನು ನೇಮಕ.

ಹಾಲು ‘ಬಿಸಿ’: ವಿದ್ಯುತ್ ಶಾಕ್

ಹಾಲು, ಮೊಸರು ಲೀಟರ್‌ಗೆ ₹4 ಹೆಚ್ಚಳ

ಒಂದನೇ ಪುಟದಿಂದ...

ಸಹಕಾರ ಸಚಿವ ಕೆ.ಎನ್. ರಾಜಣ್ಣ ಮಾತನಾಡಿ, ‘ಪಶು ಆಹಾರ ಉತ್ಪಾದನೆಗೆ ಬಳಸುವ ಮೆಕ್ಕೆಜೋಳ, ಅಕ್ಕಿತೌಡು, ಹತ್ತಿಕಾಳು ಹಿಂಡಿ, ಖನಿಜ ಪದಾರ್ಥಗಳ ಬೆಲೆ ಶೇ 35ರಿಂದ ಶೇ 40ರಷ್ಟು ಹೆಚ್ಚಳವಾಗಿದೆ. ಹೈನುರಾಸುಗಳ ನಿರ್ವಹಣಾ ವೆಚ್ಚ ಕೂಡಾ ಅಧಿಕವಾಗಿದೆ. ಹಾಲು ಒಕ್ಕೂಟದವರು ₹ 5 ಹೆಚ್ಚಳಕ್ಕೆ ಬೇಡಿಕೆ ಇಟ್ಟಿದ್ದರು. ಹಾಗೆಂದು, ಲಾಭ, ನಷ್ಟದ ಲೆಕ್ಕಾಚಾರದಲ್ಲಿ ದರ ಪರಿಷ್ಕರಿಸಿಲ್ಲ. ಹಾಲು ಉತ್ಪಾದಕರಿಗೆ ನೆರವು ನೀಡಬೇಕೆಂಬ ಉದ್ದೇಶದಿಂದ ದರ ಹೆಚ್ಚಳಕ್ಕೆ ಸರ್ಕಾರ ಒಪ್ಪಿಗೆ ನೀಡಿದೆ’ ಎಂದು ಸಮರ್ಥನೆ ನೀಡಿದರು.

ಹಾಲು– ಪರಿಷ್ಕೃತ ದರ (ಪ್ರತಿ ಲೀಟರ್‌ಗೆ ₹ಗಳಲ್ಲಿ)

ಹಾಲು	ಪ್ರಸ್ತುತ ದರ*	ಪರಿಷ್ಕೃತ ದರ
ಟೋನ್ಡ್ ಹಾಲು (ನೀಲಿ ಪೊಟ್ಟಣ)	42	46
ಹೋಮೋಜಿನೈಸ್ಡ್ ಟೋನ್ಡ್ ಹಾಲು	43	47
ಹಸುವಿನ ಹಾಲು (ಹಸಿರು ಪೊಟ್ಟಣ)	46	50
ಶುಭಂ (ಕೇಸರಿ ಪೊಟ್ಟಣ)/ ಸ್ಪೆಷಲ್ ಹಾಲು	48	52
ಮೊಸರು (ಪ್ರತಿ ಕೆಜಿಗೆ)	50	54

* 2024ರ ಜೂನ್ 26ರಂದು ಪ್ರತಿ ಲೀಟರ್ ಹಾಲಿಗೆ ಹೆಚ್ಚುವರಿಯಾಗಿ 50 ಮಿಲಿಯಷ್ಟು ನೀಡಿ ದರವನ್ನು ₹2ರಂತೆ ಹೆಚ್ಚಿಸಲಾಗಿತ್ತು. ಈ ಹೆಚ್ಚಳವನ್ನು ಹಿಂಪಡೆದ ನಂತರದ ದರ

‘ಪ್ರಿಂಟಿಂಗ್ ಮಷಿನ್ ಇದೆಯಾ?’

ಹಾಲು ಉತ್ಪಾದಕರಿಗೆ ಸರ್ಕಾರದಿಂದಲೇ ಪ್ರೋತ್ಸಾಹಧನ ಏಕೆ ನೀಡಬಾರದು ಎಂಬ ಬಗ್ಗೆ ಸುದ್ದಿಗಾರ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಾಜಣ್ಣ, ‘ಸರ್ಕಾರದ ಬಳಿ ಪ್ರಿಂಟಿಂಗ್ ಮಷಿನ್ ಇದೆಯಾ? ಪ್ರೋತ್ಸಾಹಧನ ಕೊಡಲು ಜನರು ಕೊಡುತ್ತಿರುವ ತೆರಿಗೆಯಿಂದಲೇ ನೀಡಬೇಕಲ್ಲವೇ’ ಎಂದು ಪ್ರಶ್ನಿಸಿದರು.

‘ದರ ಏರಿಕೆಯಿಂದ ಯಾವ ಒಕ್ಕೂಟಗಳಿಗೂ ಹಣ ಬರುವುದಿಲ್ಲ. ಪಶು ಆಹಾರ ಹಿಂದೆ ₹400ಕ್ಕೆ ಸಿಗುತ್ತಿತ್ತು. ಈಗ ₹700ಕ್ಕೆ ಏರಿಕೆ ಆಗಿದೆ. ನಿರ್ವಹಣಾ ವೆಚ್ಚವೂ ಹೆಚ್ಚಾಗಿದೆ. ಹೀಗಾಗಿ ದರ ಏರಿಕೆ ಅನಿವಾರ್ಯವಾಗಿದೆ’ ಎಂದರು.

ವಿದ್ಯುತ್ ದರ: ಭಾರಿ ಭಾರ...

ಒಂದನೇ ಪುಟದಿಂದ...

ಮೂರು ಕಿ.ವಾ.ನಷ್ಟು ಮಂಜೂರಾದ ಸಂಪರ್ಕ ಹೊಂದಿರುವವರು 100 ಯೂನಿಟ್ ವಿದ್ಯುತ್ ಬಳಸುತ್ತಿದ್ದರೆ, ಹೆಚ್ಚುವರಿಯಾಗಿ ₹101 ಪಾವತಿಸಬೇಕಾಗುತ್ತದೆ. ಮಂಜೂರಾದ ವಿದ್ಯುತ್ ಮತ್ತು ಬಳಸಿದ ವಿದ್ಯುತ್‌ನ ಪ್ರಮಾಣ ಹೆಚ್ಚು ಇದ್ದಷ್ಟೂ ಈ ಹೊರೆಯೂ ಹೆಚ್ಚಾಗಲಿದೆ.

ಕೈಗಾರಿಕೆ, ಖಾಸಗಿ ಸಂಸ್ಥೆಗಳಿಗೆ ಅನುಕೂಲ

ಎಲ್‌ಟಿ–5 ಕೈಗಾರಿಕಾ ವಿದ್ಯುತ್ ಸಂಪರ್ಕ ಹೊಂದಿರುವವರಿಗೆ ಪ್ರತಿ ಯೂನಿಟ್ ದರದಲ್ಲಿ ₹1.60ರಷ್ಟು ಕಡಿತ ಮಾಡಿದೆ. ಎಲ್‌ಟಿ–5 ಸಂಪರ್ಕಕ್ಕೆ ಪ್ರತಿ ಯುನಿಟ್‌ಗೆ ಈಗ ₹6.10 ಇಂಧನ ಶುಲ್ಕ ವಿಧಿಸುತ್ತಿದ್ದು, ಅದನ್ನು ₹4.50ಕ್ಕೆ ಇಳಿಕೆ ಮಾಡಲಾಗಿದೆ. ನಿಗದಿತ ಶುಲ್ಕವನ್ನು ₹140ರಿಂದ ₹150ಕ್ಕೆ ಹೆಚ್ಚಳ ಮಾಡಿದ್ದರೂ, ಇಂಧನ ಶುಲ್ಕ ಭಾರಿ ಪ್ರಮಾಣದಲ್ಲಿ ಇಳಿಕೆ ಮಾಡಿರುವುದರಿಂದ ಕೈಗಾರಿಕೆಗಳ ವಿದ್ಯುತ್ ಹೊರೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಲಿದೆ.

ಖಾಸಗಿ ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಆಸ್ಪತ್ರೆಗಳು, ಖಾಸಗಿ ಜಾಹೀರಾತು ಹೋರ್ಡಿಂಗ್‌ಗಳ ಇಂಧನ ಶುಲ್ಕವನ್ನು ಗಣನೀಯ ಪ್ರಮಾಣದಲ್ಲಿ ಇಳಿಕೆ ಮಾಡಿದೆ. ಅವುಗಳ ವಿವರ ಈ ಮುಂದಿನಂತಿದೆ:

ವಿದ್ಯುತ್ ಸಂಪರ್ಕ ವಿವರ	ಯಾರಿಗೆ ಅನ್ವಯ?	ನಿಗದಿತ ಶುಲ್ಕ (ಪ್ರತಿ ಕೆ.ವಿ/ಎಚ್‌ಪಿ/ಕೆವಿಎಗೆ)		ಇಂಧನ ಶುಲ್ಕ (ಪ್ರತಿ ಯೂನಿಟ್‌ಗೆ)	
		ಈಗಿನ ದರ	ಪರಿಷ್ಕೃತ ದರ	ಈಗಿನ ದರ	ಪರಿಷ್ಕೃತ ದರ
ಎಲ್‌ಟಿ–2	ಖಾಸಗಿ ಶಿಕ್ಷಣಸಂಸ್ಥೆ–ಆಸ್ಪತ್ರೆ	₹180	₹190	₹7.25	₹6.75
ಎಲ್‌ಟಿ–3(ಎ)	ವಾಣಿಜ್ಯ	₹210	₹215	₹8	₹7
ಎಲ್‌ಟಿ–3(ಬಿ)	ಜಾಹೀರಾತು ಹೋರ್ಡಿಂಗ್ಸ್	₹200	₹200	₹10.50	₹9.50
ಎಲ್‌ಟಿ–4(ಸಿ)	ತೋಟ/ನರ್ಸರಿ	₹135	₹140	₹4.25	₹3.65
ಎಲ್‌ಟಿ–5	ಕೈಗಾರಿಕೆಗಳು	₹140	₹150	₹6.10	₹4.50
ಎಚ್‌ಟಿ–2(ಬಿ)	ವಾಣಿಜ್ಯ	₹365	₹370	₹8	₹5.95
ಎಚ್‌ಟಿ–2(ಸಿ)(2)	ಶೈಕ್ಷಣಿಕ ಸಂಸ್ಥೆ/ಆಸ್ಪತ್ರೆ	₹340	₹350	₹8.10	₹7.20
ಎಚ್‌ಟಿ–4	ಅಪಾರ್ಟ್‌ಮೆಂಟ್, ಕಾಲೊನಿ	₹290	₹290	₹7.25	₹6.90

- ಈ ಎಲ್ಲ ಸಂಪರ್ಕಗಳಿಗೂ ಪ್ರತಿ ಯೂನಿಟ್ ಮೇಲೆ 36 ಪೈಸೆಯ ಪಿಂಚಣಿ ಮತ್ತು ಗ್ರಾಚ್ಯುಟಿ ಶುಲ್ಕ ಅನ್ವಯವಾಗುತ್ತದೆ. ಹೀಗಿದ್ದೂ ಬಹುತೇಕ ಸಂಪರ್ಕಗಳಲ್ಲಿ ವಿದ್ಯುತ್ ಬಿಲ್‌ನ ಮೊತ್ತ ಕಡಿಮೆಯಾಗಲಿದೆ
- ಅಪಾರ್ಟ್‌ಮೆಂಟ್, ಕಾಲೊನಿಗಳ ವಿದ್ಯುತ್ ಇಂಧನ ದರ ಕಡಿಮೆ ಮಾಡಿದ್ದರೂ, ಪಿಂಚಣಿ ಮತ್ತು ಗ್ರಾಚ್ಯುಟಿ ಶುಲ್ಕ ಅನ್ವಯದಿಂದ ಯಥಾಸ್ಥಿತಿ ಇರಲಿದೆ
- ಉಳಿದಂತೆ ಇಂಧನ ಶುಲ್ಕ, ನಿಗದಿತ ಶುಲ್ಕದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದ್ದರೂ ಪಿಂಚಣಿ ಮತ್ತು ಗ್ರಾಚ್ಯುಟಿ ಶುಲ್ಕ ಅನ್ವಯದಿಂದ ಸರ್ಕಾರಿ ಶಾಲೆ–ಕಾಲೇಜು, ಆಸ್ಪತ್ರೆಗಳ ವಿದ್ಯುತ್ ಬಿಲ್ ಮೊತ್ತ ಹೆಚ್ಚಾಗಲಿದೆ

ಆರೋಗ್ಯ ಕುಟುಂಬ ಸಂಜೀವಿನಿ ಮಾರ್ಗಸೂಚಿ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ನಗದುರಹಿತ ವೈದ್ಯಕೀಯ ಸೌಲಭ್ಯ ಒದಗಿಸುವ 'ಕರ್ನಾಟಕ ಆರೋಗ್ಯ ಕುಟುಂಬ ಸಂಜೀವಿನಿ ಯೋಜನೆ'ಯ ಕೆಲವು ಅಂಶಗಳನ್ನು ಪರಿಷ್ಕರಿಸಲಾಗಿದ್ದು, ಅದಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಪರಿಷ್ಕೃತ ಅಂಶಗಳು:

- ಅಲೋಪತಿ ಮತ್ತು ಆಯುಷ್ ಚಿಕಿತ್ಸಾ ಪದ್ಧತಿಗಳನ್ನು ಒಳಗೊಂಡ ಎಲ್ಲ ಹೊರರೋಗಿ ವೈದ್ಯಕೀಯ ಚಿಕಿತ್ಸೆಗಳು, ಔಷಧೋಪಚಾರಗಳು, ಒಳರೋಗಿ ಚಿಕಿತ್ಸೆಗಳು, ವಾರ್ಷಿಕ ಆರೋಗ್ಯ ತಪಾಸಣೆ ಮುಂತಾದ ಆರೋಗ್ಯ ಸೌಲಭ್ಯಗಳನ್ನು ಒದಗಿಸಲಾಗುವುದು. ಆದರೆ, ಎಲ್ಲ ಚಿಕಿತ್ಸೆಗಳನ್ನು ಏಕಕಾಲದಲ್ಲಿ ಆರಂಭಿಸಲು ಸಾಧ್ಯವಿಲ್ಲ. ಆದ್ದರಿಂದ ಯೋಜನೆಯ ಮೊದಲ ಹಂತದಲ್ಲಿ ಅಲೋಪತಿ ಚಿಕಿತ್ಸಾ ವಿಧಾನದಲ್ಲಿ ಒಳರೋಗಿ ಚಿಕಿತ್ಸಾ ವಿಧಾನಗಳನ್ನು ಮಾತ್ರ ಆರಂಭಿಸಲು ಉದ್ದೇಶಿಸಲಾಗಿದೆ.
- ವೈದ್ಯಕೀಯ ಚಿಕಿತ್ಸಾ ವಿಧಾನವನ್ನು ಸಿಜಿಎಚ್‌ಎಸ್, ಎಬಿ–ಎಆರ್‌ಕೆ, ಎನ್‌ಎಚ್‌ಎ ಪ್ರಕಟಿಸಿರುವ ಎಚ್‌ಬಿಪಿ 2022 ಯೋಜನೆಯಡಿ ಒಳಗೊಂಡ ಕೆಎಎಸ್‌ಎಸ್ ಪ್ಯಾಕೇಜ್ ಮಾಸ್ಟರ್ ಅಡಿ ಚಿಕಿತ್ಸಾ ವಿಧಾನಗಳು ಮತ್ತು ದರಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ.
- ಸಿಜಿಎಚ್‌ಎಸ್ ಪ್ಯಾಕೇಜ್ ಅಡಿ ಎನ್‌ಎಬಿಎಚ್ ಮಾನ್ಯತೆಯನ್ನು ಪಡೆದಿರುವ ನೋಂದಾಯಿತ ಆಸ್ಪತ್ರೆಗಳಿಗೆ ನೀಡುತ್ತಿರುವ ಶೇ 15 ಹೆಚ್ಚುವರಿ ಪ್ರೋತ್ಸಾಹ ಧನವನ್ನು ಕೆಎಎಸ್‌ಎಸ್‌ನಲ್ಲಿ ಒಳಗೊಂಡಿರುವ ಎಲ್ಲಾ ಪ್ಯಾಕೇಜ್‌ಗಳಿಗೂ ಅನ್ವಯಿಸಲು ಪ್ರಸ್ತಾಪಿಸಲಾಗಿದೆ.
- ಕುಟುಂಬ ಪದದ ವ್ಯಾಖ್ಯೆಯಲ್ಲಿ ಸರ್ಕಾರಿ ನೌಕರನ ಮಗ/ಮಗಳು ವೈದ್ಯಕೀಯ ಚಿಕಿತ್ಸೆ ಪಡೆಯಲು ಆತ/ಆಕೆ 30 ವರ್ಷಗಳ ಗರಿಷ್ಠ ಮಿತಿಯಲ್ಲಿರಬೇಕು. ಸ್ವಂತ ಸಂಪಾದನೆ ಮಾಡುವವರೆಗೆ ಅಥವಾ ಮದುವೆಯಾಗುವವರೆಗೆ ಚಿಕಿತ್ಸೆ ಪಡೆಯಬಹುದಾಗಿದೆ. ನೌಕರನ ಮೇಲೆ ಅವಲಂಬಿತರಾಗಿರುವ ತಂದೆ–ತಾಯಿಯರ ತಿಂಗಳ ಆದಾಯ ಮಿತಿ ₹17,000 ಗಳಿಗೆ ನಿಗದಿಪಡಿಸಲಾಗಿದೆ. ಅಲ್ಲದೇ ವಿಧವೆ/ವಿಚ್ಛೇದಿತ ಮಗಳಿಗೆ ಕೂಡ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ನೀಡಲಾಗಿದೆ. 30 ವರ್ಷ ಮೀರಿದ ಅವಿವಾಹಿತ ಮಗ ಅಥವಾ ಮಗಳು ದೈಹಿಕ ಅಥವಾ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದು, ಸ್ವಂತ ಸಂಪಾದನೆ ಮಾಡಲು ಅಸಮರ್ಥರಾಗಿದ್ದರೆ ಅಂತಹವರಿಗೆ ಗರಿಷ್ಠ ಮಿತಿ ಇಲ್ಲದೆ ಚಿಕಿತ್ಸೆ ಪಡೆಯಬಹುದು.

ಮುತ್ತಯ್ಯರಿಂದ ₹2.40 ಕೋಟಿ ವಸೂಲಿಗೆ ತೀರ್ಮಾನ

ಮುತ್ತಯ್ಯ ಅವರು ಬಳ್ಳಾರಿ ಜಿಲ್ಲೆ ಡಿಎಫ್‌ಒ ಆಗಿದ್ದ ಸಂದರ್ಭದಲ್ಲಿ (2011) ಅಕ್ರಮ ಗಣಿಗಾರಿಕೆಗೆ ಸಹಕರಿಸಿ ಆರೋಪದ ಮೇಲೆ ಇಲಾಖೆ ವಿಚಾರಣೆ ನಡೆಸುವಂತೆ ಲೋಕಾಯುಕ್ತರು ಮಾಡಿದ ಶಿಫಾರಸನ್ನು ಕೈಬಿಡಲು ಸಚಿವ ಸಂಪುಟ ತೀರ್ಮಾನ ಮಾಡಿದೆ.

ಇವರಿಂದ ಸರ್ಕಾರಕ್ಕೆ ₹2.40 ಕೋಟಿ ನಷ್ಟ ಉಂಟಾಗಿದ್ದು, ಅವರ ವಿರುದ್ಧ ಸಿವಿಲ್ ದಾವೆ ಹೂಡಿ ಸರ್ಕಾರಕ್ಕೆ ಆಗಿರುವ ನಷ್ಟವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಸೂಚಿಸಲು ತೀರ್ಮಾನಿಸಲಾಯಿತು.

ಕ್ರಮಕ್ಕೆ ನಕಾರ: ಮಾನ್ವಿ ತಾಲ್ಲೂಕು ಪಂಚಾಯಿತಿ ಇಒ ಆಗಿದ್ದ ಪ್ರಶಾಂತ್ ಕುಮಾರ್ ಮಿಶ್ರ ಅವರ ವಿರುದ್ಧ ಲೋಕಾಯುಕ್ತ ಮಾಡಿದ್ದ ಶಿಫಾರಸನ್ನು ಕೈಬಿಡಲು, ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಸಿಇಒ ಆಗಿದ್ದ ಎನ್ ಜಯರಾಮ್ ವಿರುದ್ಧ ಲೋಕಾಯುಕ್ತ ಮಾಡಿದ್ದ ಶಿಫಾರಸು ಕೈಬಿಡಲು ತೀರ್ಮಾನಿಸಲಾಯಿತು ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಕಲಾಪದಲ್ಲಿ ರಾಹುಲ್ ಗಾಂಧಿಗೆ ಮಾತನಾಡಲು ಅವಕಾಶ ನೀಡದ್ದಕ್ಕೆ ಅತೃಪ್ತಿ

ಸ್ಪೀಕರ್‌ಗೆ 'ಇಂಡಿಯಾ' ಕೂಟದ ದೂರು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದಿಂದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಕಲಾಪದಲ್ಲಿ ಮಾತನಾಡಲು ಅವಕಾಶ ನಿರಾಕರಣೆ, 2019ರಿಂದ ಈವರೆಗೆ ಉಪ ಸ್ಪೀಕರ್ ನೇಮಕ ಮಾಡದಿರುವುದು ಹಾಗೂ ಸಂಸದೀಯ ಸಮಿತಿಗಳಲ್ಲಿ ಸರ್ಕಾರದ ಹಸ್ತಕ್ಷೇಪ ಸೇರಿದಂತೆ ಕೇಂದ್ರ ಸರ್ಕಾರದ ಧೋರಣೆ ವಿರೋಧಿಸಿ 'ಇಂಡಿಯಾ' ಮೈತ್ರಿಕೂಟದ ಸದಸ್ಯರ ನಿಯೋಗವು ಗುರುವಾರ ಸ್ಪೀಕರ್ ಓಂ ಬಿರ್ಲಾ ಅವರಿಗೆ ದೂರು ಸಲ್ಲಿಸಿತು.

ಕಾಂಗ್ರೆಸ್, ಸಮಾಜವಾದಿ ಪಕ್ಷ, ಟಿಎಂಸಿ, ಡಿಎಂಕೆ, ಶಿವಸೇನಾ (ಯುಬಿಟಿ), ಮುಸ್ಲಿಂ ಲೀಗ್, ಆರ್‌ಎಲ್‌ಪಿ, ಸಿಪಿಐ(ಎಂ), ಸಿಪಿಐ, ಎನ್‌ಸಿಪಿ ಮತ್ತು ಕೇರಳ ಕಾಂಗ್ರೆಸ್ ಪಕ್ಷದ ಸಂಸದರು ಈ ನಿಯೋಗದಲ್ಲಿದ್ದರು.

ಪ್ರಮುಖ ಖಾತೆಗಳಿಗೆ ಹಂಚಿಕೆಯಾದ ಅನುದಾನವನ್ನು ಚರ್ಚೆಯಿಂದ ಹೊರಗಿಟ್ಟಿರುವುದು ಮತ್ತು ಪ್ರತಿಪಕ್ಷಗಳ ಸದಸ್ಯರು ಕಲಾಪದಲ್ಲಿ ಮಾತನಾಡುವಾಗ ಮೈಕ್ರೊಫೋನ್‌ಗಳನ್ನು ಬಂದ್ ಮಾಡುವುದು ಸೇರಿದಂತೆ 12 ಅಂಶಗಳ ಕುರಿತು ಸ್ಪೀಕರ್ ಜೊತೆ ಇಂಡಿಯಾ ಮೈತ್ರಿಕೂಟದ ಸದಸ್ಯರು ಚರ್ಚಿಸಿದರು.

> **ಸಂಸತ್ತಿನ ಕಲಾಪದಲ್ಲಿ ನನಗೆ ಮಾತನಾಡಲು ಬಿಡುವುದೇ ಇಲ್ಲ. ಅವರು (ಕೇಂದ್ರ ಸರ್ಕಾರ) ಯಾಕಾಗಿ ಭಯಪಡುತ್ತಾರೆ ಎಂಬುದೇ ನನಗೆ ಗೊತ್ತಿಲ್ಲ**
> **ರಾಹುಲ್ ಗಾಂಧಿ**, ವಿರೋಧ ಪಕ್ಷದ ನಾಯಕ, ಲೋಕಸಭೆ

ಸಂಸದೀಯ ಸ್ಥಾಯಿ ಸಮಿತಿ ವರದಿಗಳಲ್ಲಿ ಸ್ಪೀಕರ್ ಕಚೇರಿ ಹಸ್ತಕ್ಷೇಪ ಮಾಡುತ್ತಿದೆ. ಸಮಿತಿಯ ವರದಿಯಲ್ಲಿನ ಅಂಶಗಳನ್ನು ಸರಿಪಡಿಸುವಂತೆ ಸ್ಪೀಕರ್ ಕಚೇರಿಯು ಸಲಹೆ ನೀಡುವ ಮೂಲಕ ಸ್ಥಾಯಿ ಸಮಿತಿಯ ಸ್ವಾಯತ್ತತೆಗೆ ಧಕ್ಕೆ ತರಲಾಗುತ್ತಿದೆ. ಸಂಸತ್ ಟಿವಿಯಲ್ಲಿ ಪ್ರತಿಪಕ್ಷಗಳ ಸಂಸದರು ಮಾತನಾಡುವುದನ್ನು ತೋರಿಸುತ್ತಿಲ್ಲ ಎಂದು ಹೇಳಿದರು. ಸಮಿತಿಗಳ ಅಧ್ಯಕ್ಷರನ್ನು ಆಯ್ಕೆ ಮಾಡುವ ವೇಳೆ ಪ್ರತಿಪಕ್ಷದ ನಾಯಕರ ಸಲಹೆ ಪಡೆಯದ ಬಗ್ಗೆಯೂ ನಿಯೋಗವು ಕಳವಳ ವ್ಯಕ್ತಪಡಿಸಿತು.

'ಈ ಎಲ್ಲ ಬೆಳವಣಿಗೆಗಳು ಕಳವಳಕಾರಿಯಾಗಿದ್ದು, ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಸಮಗ್ರತೆಯನ್ನು ಎತ್ತಿಹಿಡಿಯಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

ಗೃಹ ಸಚಿವರ ವಿರುದ್ಧ ಸಲ್ಲಿಸಿದ್ದ ಹಕ್ಕುಚ್ಯುತಿ ನೋಟಿಸ್ ವಜಾ

ಜಗದೀಪ್ ಧನಕರ್

ನವದೆಹಲಿ (ಪಿಟಿಐ): ಗೃಹ ಸಚಿವ ಅಮಿತ್ ಶಾ ವಿರುದ್ಧ ಕಾಂಗ್ರೆಸ್‌ನ ಜೈರಾಮ್ ರಮೇಶ್ ಅವರು ಸಲ್ಲಿಸಿದ್ದ ಹಕ್ಕುಚ್ಯುತಿ ನೋಟಿಸ್ ಅನ್ನು ರಾಜ್ಯಸಭೆ ಅಧ್ಯಕ್ಷ ಜಗದೀಪ್ ಧನಕರ್ ತಿರಸ್ಕರಿಸಿದ್ದು, 'ಗೃಹಸಚಿವರ ಹೇಳಿಕೆ ಸತ್ಯಕ್ಕೆ ಬದ್ಧವಾಗಿದೆ' ಎಂದು ರೂಲಿಂಗ್ ನೀಡಿದ್ದಾರೆ.

'ಪ್ರಧಾನಮಂತ್ರಿ ಅವರ ರಾಷ್ಟ್ರೀಯ ಪರಿಹಾರ ನಿಧಿ ನಿರ್ವಹಣೆಯಲ್ಲಿ ಕಾಂಗ್ರೆಸ್ ನಾಯಕರೂ ಭಾಗಿ ಆಗಿದ್ದರು' ಎಂದು ಶಾ ಕಳೆದ ವಾರ ಹೇಳಿಕೆ ನೀಡಿದ್ದರು. 'ಇದರಿಂದ ಹಕ್ಕುಚ್ಯುತಿ ಆಗಿದೆ' ಎಂದು ಜೈರಾಮ್ ರಮೇಶ್ ಅವರು ನೋಟಿಸ್ ನೀಡಿದ್ದರು.

ಗುರುವಾರ ಈ ಕುರಿತು ರೂಲಿಂಗ್ ನೀಡಿದ ಧನಕರ್ ಅವರು, 'ಶಾ ಅವರು ತಮ್ಮ ಹೇಳಿಕೆಗೆ ಸಮರ್ಥನೆಯಾಗಿ 1948ರಲ್ಲಿ ಆಗಿನ ಸರ್ಕಾರ ನೀಡಿದ್ದ ಪತ್ರಿಕಾ ಹೇಳಿಕೆ ಉದಾಹರಿಸಿದ್ದಾರೆ. ಅವರ ಹೇಳಿಕೆ ಸತ್ಯಕ್ಕೆ ಬದ್ಧವಾಗಿದೆ' ಎಂದು ತಿಳಿಸಿದರು.

ಹಕ್ಕುಚ್ಯುತಿ ನೋಟಿಸ್ ಮಂಡಿಸಿದ್ದ ಜೈರಾಮ್ ರಮೇಶ್ ಅವರು, 'ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರಲು ಇಂತಹ ಹೇಳಿಕೆ ನೀಡಿದ್ದಾರೆ. ಸಂಸದರ ವರ್ತನೆ ಬಗ್ಗೆ ಮಾರ್ಗದರ್ಶಿ ಸೂತ್ರ ನಿಗದಿಪಡಿಸಬೇಕು' ಎಂದಿದ್ದರು.

ಹೇಳಿಕೆ ಸಮರ್ಥಿಸಿದ್ದ ಗೃಹ ಸಚಿವರು, 1948ರ ಜ. 24ರಂದು ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ ಸ್ಥಾಪನೆ ಕುರಿತು ಆಗಿನ ಸರ್ಕಾರ ನೀಡಿದ್ದ ಹೇಳಿಕೆ ಉಲ್ಲೇಖಿಸಿದರು. ನಿಧಿಯನ್ನು ಪ್ರಧಾನಮಂತ್ರಿ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ಉಪ ಪ್ರಧಾನಿ ಮತ್ತು ಇತರೆ ಕೆಲ ಸದಸ್ಯರು ಇರುವ ಸಮಿತಿ ನಿರ್ವಹಿಸಲಿದೆ ಎಂದು ಹೇಳಿಕೆಯಲ್ಲಿತ್ತು' ಎಂದರು.

25 ಸಾವಿರ ಕಿ.ಮೀ ಹೆದ್ದಾರಿ 4 ಪಥಗಳಿಗೆ ವಿಸ್ತರಣೆ


ನಿತಿನ್ ಗಡ್ಕರಿ

'ದೇಶದಾದ್ಯಂತ 25 ಸಾವಿರ ಕಿಲೋಮೀಟರ್‌ನಷ್ಟು ಎರಡು ಪಥಗಳ ಹೆದ್ದಾರಿಯನ್ನು ₹10 ಲಕ್ಷ ಕೋಟಿ ವೆಚ್ಚದಲ್ಲಿ ನಾಲ್ಕು ಪಥಗಳ ರಸ್ತೆಯನ್ನಾಗಿ ಬದಲಾಯಿಸಲಾಗುವುದು. ಇದರಿಂದ, ರಸ್ತೆ ಅಪಘಾತಗಳಲ್ಲಿ ತೀವ್ರ ಇಳಿಮುಖವಾಗಲಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಲೋಕಸಭೆಯಲ್ಲಿ ತಿಳಿಸಿದರು.

ಅದೇ ರೀತಿ, '26 ಲಕ್ಷ ಕೋಟಿ ವೆಚ್ಚದಲ್ಲಿ 16 ಸಾವಿರ ಕಿ.ಮೀ. ರಾಷ್ಟ್ರೀಯ ಹೆದ್ದಾರಿಯನ್ನು ಆರು ಪಥಗಳ ರಸ್ತೆಯನ್ನಾಗಿ ವಿಸ್ತರಿಸಲಾಗುವುದು' ಎಂದು ತಿಳಿಸಿದರು.

ಮಧುಬಲೆ: ರಾಜ್ಯಸಭೆಯಲ್ಲಿ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧುಬಲೆ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ನಿರ್ದೇಶನ ನೀಡಬೇಕು ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, '48 ಮಂದಿಯನ್ನು ಹನಿ ಟ್ರ್ಯಾಪ್ ಮಾಡಲಾಗಿದೆ ಎಂದು ಸಹಕಾರ ಸಚಿವರೇ ವಿಧಾನಸಭೆಯಲ್ಲಿ ಅಲವತ್ತುಕೊಂಡಿದ್ದಾರೆ. ಇದೊಂದು ಆಘಾತಕಾರಿ ಬೆಳವಣಿಗೆ. ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಬೇಕು' ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ವ್ಯಾಪಕ ಚಿನ್ನ ಕಳ್ಳ ಸಾಗಣೆ ನಡೆಯುತ್ತಿದ್ದು, ಹಲವು ಸಚಿವರು ಭಾಗಿಯಾಗಿದ್ದಾರೆ ಎಂಬ ಆರೋಪ ಇದೆ. ಇದರ ಬಗ್ಗೆಯೂ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

'ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳ ತ್ವರಿತ ವಿಚಾರಣೆಗೆ ಬೆಳಗಾವಿ, ಮೈಸೂರು ಮತ್ತು ಕಲಬುರಗಿಯಲ್ಲಿ 6 ತಿಂಗಳೊಳಗೆ ಎನ್‌ಐಎ ವಿಶೇಷ ಕೋರ್ಟ್‌ಗಳನ್ನು ಸ್ಥಾಪಿಸಬೇಕೆಂದು ಹೈಕೋರ್ಟ್ ಆದೇಶಿಸಿತ್ತು. ಆದರೆ, ರಾಜ್ಯ ಸರ್ಕಾರ ಮೀನಮೇಷ ಎಣಿಸುತ್ತಿದೆ' ಎಂದು ಆರೋಪಿಸಿದರು.

ಪಿಐಬಿ ಸತ್ಯಶೋಧನಾ ಘಟಕದ ಕಾರ್ಯವೈಖರಿ: ಕಳವಳ

ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪಿಐಬಿಯ ಸತ್ಯಶೋಧನಾ ಘಟಕದ ಕಾರ್ಯವೈಖರಿ ಬಗ್ಗೆ ರಾಯಚೂರು ಸಂಸದ ಜಿ. ಕುಮಾರ ನಾಯಕ ಕಳವಳ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಮಾತನಾಡಿದ ಅವರು, ಸುಳ್ಳು ಸುದ್ದಿಗಳನ್ನು ಗುರುತಿಸಲು ಮತ್ತು ಪರಿಶೀಲಿಸಲು ಈ ಘಟಕ ಬಳಸುವ ಮಾನದಂಡಗಳು ಮತ್ತು ವಿಧಾನಗಳ ಕುರಿತು ಸ್ಪಷ್ಟತೆ ಕೋರಿದರು. ಅಲ್ಲದೆ, ಈ ಘಟಕದ ಸತ್ಯಶೋಧನಾ ಪ್ರಕ್ರಿಯೆಯು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳನ್ನು ತೆಗೆದುಹಾಕುವಲ್ಲಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂಬ ಬಗ್ಗೆ ವಿವರಣೆ ನೀಡಬೇಕು ಎಂದು ಒತ್ತಾಯಿಸಿದರು.

'ಸುಳ್ಳು ಮಾಹಿತಿಯು ಪ್ರಜಾಪ್ರಭುತ್ವ ಮತ್ತು ಸಾರ್ವಜನಿಕ ಚರ್ಚೆಗೆ ಒಂದು ಗಂಭೀರ ಬೆದರಿಕೆಯಾಗಿದೆ. ತಪ್ಪು ಮಾಹಿತಿಯನ್ನು ತಡೆಯುವ ನಿಟ್ಟಿನಲ್ಲಿ ಘಟಕದ ವ್ಯಾಪ್ತಿ ವಿಸ್ತರಿಸುವ ಅಗತ್ಯವಿದೆ' ಎಂದು ತಿಳಿಸಿದರು.

'ವಲಸೆ ಮಸೂದೆ 2025' ಅಂಗೀಕಾರ

'ವಲಸೆ ಮತ್ತು ವಿದೇಶಿಯರ ಮಸೂದೆ 2025' ಅನ್ನು ಲೋಕಸಭೆಯು ಗುರುವಾರ ಅಂಗೀಕರಿಸಿತು. 'ದೇಶದ ಭದ್ರತೆ ಮತ್ತು ಆರ್ಥಿಕತೆಯನ್ನು ಬಲಪಡಿಸಲು, ಉತ್ಪಾದನೆ-ವ್ಯಾಪಾರವನ್ನು ಉತ್ತೇಜಿಸಲು, ಶಿಕ್ಷಣ ವ್ಯವಸ್ಥೆಗೆ ಜಾಗತಿಕ ಮನ್ನಣೆ ಪಡೆಯಲು ಹಾಗೂ ವಿಶ್ವವಿದ್ಯಾಲಯಗಳು ಅಂತರರಾಷ್ಟ್ರೀಯ ಮಾನ್ಯತೆಯನ್ನು ಪಡೆಯಲು ಈ ಮಸೂದೆಯು ಸಹಾಯಕವಾಗುತ್ತದೆ. ಅಲ್ಲದೇ ದೇಶದ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರವನ್ನು ಪ್ರೋತ್ಸಾಹಿಸುತ್ತದೆ' ಎಂದು ಗೃಹ ಸಚಿವ ಅಮಿತ್ ಶಾ ಹೇಳಿದರು.

ಸಂಕ್ಷಿಪ್ತ ಸುದ್ದಿ

ವಾರಾಣಸಿ: 50ಕ್ಕೂ ಹೆಚ್ಚು ಸ್ಥಳಗಳ ಮರುನಾಮಕರಣ

ಲಖನೌ: ಮುಸ್ಲಿಂ ಬಾಹುಳ್ಯದ ಪ್ರದೇಶಗಳು ಸೇರಿದಂತೆ ವಾರಾಣಸಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹಲವು ಸ್ಥಳಗಳ ಹೆಸರು ಬದಲಾಯಿಸಲು ನಿರ್ಧರಿಸಲಾಗಿದೆ.

ಮೊಘಲ್ ದೊರೆ ಔರಂಗಜೇಬ್ ಒಳಗೊಂಡಂತೆ ಮುಸ್ಲಿಮ್ ದೊರೆಗಳ ಹೆಸರಿನಲ್ಲಿರುವ ಪ್ರದೇಶಗಳಿಗೆ ಹಿಂದೂ ದೇವರುಗಳ ಮತ್ತು ಸಂತರ ಹೆಸರುಗಳನ್ನು ಇಡಲಾಗುವುದು.

ಪಟ್ಟಣದ ಸುಮಾರು 50 ಸ್ಥಳಗಳ ಹೆಸರುಗಳನ್ನು ಬದಲಾಯಿಸಲು ನಿರ್ಧರಿಸಲಾಗಿದ್ದು, ಈ ಕುರಿತು ವಾರಾಣಸಿ ನಗರಸಭೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮರುನಾಮಕರಣಗೊಳ್ಳಲಿರುವ ಪ್ರದೇಶಗಳಲ್ಲಿ ಔರಂಗಾಬಾದ್ (ಮೊಘಲ್ ದೊರೆ ಔರಂಗಜೇಬ್‌ನ ಹೆಸರು ಇಡಲಾಗಿದೆ) ಮತ್ತು ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿರುವ ಮದನಪುರ, ಖಾಲಿಸ್‌ಪುರ ಹಾಗೂ ಕಝೂಕ್‌ಪುರ ಪ್ರಮುಖವಾದವು.

ಔರಂಗಾಬಾದ್‌ಗೆ ನಾರಾಯಣ ಧಾಮ ಎಂಬ ಹೆಸರಿಡಲು ನಿರ್ಧರಿಸಲಾಗಿದೆ. ಖಾಲಿಸ್‌ಪುರಕ್ಕೆ ಬ್ರಹ್ಮತೀರ್ಥ, ಕಝೂಕ್‌ಪುರಕ್ಕೆ ಅನರಕ್ ತೀರ್ಥ ಮತ್ತು ಮದನಪುರಕ್ಕೆ ಪುಷ್ಪದಂತೇಶ್ವರ ಎಂದು ಮರುನಾಮಕರಣ ಮಾಡುವ ಪ್ರಸ್ತಾವ ಸಲ್ಲಿಸಲಾಗಿದೆ.

'ವರ್ಷಕ್ಕೆ 3 ಬಾರಿ ಸಿ.ಎ. ಅಂತಿಮ ಪರೀಕ್ಷೆ'

ನವದೆಹಲಿ(ಪಿಟಿಐ): ಪ್ರಸಕ್ತ ವರ್ಷದಿಂದ ಚಾರ್ಟರ್ಡ್ ಅಕೌಂಟೆಂಟ್ಸ್ (ಸಿ.ಎ) ಅಂತಿಮ ಪರೀಕ್ಷೆಗಳನ್ನು ವರ್ಷದಲ್ಲಿ ಮೂರು ಬಾರಿ ನಡೆಸಲಾಗುತ್ತದೆ ಎಂದು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಗುರುವಾರ ಹೇಳಿದೆ. ಸದ್ಯ, ಈ ಪರೀಕ್ಷೆಗಳನ್ನು ವರ್ಷದಲ್ಲಿ ಎರಡು ಬಾರಿ ನಡೆಸಲಾಗುತ್ತಿತ್ತು.

ಜಮ್ಮು: ಮೂವರು ಉಗ್ರರ ಹತ್ಯೆ, ಮೂವರು ಪೊಲೀಸರು ಹುತಾತ್ಮ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ನಡೆದ ಭೀಕರ ಗುಂಡಿನ ಚಕಮಕಿಯಲ್ಲಿ ಮೂವರು ಭಯೋತ್ಪಾದಕರು ಹತರಾಗಿದ್ದು, ಮೂವರು ಪೊಲೀಸರು ಹುತಾತ್ಮರಾಗಿದ್ದಾರೆ.

ವಿಶೇಷ ಪೊಲೀಸ್ ಅಧಿಕಾರಿ ಭರತ್ ಚಲೋತ್ರಾ, ಡಿಎಸ್‌ಪಿ ಧೀರಜ್ ಕಟೋಚ್ ಮತ್ತು ಒಬ್ಬ ಪ್ಯಾರಾ ಕಮಾಂಡೊ ಸೇರಿದಂತೆ ಕೆಲವು ಪೊಲೀಸರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಉಧಂಪುರ ಮತ್ತು ಪಠಾಣ್‌ಕೋಟ್‌ನ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಜ್‌ಬಾಘ್‌ನ ಘಟಿ ಜುಥಾನಾ ಪ್ರದೇಶದ ಜಾಖೋಲ್ ಗ್ರಾಮದ ಬಳಿ ಗುರುವಾರ ಬೆಳಿಗ್ಗೆ ಗುಂಡಿನ ಚಕಮಕಿ ಆರಂಭವಾಗಿದೆ. ಹಿರಾನಗರ್‌ನಲ್ಲಿ ಭಾನುವಾರ ನಡೆದಿದ್ದ ಗುಂಡಿನ ಚಕಮಕಿ ಸಂದರ್ಭದಲ್ಲಿ ಪರಾರಿಯಾಗಿದ್ದ ಅದೇ ಉಗ್ರರ ತಂಡ ಗುರುವಾರ ನಡೆದ ಸಂಘರ್ಷದಲ್ಲಿ ಭಾಗಿಯಾಗಿರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಹೊಸದಾಗಿ ನಿರ್ಮಿಸಿರುವ ಸುರಂಗ ಅಥವಾ ಕಂದರವನ್ನು ಬಳಸಿಕೊಂಡು ಭಯೋತ್ಪಾದಕರು ಗಡಿಯಾಚೆಯಿಂದ ಒಳನುಸುಳಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಪೊಲೀಸರ ವಿಶೇಷ ಕಾರ್ಯಾಚರಣೆ ಗುಂಪು ನೇತೃತ್ವದಲ್ಲಿ ಸೇನೆ, ಬಿಎಸ್‌ಎಫ್ ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಉಗ್ರರ ವಿರುದ್ಧದ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ.

'ಪಳನಿಸ್ವಾಮಿ ನಾಯಕತ್ವ ತ್ಯಜಿಸಲಿ'

ಚೆನ್ನೈ (ಪಿಟಿಐ): 'ಎಐಎಡಿಎಂಕೆ ಮುಖ್ಯಸ್ಥ ಸ್ಥಾನದಿಂದ ಕೆಳಗಿಳಿಯಿರಿ, ಇಲ್ಲವೇ ಅಪಮಾನ ಎದುರಿಸಲು ಸಿದ್ಧರಾಗಿ' ಎಂದು ಪಕ್ಷದ ಉಚ್ಚಾಟಿತ ನಾಯಕ ಒ.ಪನ್ನೀರ್‌ಸೆಲ್ವಂ (ಒಪಿಎಸ್) ಅವರು ಪಕ್ಷದ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರಿಗೆ ಗುರುವಾರ ಒತ್ತಾಯಿಸಿದ್ದಾರೆ.

'ಪಕ್ಷದ ಕೇಂದ್ರ ಕಚೇರಿಯ ಮೇಲೆ ಇತ್ತೀಚೆಗೆ ನಡೆದ ದಾಳಿಯ ನೇತೃತ್ವವನ್ನು ವಹಿಸಿದ್ದರು' ಎಂಬ ಪಳನಿಸ್ವಾಮಿ ಅವರ ಆರೋಪವನ್ನು ಒಪಿಎಸ್ ತಳ್ಳಿಹಾಕಿದ್ದಾರೆ.

'ನಾನು ಎಂದಿಗೂ ಪಕ್ಷಕ್ಕೆ ನನ್ನ ಮರುಸೇರ್ಪಡೆ ಕುರಿತು ಮಾತನಾಡಿಲ್ಲ. ಆದರೆ, ಪಕ್ಷದ ಗೆಲುವಿಗೆ ಪೂರಕವಾಗಿ ಎಲ್ಲ ಗುಂಪುಗಳು ಒಗ್ಗೂಡಬೇಕು ಎಂದಷ್ಟೇ ಹೇಳಿದ್ದೇನೆ' ಎಂದಿದ್ದಾರೆ.

'ನ್ಯಾ. ವರ್ಮಾ ವರ್ಗಾವಣೆ ಮರುಪರಿಶೀಲಿಸುವ ಭರವಸೆ'


ನ್ಯಾ. ಯಶವಂತ್ ವರ್ಮಾ

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ವರ್ಗಾವಣೆಗೆ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳ ಸಮಿತಿ (ಕೊಲಿಜಿಯಂ) ಮಾಡಿರುವ ಶಿಫಾರಸನ್ನು ಹಿಂಪಡೆಯಬೇಕು ಎಂಬ ತಮ್ಮ ಬೇಡಿಕೆಯನ್ನು ಪರಿಶೀಲಿಸುವುದಾಗಿ ಸಿಜೆಐ ಸಂಜೀವ್ ಖನ್ನಾ ಭರವಸೆ ನೀಡಿದ್ದಾರೆ ಎಂದು ಅಲಹಾಬಾದ್ ಹೈಕೋರ್ಟ್‌ನ ವಕೀಲರ ಸಂಘದ ಅಧ್ಯಕ್ಷ ಅನಿಲ್ ತಿವಾರಿ ತಿಳಿಸಿದ್ದಾರೆ.

ಸಿಜೆಐ ಖನ್ನಾ ಮತ್ತು ಕೊಲಿಜಿಯಂನ ಸದಸ್ಯ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಸೂರ್ಯ ಕಾಂತ್, ಅಭಯ್ ಎಸ್. ಓಕ ಮತ್ತು ವಿಕ್ರಮನಾಥ್ ಅವರನ್ನು ಬೇರೆ ಬೇರೆ ಹೈಕೋರ್ಟ್‌ಗಳ ಆರು ವಕೀಲರ ಸಂಘಗಳ ಪ್ರತಿನಿಧಿಗಳು ಗುರುವಾರ ಭೇಟಿ ಮಾಡಿದರು.

ನೋಟಿನ ಕಂತೆಗಳು ಸಿಕ್ಕಿವೆ ಎನ್ನಲಾದ ನ್ಯಾ. ವರ್ಮಾ ಅವರ ಅಧಿಕೃತ ನಿವಾಸದಲ್ಲಿ ಸಾಕ್ಷ್ಯಗಳನ್ನು ತಿರುಚುವ ಕೆಲಸ ಆಗಿದೆ ಎಂಬ ಆರೋಪದ ಬಗ್ಗೆ ಬೊಟ್ಟು ಮಾಡಿರುವ ವಿವಿಧ ವಕೀಲರ ಸಂಘಗಳು, ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸದೆ ಇರುವುದನ್ನು ಪ್ರಶ್ನಿಸಿವೆ.

ನ್ಯಾ. ವರ್ಮಾ ಅವರಿಗೆ ನ್ಯಾಯಾಂಗಕ್ಕೆ ಸಂಬಂಧಿಸಿದ ಯಾವುದೇ ಕೆಲಸ ವಹಿಸಬಾರದು ಎಂದು ಈಗಾಗಲೇ ಸೂಚಿಸಲಾಗಿದೆ. ಇದರ ಜೊತೆ, ಅವರಿಂದ ಆಡಳಿತಾತ್ಮಕ ಕೆಲಸಗಳನ್ನೂ ಹಿಂಪಡೆಯಬೇಕು ಎಂದು ವಕೀಲರ ಸಂಘಗಳು ಸಿಜೆಐ ಅವರಿಗೆ ಮನವಿ ಸಲ್ಲಿಸಿವೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW– 3:ಟೆಂ:2024–25:4708 ದಿನಾಂಕ: 25–03–2025.
ಅಲ್ಪಾವಧಿ ಟೆಂಡರ್ ಪ್ರಕಟಣೆ
2024–25ನೇ ಸಾಲಿನ ಲೆಕ್ಕ ಶೀರ್ಷಿಕೆ : 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆ ಸೇತುವೆ ಸುಧಾರಣೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ್ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW–3ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. **ಒಟ್ಟು 1 ಕಾಮಗಾರಿಗೆ (ವರ್ಕ ಇಂಡೆಂಟ್ ಸಂಖ್ಯೆ: 18316/ CALL-3)** ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 03–04–2025 ಸಮಯ 16.30 ಗಂಟೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05–04–2025 ಸಮಯ 16.30 ಗಂಟೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 07–04–2025 ಸಮಯ 11.00.** ಅಂದಾಜು ಮೊತ್ತ ರೂ. 100.00 ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಮೀಸಲಾತಿಗಳಿಗಾಗಿ ಹಾಗೂ ಇತ್ಯಾದಿಗಳಿಗಾಗಿ ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/912/ಕೆಎಸ್ಎಂಸಿಎ/2024–25

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560065
E-mail: ao@uasbangalore.edu.in | NAAC A+
Phone Nos.: 080 23330153, 23332521 (Extn.259)
No. AO/RT/11/67/Backlog Teach. Posts / 2024-25 Date: 26-03-2025
ಪ್ರಕಟಣೆ
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 02 ಬ್ಯಾಕ್‌ಲಾಗ್ ಬೋಧಕರ ಹುದ್ದೆಗಳನ್ನು – ಪ್ರಾಧ್ಯಾಪಕ ವರ್ಗ: **Agril. Engg.-1 Post (SC), Plant Pathology-1 Post (ST),** ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಭರ್ತಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: 28–04–2025 ಆಗಿರುತ್ತದೆ. ಪ್ರಕಟಣೆ, ವಿದ್ಯಾರ್ಹತೆ ಹಾಗೂ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ (website:www.uasbangalore.edu.in) ಡೌನ್‌ಲೋಡ್ ಮಾಡಿಕೊಳ್ಳಬಹುದು.
ಆದೇಶದ ಮೇರೆಗೆ
ಸಹಿ/– ಆಡಳಿತಾಧಿಕಾರಿಗಳು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಳಲ್ಕೆರೆ–577526
(ಚಿತ್ರದುರ್ಗ ಜಿಲ್ಲೆ)
ಇ–ಮೇಲ್:apmcholalkere@gmail.com, ದೂರವಾಣಿ:–08191–275113
ಕೃಉಮಾಸ(ಹೊಳ) :570:2024–25 ದಿನಾಂಕ: 24–03–2025.
ಅಲ್ಪಾವಧಿ ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ
ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ :ಕೃಮಾಇ/ಮುಂಪ/ಬೆಂವಿ/ನಿಠೇ/102/2024–25 ದಿನಾಂಕ:19–02–2025 ರ ಅನುಮತಿಯಂತೆ ಹೊಳಲ್ಕೆರೆ ಎ.ಪಿ.ಎಂ.ಸಿ.ಯ S.B.I ಬ್ಯಾಂಕ್ ನ ಉಳಿತಾಯ ಖಾತೆಯಲ್ಲಿರುವ ರೂ.1.60 ಕೋಟಿ ಹೆಚ್ಚುವರಿ ಹಣವನ್ನು 01 ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಅರ್ಹ Public Sector Bank Including Regional Rural Bank (RRB) and Private Sector Scheduled Commercial Banks ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಇ–ಪೋರ್ಟಲ್ ಮೂಲಕ ಆಹ್ವಾನಿಸಿ, ಇ–ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಇ–ಟೆಂಡರ್ Pre- Auction ಸಭೆ ದಿನಾಂಕ: 11–04–2025 ಬೆಳಗ್ಗೆ 11:00 ಘಂಟೆಗೆ ಇ–ಬಿಡ್‌ನ್ನು ದಿನಾಂಕ: 22–04–2025 ರಂದು ಬೆಳಗ್ಗೆ 11–00 ಗಂಟೆಯಿಂದ ಸಾಯಂಕಾಲ 04.30 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https:// kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಛೇರಿಯ ವೇಳೆಯಲ್ಲಿ ಹೊಳಲ್ಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಛೇರಿಯಲ್ಲಿ ಪಡೆಯಬಹುದಾಗಿದೆ.
Indent No: APMC/2024-25/AUCTION76
ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಹೊಳಲ್ಕೆರೆ.
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಹೊಳಲ್ಕೆರೆ.
DIPR/CTA/KSMCA/748/2024-25

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, ಕರ್ನಾಟಕ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಬಿಎಂಟಿಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು.
ಸಂ: ಸಾಆ/ಪೀಕ–1/ಪಿಆರ್–144/2023–24 ದಿನಾಂಕ: 26.03.2025
ಇ–ಟೆಂಡರ್ ಪ್ರಕಟಣೆ
ಕಛೇರಿಯ ಸ್ವಚ್ಛತಾ ಕಾರ್ಯ ನಿರ್ವಹಣೆಗಾಗಿ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು (TD/2024-25/SE/0056/CALL-3) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ: kppp.karnataka.gov.in ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯ ದೂರವಾಣಿ ಸಂಖ್ಯೆ: +91–8046010000/+91–8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.
ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **15–04–2025 ರ ಅಪರಾಹ್ನ 5.00 ಗಂಟೆಯವರೆಗೆ.**
ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080–22235176 ಯನ್ನು ಸಂಪರ್ಕಿಸಬಹುದು.
ಸಹಿ/– ಸಾರಿಗೆ ಆಯುಕ್ತರ ಪರವಾಗಿ, ಬೆಂಗಳೂರು
ವಾಸಾಸಂಇ/ವಾ.ಪ್ರ/5955/ಎಂಎಎ/24–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಬೆಳಗಾವಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ.
ಇಮೇಲ್: dobcmbelgaumm@gmail.com ದೂರವಾಣಿ ಸ:0831–2407247
ಸಂ: ಬಿಸಿಎಂ/ಹೋಮೂಸಿ/ಸಿಆರ್–05&06/2024–25 ದಿನಾಂಕ:26–03–2025
ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರಮೆಂಟ್ ಮೂಲಕ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆಯ ಅಧೀನದಲ್ಲಿ ಬರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ 2024–25 ನೇ ಸಾಲಿನ ಹೊರಮೂಲ ಸಿಬ್ಬಂದಿ ಸೇವೆಯನ್ನು ಪೂರೈಸುವ ಏಜೆನ್ಸಿಗಳನ್ನು ಒಂದು ವರ್ಷದ ಮಟ್ಟಿಗೆ ಅಥವಾ ಮುಂದಿನ ಆದೇಶದವರೆಗೆ ಆಯ್ಕೆ ಮಾಡುವುದಕ್ಕಾಗಿ ಇ–ಪ್ರಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಆಸಕ್ತ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:11–04–2025 ಆಗಿರುತ್ತದೆ. ವಿವರವನ್ನು ಇಲಾಖೆಯ ವೆಬ್ ಸೈಟ್:– https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 0831–2407221 ನ್ನು ಸಂಪರ್ಕಿಸಬಹುದು.
ಸಹಿ/–ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ.
ಸಹಿ/–ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ
DIPR/BGM/RO-NO-2032/KSMCA/2024-25

ಕರ್ನಾಟಕ ಸರ್ಕಾರ / ಜಿಲ್ಲಾ ಪಂಚಾಯಿತಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ:08262–220936 E-Mail: zpedckm@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ:07/2024–25/2ನೇ ಕರೆ 3/120 ದಿನಾಂಕ:25.03.2025
ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ **ಗರಿಷ್ಠ ಅಂದಾಜು ಮೊತ್ತ ರೂ.47.85 ಲಕ್ಷಗಳು** ಮತ್ತು **ಕನಿಷ್ಠ ಅಂದಾಜು ಮೊತ್ತ ರೂ.20.00 ಲಕ್ಷಗಳು** ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ 'Standard Tender Document KW-2 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು **ದಿನಾಂಕ:25.03.2025 ರಿಂದ ದಿನಾಂಕ:08.04.2025 ರವರೆಗೆ ಸಂಜೆ 5.30** ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ಸಾಧ್ಯವಾದಲ್ಲಿ **ದಿನಾಂಕ:11.04.2025 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:17.04.2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು **kppp.karnataka.gov.in website** ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
CIN : U41000KA2016SGC097260
ನೋ.ಕ:ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟರಿ ರಸ್ತೆ, ಬೆಂಗಳೂರು–560001.
ದೂರವಾಣಿ:080–22289966 / 22256688 ಫ್ಯಾಕ್ಸ್: 080–22264477
ವೆಬ್‌ಸೈಟ್: https://vjnl.karnataka.gov.in. ಇ–ಮೇಲ್: techvjnl@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ–01 (ಕೆ.ಪಿ.ಪಿ. ಪೋರ್ಟಲ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **"Engaging Consultancy services (On Success Fees Based Model) to provide Transaction Advisory Services for the establishment of Solar Parks under a Public-Private Partnership (PPP) Model by utilizing land owned by the Water Resources Department in Karnataka". (Indent no. VJNL/2024-25/SE0126)** ಕಾಮಗಾರಿಗಾಗಿ ದ್ವಿ ಲಕೋಟೆ ಪದ್ಧತಿಯಲ್ಲಿ QCBS ಮಾದರಿಯಲ್ಲಿ IDD ಇಲಾಖೆಯ ನೋಂದಾಯಿತ ಅರ್ಹ ಸಮಾಲೋಚಕರುಗಳಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ದಿ: **28.03.2025** ರಿಂದ ವೀಕ್ಷಿಸಬಹುದಾಗಿದೆ. ಟೆಂಡರ್‌ಗಿಟ್ಟ ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ ಸಮಾಲೋಚಕರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ ಇತ್ಯಾದಿ ವಿವರಗಳನ್ನು **https://kppp.karnataka.gov.in** ಮೂಲಕ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ: ಬೆಂಗಳೂರು
ಸಂ: ಕರಾಸಾ/ವಿನಿ/ಕೆಂಬನಿ/ವಾ/1253/2024–25 ದಿನಾಂಕ: 22.03.2025
ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 08/2024–25
ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು ಟರ್ಮಿನಲ್–3 ರಲ್ಲಿ ಖಾಲಿ ಇರುವ / ಖಾಲಿ ಆಗಲಿರುವ ಮಳಿಗೆ ಸಂಖ್ಯೆ 45, 09, 111, 114, 05, 01 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ 06, 11, 12, 13 & 31 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಮತ್ತು ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 46, 48, 04 (ಸಸ್ಯಾಹಾರಿ ಉಪಹಾರ ಗೃಹ), ಕಾರು & ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್–3 ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ & ಇಂದಿರಾ ಕ್ಯಾಂಟೀನ್‌ನ ಹಿಂಭಾಗ ಹಾಗೂ ಪಕ್ಕದಲ್ಲಿರುವ ಖಾಲಿ ಜಾಗ), ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 30ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ ದಿನಾಂಕ: 27.03.2025 ರಿಂದ 21.04.2025 ರವರೆಗೆ ಟೆಂಡರ್ / ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ.ನಿಗಮ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ: +91–8046010000/+91–8068948777. support@eprochelpdesk.com.
ಸಹಿ/– ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂಬನಿ ವಿಭಾಗ, ಬೆಂಗಳೂರು
ವಾಸಾಸಂಇ/ವಾ.ಪ್ರ/5949/ಎಂಎಎ/2023–24

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–3/ಟೆಂಡರ್–25/2024–25 ದಿನಾಂಕ: 26.03.2025
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೈಗೊಳ್ಳಲಿರುವ ಕಾಮಗಾರಿಗಳಿಗೆ ಅರ್ಹ/ನುರಿತ ವಿಸ್ತೃತ ಯೋಜನಾ ಸಮಾಲೋಚಕರು (ಡಿಪಿಆರ್) **(Indent No. KREIS/2023-24/SE0002, KREIS/2023-24/SE0004, KREIS/2023-24/SE0005, KREIS/2023-24/SE0006)** ಹಾಗೂ ಯೋಜನಾ ಸಮಾಲೋಚಕರು (ಪಿಎಂಸಿ) **(Indent No. KREIS/2023-24/SE0007, KREIS/2023-24/SE0008, KREIS/2023-24/ SE0009, KREIS/2023-24/SE0010, KREIS/2023-24/SE0011, KREIS/2023-24/SE0012, KREIS/2023-24/SE0013, KREIS/2023-24/SE0014, KREIS/2023-24/SE0015, KREIS/2023-24/SE0016, KREIS/2023-24/SE0017 & KREIS/2024-25/SE0040)** ರವರನ್ನು ನೇಮಿಸಲು ಇ–ಪೋರ್ಟಲ್ ಮುಖಾಂತರ ದಿನಾಂಕ: **26.03.2025 & 27.03.2025** ರಂದು ಟೆಂಡರ್‌ಗಳನ್ನು ಕರೆಯಲಾಗುತ್ತಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 02.04.2025 & 03.04.2025**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ವ.ಶಿ.ಸಂ.ಸಂಘ
DIPR/CP/YC/5952/2024-25

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಕಿಇಂ–2/ಟೆಂಡರ್/2024–25 ದಿ: 25.03.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:39/2024–25
(ಕೆಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 & KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಹಾಗೂ ಮಧುಗಿರಿ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https:// kppp.karnataka. gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬ ಹುದಾಗಿದೆ. ದೂರವಾಣಿ ಸಂ: 08137– 283336. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.800.23 ಲಕ್ಷಗಳವರೆಗೆ, ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 09–04–2025 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 11–04–2025 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 15–04–2025 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 04–04–2025 ಸಂಜೆ 4.00 ಗಂಟೆಗೆ ವರೆಗೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/738/KSMCA/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ, ದಾಸರಹಳ್ಳಿ ವಲಯ, ಎಂಇಐ ಬಡಾವಣೆ, ಬಾಗಲಗುಂಟೆ, ಹೆಸರುಘಟ್ಟ ಮುಖ್ಯರಸ್ತೆ, ಬೆಂಗಳೂರು–560 073.
ಸಂಖ್ಯೆ:ಬೃಬೆಂಮಪಾ/ದಾವ/ಕಾಪಾಅ/ಯೋವಿ/ಟೆಂಡರ್/10/2024–25 ದಿನಾಂಕ: 27.03.2025
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್) (ದ್ವಿಲಕೋಟೆ ಪದ್ಧತಿ) ಕೆಡಬ್ಲ್ಯೂ–4
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಯೋಜನೆ ದಾಸರಹಳ್ಳಿ ವಲಯ ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಟೆಂಡರುದಾರರಿಂದ ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಬಾಗಲಗುಂಟೆ ಎಂಇಐ ಬಡಾವಣೆಯಲ್ಲಿರುವ ದಾಸರಹಳ್ಳಿ ವಲಯ ಕಚೇರಿ ಕಟ್ಟಡಕ್ಕೆ ಹೊಂದಿಕೊಂಡಂತೆ ಅನೆಕ್ಸ್ ಕಟ್ಟಡ ನಿರ್ಮಾಣ ಮಾಡುವುದು. ಟೆಂಡರಿಗಿಟ್ಟ ಮೊತ್ತ : ₹.410.14 ಲಕ್ಷಗಳು ಇಎಂಡಿ ₹.6,16,000/– (ರೂಪಾಯಿ ಒಂದು ಲಕ್ಷ ಕೆಪಿಪಿ ಪೋರ್ಟಲ್ ಮೂಲಕ ಮತ್ತು ಉಳಿದಿದು ಬಿಡ್ ದಾಖಲೆಯಲ್ಲಿ ನಿರ್ದಿಷ್ಟಪಡಿಸಲಾಗಿದೆ)

ಟೆಂಡರ್ ದಿನಾಂಕಗಳು: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **29.03.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ **16.04.2025**ರ ಬೆಳಿಗ್ಗೆ **11:00** ಗಂಟೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **16.04.2025**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **28.04.2025**ರ ಸಂಜೆ **5:00** ಗಂಟೆಗೆ. (5) ಪ್ರಸ್ತಾವನೆಗಳನ್ನು ದಿನಾಂಕ **29.04.2025**ರ ಸಂಜೆ **5:01** ಗಂಟೆಗೆ ತೆರೆಯಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ದಾಸರಹಳ್ಳಿ ವಲಯ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ+ ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065
ದೂರವಾಣಿ : GKVK: 2330153-250, Direct : 23332765
Email : eo@uasbangalore.edu.in, Website: www.uasbangalore.edu.in
ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/23/2024–25 ದಿನಾಂಕ:25.03.2025
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ–1 ಮತ್ತು ಕೆ.ಜಿ–2, ಟೆಂಡರ್ ನಿಬಂದನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.
ವಿವರ: ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **04–04–2025 ಸಂಜೆ 4.00 ಗಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07–04–2025 ಸಮಯ ಬೆಳಗ್ಗೆ 10.30 ಕ್ಕೆ,** ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: **12–04–2025 ಸಮಯ ಬೆಳಗ್ಗೆ 10.30 ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ.
ಸೂಚನೆ: ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: https://kppp.karnataka.gov.in ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ. 91–8046010000, +91–8068948777 support@eprochelpdesk.com ಅಥವಾ www.uasbangalore.edu.in ದೂರವಾಣಿ ಸಂಖ್ಯೆ: 23630128 ಅನ್ನು ಸಂಪರ್ಕಿಸಬಹುದು.
ಸಹಿ/– ಆಸ್ತಿ ಅಧಿಕಾರಿಗಳು
ವಾಸಾಸಂಇ/ವಾಪ್ರ/5947/2024–25

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,486
ಇಂದಿನ ಅಂತ್ಯ	23,591
▲	105
ದಿನದ ಗರಿಷ್ಠ	23,646

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹250-555

ದ್ವಿತಳಿ (ಬಿ.ವಿ) ₹279-730

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹201

ಆರ್‌ಎಸ್‌ಎಸ್-5 ₹195

ಗುಡ್ ಲಾಟ್ ₹187

(ಪ್ರತಿ ಕೆ.ಜಿಗೆ)

ವಿನಿಮಯ ದರ

$ ಡಾಲರ್	85.74
£ ಪೌಂಡ್	110.80
€ ಯುರೊ	92.40
¥ ಯೆನ್ (100ಕ್ಕೆ)	57

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಗುರುವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಬ್ಲೂಚಿಪ್ ಕಂಪನಿಗಳ ಷೇರು ಖರೀದಿ ಹೆಚ್ಚಳದಿಂದಾಗಿ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 318 ಅಂಶ ಏರಿಕೆ ಕಂಡು, 77,606 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 105 ಅಂಶ ಹೆಚ್ಚಳ ಕಂಡು, 23,591 ಅಂಶಗಳಲ್ಲಿ ಸ್ಥಿರಗೊಂಡಿತು.

ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಎಲ್ ಆ್ಯಂಡ್ ಟಿ, ಬಜಾಜ್ ಫೈನಾನ್ಸ್ ಷೇರುಗಳ ಖರೀದಿ ಏರಿಕೆ ಮತ್ತು ವಿದೇಶಿ ಬಂಡವಾಳದ ಒಳಹರಿವು ಹೆಚ್ಚಳದಿಂದಾಗಿ ದೇಶೀಯ ಷೇರುಪೇಟೆಯು ಏರಿಕೆ ಕಂಡಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಶೇ 25ರಷ್ಟು ಹೇರಿಕೆ: ದೇಶದ ಆಟೊ ಬಿಡಿಭಾಗ ಉದ್ಯಮಕ್ಕೆ ಭಾರಿ ಪೆಟ್ಟು– ತಜ್ಞರ ಹೇಳಿಕೆ

ವಾಹನ ರಫ್ತಿಗೆ ಟ್ರಂಪ್ ಸುಂಕ ಬರೆ

ನವದೆಹಲಿ (ಪಿಟಿಐ): ಆಟೊಮೊಬೈಲ್ ಆಮದು ಮೇಲೆ ಶೇ 25ರಷ್ಟು ಸುಂಕ ವಿಧಿಸುವುದಾಗಿ ಪ್ರಕಟಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರವು, ಭಾರತದಲ್ಲಿ ವಾಹನಗಳ ಬಿಡಿಭಾಗ ತಯಾರಿಸುವ ಕಂಪನಿಗಳಿಗೆ ಭಾರಿ ಪೆಟ್ಟು ನೀಡಲಿದೆ ಎಂದು ಕೈಗಾರಿಕಾ ವಲಯದ ತಜ್ಞರು ಹೇಳಿದ್ದಾರೆ.

ಅಮೆರಿಕಕ್ಕೆ ರಫ್ತಾಗುವ ವಾಹನಗಳು ಹಾಗೂ ಎಂಜಿನ್, ಟ್ರಾನ್ಸ್‌ಮಿಷನ್, ಪವರ್‌ಟ್ರೈನ್ ಬಿಡಿಭಾಗಗಳಿಗೆ ಈ ಸುಂಕ ಅನ್ವಯಿಸಲಿದ್ದು, ಏಪ್ರಿಲ್ 2ರಿಂದ ಜಾರಿಗೆ ಬರಲಿದೆ. ಮೆಕ್ಸಿಕೊ, ಜಪಾನ್, ಚೀನಾ ಮತ್ತು ಕೆನಡಾದಿಂದ ಅತಿಹೆಚ್ಚು ಪ್ರಮಾಣದಲ್ಲಿ ಅಮೆರಿಕಕ್ಕೆ ವಾಹನ ಮತ್ತು ಅವುಗಳ ಬಿಡಿಭಾಗಗಳು ರಫ್ತಾಗುತ್ತವೆ.

ಭಾರತದಿಂದ ವಾಹನಗಳ ರಫ್ತು ಪ್ರಮಾಣ ತೀರಾ ಕಡಿಮೆ. ಆದರೆ, ಹೆಚ್ಚಿನ ಪ್ರಮಾಣದಲ್ಲಿ ಬಿಡಿಭಾಗಗಳು ರವಾನೆಯಾಗುತ್ತವೆ. ಹಾಗಾಗಿ, ಈ ಉದ್ಯಮವು ಹೆಚ್ಚು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯಿದೆ ಎಂದು ತಜ್ಞರು ಹೇಳಿದ್ದಾರೆ.

ಭಾರತದಿಂದ ಎಂಜಿನ್ ಬಿಡಿಭಾಗಗಳು, ಪವರ್ ಟ್ರೈನ್ಸ್ ಮತ್ತು ಟ್ರಾನ್ಸ್‌ಮಿಷನ್‌ಗಳು ಅತಿಹೆಚ್ಚು ಪ್ರಮಾಣದಲ್ಲಿ ಅಮೆರಿಕಕ್ಕೆ ರವಾನೆ ಆಗುತ್ತವೆ ಎಂದು ತಿಳಿಸಿದ್ದಾರೆ.

ಅಂಕಿ ಅಂಶಗಳು

₹60,000 ಕೋಟಿ
2023–24ರಲ್ಲಿ ಭಾರತದಿಂದ ಅಮೆರಿಕಕ್ಕೆ ರಫ್ತು ಮಾಡಿರುವ ವಾಹನ ಬಿಡಿಭಾಗಗಳ ಮೌಲ್ಯ

₹12,000 ಕೋಟಿ
ಅಮೆರಿಕದಿಂದ ಭಾರತಕ್ಕೆ ಆಮದಾಗಿರುವ ವಾಹನ ಬಿಡಿಭಾಗಗಳ ಮೌಲ್ಯ

15%
ಅಮೆರಿಕದ ವಾಹನ ಬಿಡಿಭಾಗಗಳಿಗೆ ಭಾರತ ವಿಧಿಸುವ ಸುಂಕದ ಪ್ರಮಾಣ

ಆಟೊ ಷೇರಿನ ಮೌಲ್ಯ ಇಳಿಕೆ

ಟ್ರಂಪ್ ಸುಂಕ ನೀತಿಯಿಂದಾಗಿ ದೇಶದ ಷೇರುಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ವಾಹನ ಮತ್ತು ಅವುಗಳ ಬಿಡಿಭಾಗ ತಯಾರಿಸುವ ಕಂಪನಿಗಳ ಷೇರಿನ ಮೌಲ್ಯ ಇಳಿಕೆ ಕಂಡಿದೆ.

ಟಾಟಾ ಮೋಟರ್ಸ್ ಶೇ 5.50, ಅಶೋಕ್ ಲೇಲ್ಯಾಂಡ್ ಶೇ 2.77, ಐಷರ್ ಮೋಟರ್ಸ್ ಶೇ 0.97, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 0.35 ಹಾಗೂ ಅಪೋಲೊ ಟೈರ್ಸ್ ಷೇರಿನ ಮೌಲ್ಯವು ಶೇ 0.24ರಷ್ಟು ಕುಸಿದಿದೆ.

ವಾಹನಗಳ ಬಿಡಿಭಾಗ ತಯಾರಿಸುವ ಕಂಪನಿಗಳಾದ ಸೋನಾ ಬಿಎಲ್‌ಡಬ್ಲ್ಯು ಪ್ರಿಷಿಸನ್ ಫೋರ್ಜಿಂಗ್ಸ್ ಶೇ 5.89, ಸಂವರ್ಧನಾ ಮದರ್‌ಸನ್ ಇಂಟರ್‌ನ್ಯಾಷನಲ್ ಶೇ 2.22, ಭಾರತ್ ಫೋರ್ಜ್ ಶೇ 2.30, ಎಎಸ್‌ಕೆ ಆಟೊಮೋಟಿವ್ ಶೇ 1.83, ಕ್ರಾಫ್ಟ್‌ಮನ್ ಆಟೋಮೇಷನ್ ಶೇ 1.54 ಹಾಗೂ ರಾಮಕೃಷ್ಣ ಫೋರ್ಜಿಂಗ್ಸ್ ಷೇರಿನ ಮೌಲ್ಯದಲ್ಲಿ ಶೇ 0.40ರಷ್ಟು ಇಳಿಕೆಯಾಗಿದೆ.

ರಾಜ್ಯಸಭೆಯಲ್ಲೂ ಪ್ರತಿಧ್ವನಿ

ಟ್ರಂಪ್ ಸುಂಕ ನೀತಿಯು ಗುರುವಾರ ರಾಜ್ಯಸಭೆಯಲ್ಲೂ ಪ್ರತಿಧ್ವನಿಸಿತು. ಈ ಬಗ್ಗೆ ಕೇಂದ್ರ ಸರ್ಕಾರವು ತನ್ನ ನಿಲುವು ಸ್ಪಷ್ಟಪಡಿಸಬೇಕು ಎಂದು ಪ್ರತಿಪಕ್ಷದ ಸದಸ್ಯರು ಆಗ್ರಹಿಸಿದರು.

ಹಣಕಾಸು ಮಸೂದೆ 2025ರ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಕಾಂಗ್ರೆಸ್‌ನ ಪಿ. ಚಿದಂಬರಂ, 'ಈ ವಿಷಯದ ಬಗ್ಗೆ ಸಂಸತ್‌ನಲ್ಲಿ ಸರ್ಕಾರವು ಚರ್ಚೆಗೆ ಅವಕಾಶ ನೀಡಿಲ್ಲ. ಪ್ರತಿಪಕ್ಷಗಳ ಅಭಿಪ್ರಾಯ ಕೂಡ ಪಡೆದಿಲ್ಲ' ಎಂದು ಟೀಕಿಸಿದರು.

ಟ್ರಂಪ್ ಸುಂಕ ನೀತಿ ವಿರುದ್ಧ ಕೆನಡಾ, ಬ್ರಿಟನ್, ಫ್ರಾನ್ಸ್, ಜರ್ಮನಿ, ಜಪಾನ್ ಧ್ವನಿ ಎತ್ತಿವೆ. ಭಾರತ ಕೂಡ ಇದೇ ನಿಲುವು ತಳೆಯಬೇಕಿದೆ. ಸುಂಕ ಹೇರಿಕೆಯಿಂದ ಭಾರತದ ಮೇಲೆ ಆಗುವ ಪರಿಣಾಮಗಳನ್ನು ತಡೆಯಲು ಎಲ್ಲರೂ ಒಟ್ಟಾಗಿ ಹೋರಾಡಬೇಕಿದೆ ಎಂದು ಪ್ರತಿಪಾದಿಸಿದರು.

'ಅಮೆರಿಕದ ಸುಂಕ ನೀತಿಯು ವ್ಯಾಪಾರ ಸಮರಕ್ಕೆ ನಾಂದಿಯಾಗಲಿದೆ. ಇದರಿಂದ ಇಡೀ ವಿಶ್ವವೇ ತೊಂದರೆಗೆ ಸಿಲುಕಲಿದೆ' ಎಂದರು.



ಜೆಎಲ್‌ಆರ್ ಕಾರುಗಳಿಗೆ ತೊಡಕು

ಭಾರತದಿಂದ ಅಮೆರಿಕಕ್ಕೆ ದೊಡ್ಡ ಪ್ರಮಾಣದಲ್ಲಿ ಕಾರುಗಳು ರಫ್ತಾಗುವುದಿಲ್ಲ. ಆದರೆ, ಟಾಟಾ ಸಮೂಹದ ಜಾಗ್ವಾರ್ ಲ್ಯಾಂಡ್ ರೋವರ್ (ಜೆಎಲ್‌ಆರ್) ಕಾರುಗಳಷ್ಟೇ ಅಲ್ಲಿಗೆ ರಫ್ತಾಗುತ್ತವೆ.

ಭಾರತದಿಂದ ಈ ಕಾರುಗಳನ್ನು ರಫ್ತು ಮಾಡುವುದಿಲ್ಲ. ಬ್ರಿಟನ್‌ನಲ್ಲಿರುವ ಜೆಎಲ್‌ಆರ್ ಘಟಕದಲ್ಲಿ ತಯಾರಿಸುವ ಕಾರುಗಳನ್ನು ರವಾನೆ ಮಾಡಲಾಗುತ್ತದೆ. 2023–24ರಲ್ಲಿ ಒಟ್ಟು 4 ಲಕ್ಷ ಕಾರುಗಳು ಮಾರಾಟವಾಗಿವೆ.

ಸುಂಕ ನೀತಿಯು ಈ ಕಾರುಗಳ ಮೇಲೆ ಪರಿಣಾಮ ಬೀರಲಿದೆ. ಗ್ರಾಹಕರಿಗೂ ಇದರ ಬಿಸಿ ತಟ್ಟಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಟಾಟಾ ಸಮೂಹವು ಅಮೆರಿಕದಲ್ಲಿಯೇ ತಯಾರಿಕಾ ಘಟಕ ಆರಂಭಿಸುವ ಮೂಲಕ ಸುಂಕದ ಹೊರೆಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಆದರೆ, ವಾಹನ ಬಿಡಿಭಾಗಗಳನ್ನು ರಫ್ತು ಮಾಡುವ ಸೋನಾ ಬಿಎಲ್‌ಡಬ್ಲ್ಯು ಪ್ರಿಷಿಸನ್ ಫೋರ್ಜಿಂಗ್ಸ್, ಸಂವರ್ಧನಾ ಮದರ್‌ಸನ್ ಇಂಟರ್‌ನ್ಯಾಷನಲ್ ಮತ್ತು ಭಾರತ್ ಫೋರ್ಜ್ ಕಂಪನಿಗಳಿಗೆ ಟ್ರಂಪ್ ನೀತಿಯು ಹೆಚ್ಚು ಪೆಟ್ಟು ನೀಡುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಸೋನಾ ಕಂಪನಿಯ ಶೇ 43ರಷ್ಟು ಹಾಗೂ ಭಾರತ್ ಫೋರ್ಜ್ ಕಂಪನಿಯ ಶೇ 38ರಷ್ಟು ಆದಾಯವು ಅಮೆರಿಕದ ಮೇಲೆ ನಿಂತಿದೆ.

ಸುದ್ದಿ 2 ನಿಮಿಷ

ಅಮೆಜಾನ್, ಫ್ಲಿಪ್‌ಕಾರ್ಟ್ ಗೋದಾಮು ಮೇಲೆ ಬಿಐಎಸ್ ದಾಳಿ

ನವದೆಹಲಿ (ಪಿಟಿಐ): ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್‌ಗೆ ಸೇರಿದ ಗೋದಾಮುಗಳ ಮೇಲೆ ಭಾರತೀಯ ಪ್ರಮಾಣೀಕರಣ ಸಂಸ್ಥೆಯು (ಬಿಐಎಸ್) ದಾಳಿ ನಡೆಸಿದೆ. ಗುಣಮಟ್ಟದ ಪ್ರಮಾಣ ಪತ್ರ ಹೊಂದಿಲ್ಲದ ಸಾವಿರಾರು ಉತ್ಪನ್ನಗಳನ್ನು ಜಪ್ತಿ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ಅಮೆಜಾನ್ ಕಂಪನಿಗೆ ಸೇರಿದ ಗೋದಾಮಿನ ಮೇಲೆ ದಾಳಿ ನಡೆಸಿದ ಬಿಐಎಸ್ ಅಧಿಕಾರಿಗಳು 15 ಗಂಟೆ ತಪಾಸಣೆ ನಡೆಸಿದ್ದರು. ಈ ವೇಳೆ ಗೀಸರ್, ಮಿಕ್ಸರ್ ಸೇರಿ 3,500ಕ್ಕೂ ಹೆಚ್ಚು ಗೃಹೋಪಯೋಗಿ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ಇವುಗಳ ಅಂದಾಜು ಮೌಲ್ಯ ₹70 ಲಕ್ಷ ಆಗಿದೆ ಎಂದು ತಿಳಿಸಿದೆ.

ಫ್ಲಿಪ್‌ಕಾರ್ಟ್‌ನ ಅಂಗಸಂಸ್ಥೆಯಾದ ಇನ್‌ಸ್ಟಾಕಾರ್ಟ್ ಸರ್ವಿಸಸ್ ಮೇಲಿನ ದಾಳಿಯಲ್ಲಿ ₹6 ಲಕ್ಷ ಮೌಲ್ಯದ ಪಾದರಕ್ಷೆಗಳನ್ನು ಜಪ್ತಿ ಮಾಡಿದೆ ಎಂದು ಹೇಳಿದೆ.

29ರಿಂದ ಮೂರು ದಿನ ಐ.ಟಿ ಕಚೇರಿ ಕಾರ್ಯ ನಿರ್ವಹಣೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷವು ಮಾರ್ಚ್ 31ರಂದು ಮುಕ್ತಾಯವಾಗಲಿದೆ. ಹಾಗಾಗಿ, ತೆರಿಗೆದಾರರಿಗೆ ಅನುಕೂಲ ಕಲ್ಪಿಸಲು ಮಾರ್ಚ್ 29ರಿಂದ 31ರ ವರೆಗೆ ದೇಶದಾದ್ಯಂತ ಆದಾಯ ತೆರಿಗೆ ಇಲಾಖೆಯ ಕಚೇರಿಗಳು ಕಾರ್ಯ ನಿರ್ವಹಿಸಲಿವೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಗುರುವಾರ ತಿಳಿಸಿದೆ.

ಸೋಮವಾರ ಈದ್–ಉಲ್–ಫಿತರ್ ಹಬ್ಬವಿದೆ. ಆದರೂ, ಕಚೇರಿಗಳು ತೆರೆದಿರಲಿವೆ ಎಂದು ತಿಳಿಸಿದೆ.

ಸರ್ಕಾರದ ಜೊತೆ ವ್ಯವಹರಿಸುವ ಎಲ್ಲ ಬ್ಯಾಂಕ್‌ಗಳು ಮಾರ್ಚ್ 31ರಂದು ಕಾರ್ಯ ನಿರ್ವಹಿಸಬೇಕಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ದೇಶನ ನೀಡಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ		ಹೊಸಚಾಲಿ	32509-37799	ಚಾಲಿ	33018-39501
ಅಪಿ	50619-51059	ಕೆಂಪುಗೋಟು	18119-20889	ರಾಶಿ	40009-49899
ಬೆಟ್ಟೆ	24629-25099	ರಾಶಿ	41689-47509	ಯಲ್ಲಾಪುರ	
ಕೆಂಪುಗೋಟು	19609-20010	ತಟ್ಟಿಬೆಟ್ಟೆ	27919-38089	ಬಿಳಿಗೋಟು	12899-29899
ರಾಶಿ	50139-50569	ಶಿವಮೊಗ್ಗ		ಚಾಲಿ	29999-39599
ಸಿದ್ದಾಪುರ		ಗೊರಬಲು	16950-22068	ಕೋಕ	4609-15710
ಬಿಳಿಗೋಟು	22409-28169	ರಾಶಿ	47869-50500	ಕೆಂಪುಗೋಟು	14899-26899
ಚಾಲಿ	33849-37999	ಶಿರಸಿ		ರಾಶಿ	40099-55129
ಕೋಕ	13699-22209	ಬೆಟ್ಟೆ	27199-43001	ತಟ್ಟಿಬೆಟ್ಟೆ	27706-39424
		ಬಿಳಿಗೋಟು	15399-35001		

ಮುಂಬೈ ಧಾರಣೆ (ಶೇಂಗಾ)

27-03-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7500-7600
ದಪ್ಪ ಗುಜರಾತ್(ಹೊಸ)	7800-7900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1400)
ಒಂದು ವಾರದ ಡೆಲಿವರಿ	1385 (1395)
ಪಾಮ್ ವಾರದ ಡೆಲಿವರಿ	1338 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1340)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹87,850 (87,350)

ಬೆಳ್ಳಿ ಕೆ.ಜಿ ₹99,650 (98,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-2,200
ಮಧ್ಯಮ	₹800-1,200
ಸಣ್ಣ	₹400-800

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1390)
ಸೋಯಾ (ರಿಫೈನ್ಡ್)	₹1285 (1275)
ಸೂರ್ಯಕಾಂತಿ (ರಿಫೈನ್ಡ್)	₹1390 (1390)
ಪಾಮೋಲಿನ್	₹1340 (1345)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

2ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಸೀತಮ್ಮ
ಮರಣ 28–03–2023
ನಿಮ್ಮ ನೆನಪು ನಮ್ಮ ಮನದಲ್ಲಿರಲಿ ನಿಮ್ಮ ಆಶೀರ್ವಾದ ಸದಾ ನಮ್ಮೊಂದಿಗೆ ಇರಲಿ ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಇಂತಿ:
ಪತಿ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಸೊಸೆಯಂದಿರು

ಸಂಕ್ಷಿಪ್ತ ಸುದ್ದಿ

ಚಿನ್ನ, ಬೆಳ್ಳಿ ಬೆಲೆ ಏರಿಕೆ ಅಬಾಧಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಕೂಡ ಚಿನ್ನದ ಬೆಲೆ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ದರವು ₹356 ಏರಿಕೆ ಕಂಡಿದ್ದು, ₹91,050 ಆಗಿದೆ. ಆಭರಣ ಚಿನ್ನ (99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಹೆಚ್ಚಳಗೊಂಡಿದ್ದು, ₹90,600 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪ್ರತಿ ಕೆ.ಜಿ. ಬೆಳ್ಳಿ ಬೆಲೆಯು ₹200 ಏರಿಕೆ ಕಂಡಿದ್ದು, ₹1,01,700 ಆಗಿದೆ.

'ವಾಹನ ಮತ್ತು ಅವುಗಳ ಬಿಡಿಭಾಗದ ಮೇಲೆ ಸುಂಕ ಹೇರಿಕೆ ಮಾಡುವ ಬಗ್ಗೆ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇದರಿಂದ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಅನಿಶ್ಚಿತ ಸ್ಥಿತಿಯು ಹಳದಿ ಲೋಹದ ಬೆಲೆ ಏರಿಕೆಗೆ ಕಾರಣವಾಗಿದೆ' ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಕೊಬ್ಬರಿ ಬೆಲೆ ಏರಿಕೆ

ಅರಸೀಕೆರೆ: ಇಲ್ಲಿನ ಮಾರುಕಟ್ಟೆಯಲ್ಲಿ ಒಣ ಕೊಬ್ಬರಿ ಧಾರಣೆಯು ಏರುಗತಿಯಲ್ಲಿ ಸಾಗಿದ್ದು, ತೆಂಗು ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ. ಕ್ವಿಂಟಲ್‌ಗೆ ಗರಿಷ್ಠ ದರ ₹18,800ಕ್ಕೆ ತಲುಪಿದೆ.

ಹಲವು ತಿಂಗಳಿನಿಂದ ₹13 ಸಾವಿರದಿಂದ ₹14 ಸಾವಿರದವರೆಗೆ ಮಾರಾಟವಾಗುತ್ತಿತ್ತು. ಮಾರುಕಟ್ಟೆಗೆ ಆವಕ ಕಡಿಮೆಯಾಗಿದೆ. ಇದರಿಂದ ಬೆಲೆ ಏರಿಕೆಯಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಅದಾನಿ ಸಂಪತ್ತು ಶೇ 13ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಭಾರತದ 284 ಶತಕೋಟ್ಯಧಿಪತಿಗಳ ಸಂಪತ್ತು ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಮೂರನೇ ಒಂದು ಭಾಗದಷ್ಟಿದೆ ಎಂದು ಜಾಗತಿಕ ಸಿರಿವಂತರ ಪಟ್ಟಿ ಕುರಿತು ಹುರುನ್ ಗ್ಲೋಬಲ್ ಸಂಸ್ಥೆಯು ಗುರುವಾರ ಪ್ರಕಟಿಸಿರುವ ವರದಿ ತಿಳಿಸಿದೆ.

ಕಳೆದ ಬಾರಿ ಶತಕೋಟ್ಯಧಿಪತಿಗಳ ರಾಜಧಾನಿ ಪಟ್ಟ ಪಡೆದಿದ್ದ ಮುಂಬೈ ಈ ಬಾರಿ ತನ್ನ ಸ್ಥಾನ ಕಳೆದುಕೊಂಡಿದ್ದು, ಶಾಂಘೈ ಅಗ್ರಸ್ಥಾನಕ್ಕೇರಿದೆ.

ಶತಕೋಟ್ಯಧಿಪತಿಗಳ ಸಂಪತ್ತಿನ ಮೌಲ್ಯದಲ್ಲಿ ಶೇ 10ರಷ್ಟು ಏರಿಕೆಯಾಗಿದೆ. ಒಟ್ಟು ₹98 ಲಕ್ಷ ಕೋಟಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಗೌತಮ್ ಅದಾನಿ

ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರ ಸಂಪತ್ತಿನಲ್ಲಿ ₹1 ಲಕ್ಷ ಕೋಟಿ ಏರಿಕೆಯಾಗಿದೆ. ಜಾಗತಿಕ ಮಟ್ಟದಲ್ಲಿ ಅತಿಹೆಚ್ಚು ಸಂಪತ್ತು ಗಳಿಸಿದ ವ್ಯಕ್ತಿಯಾಗಿದ್ದಾರೆ. ಅವರ ಆಸ್ತಿಯ ಮೌಲ್ಯ ₹8.4 ಲಕ್ಷ ಕೋಟಿ ಆಗಿದೆ. ಕಳೆದ ವರ್ಷ ಅವರ ನಿವ್ವಳ ಸಂಪತ್ತಿನಲ್ಲಿ ಶೇ 13ರಷ್ಟು ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರ ಆಸ್ತಿಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 13ರಷ್ಟು ಇಳಿಕೆಯಾಗಿದ್ದು, ಸಂಪತ್ತಿನ ಮೌಲ್ಯ ₹8.6 ಲಕ್ಷ ಕೋಟಿ ಆಗಿದೆ.

ಎಚ್‌ಸಿಎಲ್ ಕಂಪನಿಯ ಸಂಸ್ಥಾಪಕ ಶಿವ ನಾಡಾರ್ ಅವರು, ಶೇ 47ರಷ್ಟು ಷೇರುಗಳನ್ನು ಪುತ್ರಿ ರೋಶನಿ ನಾಡಾರ್ ಅವರಿಗೆ ಇತ್ತೀಚೆಗೆ ನೀಡಿದ್ದರು. ಇದರಿಂದ ರೋಶನಿ ಅವರ ನಿವ್ವಳ ಸಂಪತ್ತಿನ ಮೌಲ್ಯ ₹3.5 ಲಕ್ಷ ಕೋಟಿ ಆಗಿದೆ. ಅವರು ಭಾರತದ ಅತಿದೊಡ್ಡ ಶ್ರೀಮಂತ ಮಹಿಳೆಯಾಗಿದ್ದಾರೆ. ಜಾಗತಿಕ ಮಟ್ಟದಲ್ಲಿ 5ನೇ ಸಿರಿವಂತರಾಗಿದ್ದಾರೆ.

ಇಸ್ರೇಲ್ ವಿರುದ್ಧದ ಯುದ್ಧ ಕೊನೆಗಾಣಿಸುವಂತೆ ಒತ್ತಾಯಿಸಿ ಪ್ಯಾಲೆಸ್ಟೀನಿಯನ್ನರು ಹಮಾಸ್ ಬಂಡುಕೋರರ ವಿರುದ್ಧ ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

ಗಾಜಾ: ಹಮಾಸ್ ವಿರುದ್ಧ ಮುಂದುವರಿದ ಪ್ರತಿಭಟನೆ

ಕೈರೊ (ಎಪಿ): ಗಾಜಾದ ಉತ್ತರ ಭಾಗದಲ್ಲಿ ಹಮಾಸ್ ಬಂಡುಕೋರರ ವಿರುದ್ಧ ಸಹಸ್ರಾರು ಪ್ಯಾಲೆಸ್ಟೀನಿಯನ್ನರು ಎರಡನೇ ದಿನವೂ ಪ್ರತಿಭಟನೆ ಮುಂದುವರಿಸಿದರು.

ಹಮಾಸ್ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಕಾರರು, 17 ತಿಂಗಳಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವಂತೆ ಆಗ್ರಹಿಸಿದರು. 'ಹಮಾಸ್ ಪತನವಾಗಲಿ', 'ಹಮಾಸ್ ತೊಲಗಲಿ' ಎಂದು ಅವರು ಘೋಷಣೆಗಳನ್ನು ಕೂಗಿದರು.

'ಇದು ರಾಜಕೀಯ ಉದ್ದೇಶದ ಪ್ರತಿಭಟನೆಯಲ್ಲ, ಬದಲಿಗೆ ಜನರ ಜೀವ ಉಳಿಸುವ ಉದ್ದೇಶ ಹೊಂದಿದೆ' ಎಂದು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವ್ಯಕ್ತಿಯೊಬ್ಬರು ಹೇಳಿದರು.

'ನಾವು ಸಾವು, ನೋವು ಮತ್ತು ಸ್ಥಳಾಂತರವನ್ನು ನಿಲ್ಲಿಸ ಬಯಸುತ್ತೇವೆ. ನಮ್ಮಿಂದ ಇಸ್ರೇಲ್ ಅನ್ನು ತಡೆಯುವುದಕ್ಕೆ ಆಗುವುದಿಲ್ಲ. ಆದರೆ ಹಮಾಸ್ ಮೇಲೆ ಒತ್ತಡ ಹೇರಬಹುದು' ಎಂದು ಅವರು ಪ್ರತಿಕ್ರಿಯಿಸಿದರು.

ಒಳಮೀಸಲಿಗೆ ಹೊಸ ಸಮೀಕ್ಷೆ

ಒಂದನೇ ಪುಟದಿಂದ...

ಈ ಬೆನ್ನಲ್ಲೇ, ಒಳಮೀಸಲಾತಿ ನೀಡುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ಸರ್ಕಾರ ಆಯೋಗವನ್ನು ರಚಿಸಿತ್ತು. ಆಯೋಗವು ಗುರುವಾರ ಬೆಳಿಗ್ಗೆ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿತು. ಬಳಿಕ ನಡೆದ ಸಚಿವ ಸಂಪುಟ ಸಭೆಯಲ್ಲಿ ವರದಿ ಮಂಡಿಸಿ, ಆಯೋಗದ ಮಾಡಿದ್ದ ನಾಲ್ಕು ಶಿಫಾರಸುಗಳಿಗೆ ಅನುಮೋದನೆ ನೀಡಲಾಯಿತು.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು, 'ಒಳ ಮೀಸಲಾತಿ ನೀಡುವುದಕ್ಕಾಗಿ ಪರಿಶಿಷ್ಟ ಜಾತಿಯಲ್ಲಿನ 101 ಉಪಜಾತಿಗಳ ದತ್ತಾಂಶ ಸಂಗ್ರಹಿಸುವುದಕ್ಕೆ ಹೊಸ ಸಮೀಕ್ಷೆ ನಡೆಸಬೇಕು ಎಂದು ಆಯೋಗ ಮಾಡಿರುವ ಶಿಫಾರಸನ್ನು ಒಪ್ಪಿದ್ದೇವೆ' ಎಂದರು.

ಒಳಮೀಸಲಾತಿ ವರ್ಗೀಕರಣವನ್ನು ತ್ವರಿತವಾಗಿ ಮತ್ತು ವೈಜ್ಞಾನಿಕವಾಗಿ ಕೈಗೊಳ್ಳಲು ಹೊಸ ಸಮೀಕ್ಷೆ ನಡೆಸುವ ಕಾರ್ಯವನ್ನು ನಾಗಮೋಹನ್ ದಾಸ್ ಆಯೋಗಕ್ಕೇ ವಹಿಸಲು ಸಂಪುಟ ಸಭೆ ನಿರ್ಣಯಿಸಿದೆ. ಸಮೀಕ್ಷಾ ಕಾರ್ಯವನ್ನು 60 ದಿನಗಳೊಳಗೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ಅನುಕೂಲವಾಗುವಂತೆ ಆಯೋಗದ ಅವಧಿಯನ್ನು ಎರಡು ತಿಂಗಳವರೆಗೆ ವಿಸ್ತರಿಸಲಾಗಿದೆ ಎಂದರು.

ಈ ಕುರಿತು ಹೆಚ್ಚಿನ ವಿವರ ನೀಡಿದ ಸಮಾಜಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಮೀಕ್ಷೆ ಕಾರ್ಯವನ್ನು ಸರ್ಕಾರದ ಮುಖ್ಯಕಾರ್ಯದರ್ಶಿಯವರ ಉಸ್ತುವಾರಿಯಲ್ಲಿ ಆಧುನಿಕ ತಂತ್ರಜ್ಞಾನ ವನ್ನು ಬಳಸಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಲಾಗುವುದು ಎಂದರು.

ಸಮೀಕ್ಷೆ ಕೈಗೊಳ್ಳಲು ಬೇಕಿರುವ ಎಲ್ಲ ಸೌಲಭ್ಯಗಳನ್ನು ಆಯೋಗಕ್ಕೆ ಒದಗಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಕಾರ್ಯದರ್ಶಿಗಳ ಸಭೆ ನಡೆಸಲಾಗುವುದು. ಭವಿಷ್ಯದಲ್ಲಿ ಯಾವುದೇ ಗೊಂದಲಗಳು ಉಂಟಾಗದಂತೆ ದತ್ತಾಂಶಗಳನ್ನು ಕರಾರುವಕ್ಕಾಗಿ ಪಡೆಯಲಾಗುವುದು ಎಂದರು.

ಈ ಹಿಂದೆ ನಡೆಸಲಾಗಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿಯಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ, ಎಸ್‌ಸಿ ವರ್ಗಗಳ ಎಲ್ಲ ಉಪಜಾತಿಗಳ ಮಾಹಿತಿ ಇಲ್ಲ. ಈ ದತ್ತಾಂಶ ಇಲ್ಲದಿದ್ದರೆ ಕಾನೂನಿನಡಿ ಮಾನ್ಯತೆ ಸಿಗುವುದಿಲ್ಲ. ಯಾರಾದರೂ ನ್ಯಾಯಾಲಯದ ಮೆಟ್ಟಿಲು ಹತ್ತಿದರೆ ಸಮಸ್ಯೆ ಆಗುತ್ತದೆ. ಸರ್ಕಾರದ ಸಿಬ್ಬಂದಿಯ ಮೂಲಕ ಸಮೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಮನೆ ಮನೆಗೆ ಹೋಗಿ ದತ್ತಾಂಶ ಸಂಗ್ರಹಿಸುತ್ತಾರೆ ಎಂದು ಹೇಳಿದರು.

ರಾಜ್ಯದಲ್ಲಿ ಸುಮಾರು 1.30 ಕೋಟಿಯಷ್ಟು ಪರಿಶಿಷ್ಟ ಜಾತಿಯವರು ಇರಬಹುದು ಎಂಬ ಅಂದಾಜಿಸಲಾಗಿದೆ. ಎಲ್ಲರ ಮಾಹಿತಿಯನ್ನೂ ಸಂಗ್ರಹಿಸಲಾಗುವುದು. ಇದಕ್ಕೆ ಅಗತ್ಯವಿರುವ ಹಣವನ್ನು ಸರ್ಕಾರ ನೀಡಲಿದೆ ಎಂದು ಮಹದೇವಪ್ಪ ತಿಳಿಸಿದರು.

ಸಿ.ಎಂ.ಗೆ ವರದಿ ಸಲ್ಲಿಕೆ: ಸಚಿವ ಸಂಪುಟ ಸಭೆಗೂ ಮೊದಲು ನಾಗ ಮೋಹನ್‌ದಾಸ್ ಅವರು ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದರು. ಬಳಿಕ ಮಾತನಾಡಿದ ನಾಗಮೋಹನ್ ದಾಸ್, 'ಈ ವರದಿ ತಯಾರಿಸಲು ಎರಡು ತಿಂಗಳು ಬೇಕಾಯಿತು. 104 ಪುಟಗಳ ವರದಿಯನ್ನು ಕೊಟ್ಟಿದ್ದೇವೆ. ಮಧ್ಯಂತರ ವರದಿ ಕೊಡಿ ಎಂದು ಸರ್ಕಾರ ಕೇಳಿರಲಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಉದ್ಯೋಗಕಾಂಕ್ಷಿಗಳಿಗೆ ಅನ್ಯಾಯ ಆಗಬಾರದು. ಅವರಿಗೆ ಶಾಶ್ವತವಾದ ಪರಿಹಾರ ಕೊಡಬೇಕು. ಈ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Cook

ಅನುಭವ ಮತ್ತು ಪರಿಣಿತಿ ಹೊಂದಿರುವ ಇಂಡಿಯನ್, ಚೈನೀಸ್ ಮತ್ತು ತಂದೂರಿ ಮಾಸ್ಟರ್ ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ ನೆಲಮಂಗಲ: 9845684631

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

7 ದಿನಗಳ ಅಷ್ಟ ಜ್ಯೋತಿರ್ಲಿಂಗ. 14 ದಿನಗಳ ಚಾರ್‌ಧಾಮ. ಕಾಶಿ ಯಾತ್ರೆ. ಸಂಪರ್ಕಿಸಿ. ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು: 9448294477

7ದಿನಗಳ ಕಾಶಿ ಅಯೋಧ್ಯಾ ಗಯಾ,ಬುದ್ಧಗಯಾ. 13 ದಿನಗಳ ಚಾರ್ಧಾಮಯಾತ್ರೆ. 7 ದಿನಗಳ ಅಮರನಾಥ್. 10 ದಿನಗಳ ನೇಪಾಳ ಮುಕ್ತಿನಾಥ,ಅಯೋಧ್ಯಾ. ಸಂಪರ್ಕಿಸಿ: ನಂದಿ ಹಾಲಿಡೇಸ್ ಗಾಂಧಿಬಜಾರ್ ಬಸವನಗುಡಿ ಬೆಂಗಳೂರು-04. 9740228186 9980270467

ಸುಸಜ್ಜಿತವಾದ ಊಟ,ತಿಂಡಿ ವಸತಿಯೊಂದಿಗೆ 14.6.2025 ರಿಂದ ರೈಲಿನಲ್ಲಿ 8ದಿನಗಳ ಕಾಶಿಯಾತ್ರೆ. ಪ್ರಯಾಗ್ ರಾಜ್ ಅಯೋಧ್ಯ,ಕಾಶಿ,ಇತ್ಯಾದಿ. ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್.9741024122, 9740311411.

8.4.2025 ಪುರಿ ಜಗನ್ನಾಥ, ಕಲ್ಕತ್ತಾ 22.4.2025 ಜಾರ್ಖಂಡ್ ವೈದ್ಯನಾಥ ಕಾಶಿ ಗಯ ಅಯೋಧ್ಯೆ: 3.5.2025 ಶ್ರೀಶೈಲ ಮಂತ್ರಾಲಯ ಹೈದರಾಬಾದ್: 13.5.2025 ಶಿರಡಿ ಮೂರು ಜ್ಯೋತಿರ್ಲಿಂಗ: 28.5.2025: ತಮಿಳುನಾಡು ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply

'ನಮಾಜ್: ರಸ್ತೆ, ತಾರಸಿಗಳ ಮೇಲೆ ಗುಂಪು ಸೇರುವುದು ನಿಷಿದ್ಧ'

ಸಂಭಲ್ (ಉತ್ತರ ಪ್ರದೇಶ): 'ರಂಜಾನ್ ಸಂದರ್ಭದಲ್ಲಿ ರಸ್ತೆ, ಕಟ್ಟಡಗಳ ತಾರಸಿ ಮೇಲೆ ನಮಾಜ್ ಮಾಡುವುದನ್ನು ನಿಷೇಧಿಸಲಾಗಿದೆ' ಎಂದು ಸಂಭಲ್ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀಶ ಚಂದ್ರ ಗುರುವಾರ ತಿಳಿಸಿದ್ದಾರೆ. ಅವಘಡ ನಡೆಯದಂತೆ ತಡೆಯುವುದು ಇದರ ಉದ್ದೇಶ ಎಂದು ಹೇಳಿದ್ದಾರೆ.

'ಅಲ್ವಿದಾ' (ರಂಜಾನ್ ಮಾಸದ ಕೊನೆಯ ಶುಕ್ರವಾರ ನಡೆಯುವ ಪ್ರಾರ್ಥನೆ) ಸಿದ್ಧತೆ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾನೂನು ಸುವ್ಯವಸ್ಥೆ ರಕ್ಷಣೆಗಾಗಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದರು.

'ತಾರಸಿಯಲ್ಲಿ ನಮಾಜ್ ಮಾಡಬಹುದೇ ಎಂದು ಶಾಂತಿ ಸಮಿತಿ ಸಭೆಯಲ್ಲಿ ಕೇಳಿಬಂದ ಪ್ರಶ್ನೆಗೆ, ಹೆಚ್ಚಿನ ಜನ ಸೇರಿದಲ್ಲಿ ಅವಘಡ ಸಂಭವಿಸಬಹುದು ಎಂದು ಮನವರಿಕೆ ಮಾಡಲಾಗಿದೆ' ಎಂದು ತಿಳಿಸಿದರು.

ಸಾಂಪ್ರದಾಯಿಕವಾಗಿ ಮಸೀದಿಗಳು ಮತ್ತು ಈದ್ಗಾ ಆವರಣದಲ್ಲಿ ನಮಾಜ್ ಮಾಡಲು ಯಾವುದೇ ನಿರ್ಬಂಧ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಗಡಿ ಸಮಸ್ಯೆ: ನ್ಯಾಯಯುತ ಪರಿಹಾರಕ್ಕೆ ಉತ್ಸುಕ–ಪಿಎಲ್‌ಎ

ಬೀಜಿಂಗ್(ಪಿಟಿಐ): ಗಡಿ ಸಮಸ್ಯೆಗಳಿಗೆ ಸಂಬಂಧಿಸಿ ನ್ಯಾಯಯುತ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಭಾರತದೊಂದಿಗೆ ಕಾರ್ಯನಿರ್ವಹಿಸಲು ಉತ್ಸುಕವಾಗಿರುವುದಾಗಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಗುರುವಾರ ಹೇಳಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿರುವ ಪಿಎಲ್‌ಎ ವಕ್ತಾರ ಸೀನಿಯರ್ ಕರ್ನಲ್ ವು ಕಿಯಾನ್, 'ಉಭಯ ದೇಶಗಳ ಬಾಂಧವ್ಯ ಸದೃಢ ಹಾಗೂ ಸ್ಥಿರವಾಗಿ ಇರುವುದನ್ನು ಖಾತ್ರಿಪಡಿಸುವುದಕ್ಕಾಗಿ ಕಾರ್ಯ ನಿರ್ವಹಿಸಲು ಸೇನೆ ಸಿದ್ಧವಾಗಿದೆ' ಎಂದು ಹೇಳಿದ್ದಾರೆ.

ಪೂರ್ವ ಲಡಾಖ್ ಗಡಿಯಿಂದ ಎರಡೂ ದೇಶಗಳನ್ನು ಯೋಧರನ್ನು ಸಂಪೂರ್ಣವಾಗಿ ಹಿಂದಕ್ಕೆ ಪಡೆಯುವ ಕುರಿತು ಪತ್ರಕರ್ತರ ಪ್ರಶ್ನೆಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಚರ್ಚೆ: ಚೀನಾ ಪ್ರವಾಸದಲ್ಲಿರುವ, ವಿದೇಶಾಂಗ ಸಚಿವಾಲಯ ಜಂಟಿ ಕಾರ್ಯದರ್ಶಿ (ಪೂರ್ವ ಏಷ್ಯಾ) ಗೌರಂಗಲಾಲ್ ದಾಸ್ ನೇತೃತ್ವದ ನಿಯೋಗವು, ಹಲವು ವಿಷಯಗಳ ಕುರಿತು ಚೀನಾ ವಿದೇಶಾಂಗ ಇಲಾಖೆ ಅಧಿಕಾರಿಗಳೊಂದಿಗೆ ಬುಧವಾರ ಚರ್ಚೆ ನಡೆಸಿತು. ಉಭಯ ದೇಶಗಳ ನಡುವೆ ನೇರ ವಿಮಾನ ಸೇವೆಗೆ ಚಾಲನೆ ನೀಡುವುದು, ಈ ವರ್ಷ ಕೈಲಾಸ ಮಾನಸ ಸರೋವರ ಯಾತ್ರೆ ಆರಂಭಿಸುವುದು ಸೇರಿದಂತೆ ದ್ವಿಪಕ್ಷೀಯ ಸಂಬಂಧ ಬಲಪಡಿಸುವ ಕುರಿತು ಚರ್ಚಿಸಿದರು.

ಅಮೆರಿಕ: 'ಸಿಗ್ನಲ್' ಆ್ಯಪ್‌ನಲ್ಲಿ ಸೋರಿಕೆ ವಿಚಾರ • ವಿಶ್ವಾಸಾರ್ಹತೆಗೆ ಧಕ್ಕೆ- ವಿಪಕ್ಷ ಕಿಡಿ

'ರಹಸ್ಯ ಮಾಹಿತಿ ಸೋರಿಕೆಯಾಗಿಲ್ಲ'

ವಾಷಿಂಗ್ಟನ್(ಎಪಿ): ಅಮೆರಿಕ ನಡೆಸಲು ಉದ್ದೇಶಿಸಿದ್ದ ದಾಳಿಗಳ ಕುರಿತು ರಕ್ಷಣಾ ಇಲಾಖೆ ಅಧಿಕಾರಿಗಳು 'ಸಿಗ್ನಲ್'ನಲ್ಲಿ ಮಾಡಿರುವ ಚಾಟ್‌ಗಳು ಸೋರಿಕೆಯಾಗಿರುವ ವಿಚಾರ ಭಾರಿ ವಿವಾದ ಸೃಷ್ಟಿಸಿದೆ.

'ಸಾರ್ವಜನಿಕವಾಗಿ ಲಭ್ಯವಿರುವ ಸಿಗ್ನಲ್ ಆ್ಯಪ್‌ನಲ್ಲಿ ಹಂಚಿಕೆಯಾಗಿರುವುದು ರಹಸ್ಯ ಮಾಹಿತಿಯಲ್ಲ' ಎಂದು ಶ್ವೇತಭವನ ಹೇಳಿದೆ.

ಸರ್ಕಾರದ ಈ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿರುವ ಡೆಮಾಕ್ರಟಿಕ್ ಸಂಸದರು, 'ಹೂಥಿ ಬಂಡುಕೋರರ ಮೇಲೆ ನಡೆಸಲು ಉದ್ದೇಶಿಸಿದ್ದ ದಾಳಿಗಳ ಕುರಿತ ಮಾಹಿತಿ ಸೋರಿಕೆಯಾಗಿದೆ. ಇದರಿಂದ ರಹಸ್ಯ ಮಾಹಿತಿ ಕಾಪಾಡುವ ಕುರಿತ ವಿಶ್ವಾಸಾರ್ಹತೆಗೆ ಧಕ್ಕೆಯಾಗಿದೆ' ಎಂದಿದ್ದಾರೆ.

ಯೆಮೆನ್‌ನ ಹೂಥಿ ಬಂಡುಕೋರರನ್ನು ಗುರಿಯಾಗಿಸಿ ನಡೆಸಲು ಉದ್ದೇಶಿಸಿದ್ದ ದಾಳಿಗೆ ಸಂಬಂಧಿಸಿದ ಯೋಜನೆ ಕುರಿತು ರಾಷ್ಟ್ರೀಯ ಭದ್ರತಾ ಅಧಿಕಾರಿಗಳು ನಡೆಸಿದ್ದ ಚಾಟ್‌ಗಳು ಸೋರಿಕೆಯಾಗಿವೆ ಎನ್ನಲಾಗಿದೆ.

'ದಿ ಅಟ್ಲಾಂಟಿಕ್' ನಿಯತಕಾಲಿಕೆಯ ಪ್ರಧಾನ ಸಂಪಾದಕ ಜೆಫ್ರಿ ಗೋಲ್ಡ್‌ಬರ್ಗ್ ಅವರನ್ನು ಆಕಸ್ಮಿಕವಾಗಿ ಈ ಆ್ಯಪ್‌ನ ಗ್ರೂಪ್‌ಗೆ ಸೇರಿಸಲಾಗಿದೆ. ಉದ್ದೇಶಿತ ದಾಳಿ ಕುರಿತ ಮೆಸೇಜ್‌ಗಳನ್ನು ಅವರು ಹಂಚಿಕೊಂಡಿದ್ದಾರೆ ಎನ್ನಲಾಗಿದ್ದು, ಇದು ಈಗ ವಿವಾದಕ್ಕೆ ಕಾರಣವಾಗಿದೆ.

ಮುಖ್ಯಾಂಶಗಳು

- ಮಾರ್ಚ್ 13ರಿಂದ 15ರ ನಡುವೆ 'ಸಿಗ್ನಲ್' ಆ್ಯಪ್‌ನಲ್ಲಿ ಚಾಟಿಂಗ್
- ಚಾಟ್‌ನ ಪೂರ್ಣಪಾಠ ಪ್ರಕಟಿಸಿದ ಅಟ್ಲಾಂಟಿಕ್ ನಿಯತಕಾಲಿಕ

ಪಟೇಲ್ ಹೇಳಿಕೆ: ಎಫ್‌ಬಿಐ ನಿರ್ದೇಶಕ ಪಟೇಲ್ ಅವರು ಈ 'ಸಿಗ್ನಲ್' ಆ್ಯಪ್ ಬಳಕೆದಾರರಲ್ಲ. ಆದರೂ, ದಾಳಿಗಳ ಕುರಿತ ಚಾಟ್‌ಗಳು ಸೋರಿಕೆಯಾಗಿರುವುದಕ್ಕೆ ಸಂಬಂಧಿಸಿ, ಸೆನೆಟ್ ಹಾಗೂ ಕೆಳಮನೆಯಲ್ಲಿ (ಹೌಸ್ ಆಫ್ ರೆಪ್ರಸೆಂಟೇಟಿವ್ಸ್), ಅವರನ್ನು ಕಳೆದ ಎರಡು ದಿನಗಳಿಂದ ವಿಚಾರಣೆಗೆ ಒಳಪಡಿಸಲಾಗಿದೆ.

'ದಿ ಅಟ್ಲಾಂಟಿಕ್ ನಿಯತಕಾಲಿಕ ಪ್ರಧಾನ ಸಂಪಾದಕರಿಗೆ ಹಂಚಿಕೆಯಾಗಿರುವ ಚಾಟ್‌ಗಳನ್ನು ವೈಯಕ್ತಿಕವಾಗಿ ನಾನು ಪರಿಶೀಲಿಸಿಲ್ಲ' ಎಂದು ಪಟೇಲ್ ಅವರು ಸೆನೆಟ್ ಹಾಗೂ ಕೆಳಮನೆ ಸಮಿತಿಗಳ ಮುಂದೆ ಸಾಕ್ಷ್ಯ ನುಡಿದಿದ್ದಾರೆ.

ಟ್ರಂಪ್ ಪ್ರತಿಕ್ರಿಯೆ: ಆಮದು ವಾಹನಗಳ ಮೇಲಿನ ನೂತನ ಸುಂಕ ಕುರಿತು ಘೋಷಿಸಲು ಓವಲ್ ಕಚೇರಿಗೆ ಆಗಮಿಸಿದ್ದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಈ ವಿಚಾರ ಕುರಿತು ಪತ್ರಕರ್ತರು ಪದೇಪದೇ ಪ್ರಶ್ನೆಗಳನ್ನು ಕೇಳಿದ್ದಾರೆ.

ಈ ಪ್ರಶ್ನೆಗಳಿಂದ ಹತಾಶೆಗೊಂಡಂತೆ ಕಂಡು ಬಂದ ಟ್ರಂಪ್,'ಇದು ಪಿತೂರಿ ಅಷ್ಟೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಇಲ್ಲವೇ ನಿರ್ಲಕ್ಷತನದಿಂದಾಗಿ ಸೋರಿಕೆ ಮಾಡಿದವರ ವಿರುದ್ಧ ಬೇಹುಗಾರಿಕೆ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ಕಳೆದ ಹಲವು ದಶಕಗಳಿಂದ ಎಫ್‌ಬಿಐ ಹಾಗೂ ನ್ಯಾಯಾಂಗ ಇಲಾಖೆಗಳು ಈ ಕಾಯ್ದೆಯ ಅನುಷ್ಠಾನದ ಹೊಣೆ ಹೊತ್ತಿವೆ' ಎಂದು ಹೇಳಿದ್ದಾರೆ.

'ಈಗ ರಾಷ್ಟ್ರೀಯ ಭದ್ರತೆ ಕುರಿತ ಮಾಹಿತಿ ಸಿಗ್ನಲ್ ಆ್ಯಪ್‌ನಲ್ಲಿ ಸೋರಿಕೆಯಾಗಿದೆ. ಈ ಆ್ಯಪ್ ಮೂಲಕ ರಹಸ್ಯ ಮಾಹಿತಿ ಹಂಚಿಕೊಳ್ಳುವುದನ್ನು ಎಫ್‌ಬಿಐ ಅನುಮೋದಿಸುವುದಿಲ್ಲ. ಇದು ಎಫ್‌ಬಿಐನ ಕೆಲಸವೂ ಅಲ್ಲ' ಎಂದು ಟ್ರಂಪ್ ಹೇಳಿದ್ದಾರೆ.

ಭಾರತಕ್ಕೆ ಭೇಟಿ ಪುಟಿನ್ ಒಪ್ಪಿಗೆ

ಮಾಸ್ಕೊ (ಪಿಟಿಐ): ಭಾರತಕ್ಕೆ ಭೇಟಿ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರ ಆಹ್ವಾನಕ್ಕೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಒಪ್ಪಿಗೆ ನೀಡಿದ್ದಾರೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಗುರುವಾರ ತಿಳಿಸಿದ್ದಾರೆ.



ರಷ್ಯಾ ಅಂತರರಾಷ್ಟ್ರೀಯ ವ್ಯವಹಾರಗಳ ಕೌನ್ಸಿಲ್ (ಆರ್‌ಐಎಸಿ) ಹಮ್ಮಿಕೊಂಡಿದ್ದ 'ರಷ್ಯಾ ಮತ್ತು ಭಾರತ: ಹೊಸ ದ್ವಿಪಕ್ಷೀಯ ಕಾರ್ಯಸೂಚಿ' ಕುರಿತಾದ ಸಮಾವೇಶದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, 'ಪುಟಿನ್ ಅವರ ಭಾರತ ಪ್ರವಾಸಕ್ಕೆ ಅಗತ್ಯವಿರುವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದಿದ್ದಾರೆ.

ಪುಟಿನ್ ಅವರ ಭಾರತ ಪ್ರವಾಸದ ದಿನಾಂಕ ಇನ್ನಷ್ಟೇ ನಿಗದಿಯಾಗಬೇಕಿದೆ.

ಧೋನಿ, ವಿರಾಟ್ ಮೇಲೆ ಕಣ್ಣು • ಚೆಪಾಕ್‌ನಲ್ಲಿ 17 ವರ್ಷಗಳಿಂದ ಗೆಲುವು ದಾಖಲಿಸದ ಬೆಂಗಳೂರು

ಚೆನ್ನೈನಲ್ಲಿ ಮೋಡಿ ಮಾಡುತ್ತಾ ಆರ್‌ಸಿಬಿ?

ವಿರಾಟ್ ಕೊಹ್ಲಿ

ಚೆನ್ನೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚೆಪಾಕ್ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿ 17 ವರ್ಷಗಳು ಕಳೆದುಹೋಗಿವೆ. ಈ ದೀರ್ಘ ಅವಧಿಯಲ್ಲಿ ಚೆನ್ನೈ ತಂಡವನ್ನು ಅದರ ತವರಿನಲ್ಲಿಯೇ ಸೋಲಿಸಲು ಆರ್‌ಸಿಬಿಗೆ ಸಾಧ್ಯವಾಗಿಲ್ಲ.

ವಿರಾಟ್ ಕೊಹ್ಲಿ ನಾಯಕತ್ವದಲ್ಲಿಯೂ ಆಗದ ಈ ಸಾಧನೆಯನ್ನು ಸಾಕಾರ ಮಾಡುವ ಛಲದಲ್ಲಿ ನವನಾಯಕ ರಜತ್ ಪಾಟೀದಾರ್ ಅವರಿದ್ದಾರೆ. ಮಹೇಂದ್ರಸಿಂಗ್ ಧೋನಿಯ ನಂತರ ತಂಡವನ್ನು ಮುನ್ನಡೆಸುತ್ತಿರುವ ಋತುರಾಜ್ ಗಾಯಕವಾಡ ಅವರು ಕೂಡ ತವರಿನಂಗಳದಲ್ಲಿ ಆರ್‌ಸಿಬಿ ಎದುರಿನ ‘ಅಜೇಯ’ ಇತಿಹಾಸ ಮುಂದುವರಿಸುವತ್ತ ಚಿತ್ತ ನೆಟ್ಟಿದ್ದಾರೆ. ಹೀಗಾಗಿ ಉಭಯ ತಂಡಗಳೂ ಶುಕ್ರವಾರ ಮುಖಾಮುಖಿಯಾಗಲಿರುವ ಪಂದ್ಯವು ಕುತೂಹಲ ಕೆರಳಿಸಿದೆ. 2008ರಲ್ಲಿ ಚೆನ್ನೈ ಎದುರು ಇಲ್ಲಿ ಗೆದ್ದಾಗ ಆರ್‌ಸಿಬಿ ತಂಡ ದಲ್ಲಿ ವಿರಾಟ್ ಕೊಹ್ಲಿ ಅವರಿದ್ದರು. ಈಗಲೂ ತಂಡದಲ್ಲಿದ್ದಾರೆ.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಈಚೆಗಷ್ಟೇ ತನ್ನ ಮೊದಲ ಪಂದ್ಯವಾಡಿದ್ದ ಚೆನ್ನೈ ಬಳಗವು ಮುಂಬೈ ಇಂಡಿಯನ್ಸ್ ಎದುರು ಭರ್ಜರಿ ಜಯ ಸಾಧಿಸಿತ್ತು. ಅದರಿಂದಾಗಿ ಅಪಾರ ಆತ್ಮವಿಶ್ವಾಸದಲ್ಲಿದೆ. ಇನ್ನೊಂದೆಡೆ ಬೆಂಗಳೂರು ತಂಡವು ‘ಹಾಲಿ ಚಾಂಪಿಯನ್’ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಅವರ ತವರು ಈಡನ್‌ಗಾರ್ಡನ್‌ನಲ್ಲಿ ಸೋಲಿಸಿ, ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು.

ಕೋಲ್ಕತ್ತ ಎದುರಿನ ಪಂದ್ಯದಲ್ಲಿ ಆರ್‌ಸಿಬಿಯು ಎಲ್ಲ ವಿಭಾಗಗಳಲ್ಲಿಯೂ ಉತ್ತಮ ಸಾಮರ್ಥ್ಯ ಮೆರೆದಿತ್ತು. ಇದೇ ಮೊದಲ ಬಾರಿ ತಂಡಕ್ಕೆ ಸೇರ್ಪಡೆಯಾಗಿರುವ ಎಡಗೈ ಸ್ಪಿನ್ನರ್ ಕೃಣಾಲ್ ಪಾಂಡ್ಯ ಆ ಪಂದ್ಯದಲ್ಲಿ ಮಿಂಚಿದ್ದರು. ಸ್ಪಿನ್ನರ್‌ಗಳಿಗೆ ಹೆಚ್ಚು ನೆರವಾಗುವ ಚೆಪಾಕ್ ಮೈದಾನದ ಪಿಚ್‌ನಲ್ಲಿಯೂ ಅವರು ತಮ್ಮ ಕೈಚಳಕ ಮೆರೆಯಲು ಸಿದ್ಧರಾಗಿದ್ದಾರೆ.

ಆದರೆ ಆತಿಥೇಯ ತಂಡದ ಸ್ಪಿನ್ ವಿಭಾಗವು ಆರ್‌ಸಿಬಿಗಿಂತಲೂ ಉತ್ತಮವಾಗಿದೆ. ಆಫ್‌ಸ್ಪಿನ್ನರ್ ಆರ್. ಅಶ್ವಿನ್, ಎಡಗೈ ಸ್ಪಿನ್-ಆಲ್‌ರೌಂಡರ್ ರವೀಂದ್ರ ಜಡೇಜ ಹಾಗೂ ಅಫ್ಗನ್ ಎಡಗೈ ಸ್ಪಿನ್ನರ್ ನೂರ್ ಅಹಮದ್ ಅವರು ಈಚೆಗೆ ಮುಂಬೈ ತಂಡಕ್ಕೆ ಸೋಲುಣಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಆರ್‌ಸಿಬಿ ತಂಡದಲ್ಲಿ ಕೃಣಾಲ್ ಅವರೊಂದಿಗೆ ಸುಯಶ್ ಶರ್ಮಾ ಭರವಸೆಯ ಸ್ಪಿನ್ನರ್ ಆಗಿದ್ದಾರೆ. ವೇಗದ ವಿಭಾಗದಲ್ಲಿ ಜೋಶ್ ಹ್ಯಾಜಲ್‌ವುಡ್, ರಸಿಕ್ ಸಲಾಂ ಹಾಗೂ ಯಶ್ ದಯಾಳ್ ಅವರ ಮೇಲೆ ಹೆಚ್ಚು ನಿರೀಕ್ಷೆ ಇಡಬೇಕಿದೆ. ಭುವನೇಶ್ವರ್ ಕುಮಾರ್ ಅವರ ಫಿಟ್‌ನೆಸ್ ಇನ್ನೂ ಖಚಿತವಾಗಿಲ್ಲ. ಆದ್ದರಿಂದ ಉಳಿದ ಬೌಲರ್‌ಗಳ ಮೇಲೆ ಒತ್ತಡ ಹೆಚ್ಚಿದೆ. ಚೆನ್ನೈ ಬ್ಯಾಟರ್‌ಗಳಾದ ಋತುರಾಜ್, ರಚಿನ್ ರವೀಂದ್ರ, ರಾಹುಲ್ ತ್ರಿಪಾಠಿ, ಶಿವಂ ದುಬೆ ಅವರನ್ನು ಕಟ್ಟಿಹಾಕುವ ಸವಾಲು ಆರ್‌ಸಿಬಿ ಬೌಲರ್‌ಗಳಿಗೆ ಇದೆ.

ಬೆಂಗಳೂರು ತಂಡದಲ್ಲಿ ವಿರಾಟ್ ಕೊಹ್ಲಿ ಮತ್ತು ಫಿಲ್ ಸಾಲ್ಟ್ ಅವರು ಉತ್ತಮ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ರಜತ್ ಕೂಡ ಬ್ಯಾಟ್ ಬೀಸಿದ್ದರು. ದೇವದತ್ತ ಪಡಿಕ್ಕಲ್ ಮತ್ತು ಲಿಯಾಮ್ ಲಿವಿಂಗ್ ಸ್ಟೋನ್ ಅವರು ಮಧ್ಯಮ ಕ್ರಮಾಂಕದಲ್ಲಿ ಬಲ ತುಂಬಿದರೆ ಚೆನ್ನೈ ತಂಡಕ್ಕೆ ಸವಾಲೊಡ್ಡಬಹುದು.

ಹೋದ ವರ್ಷದ ಟೂರ್ನಿಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿಯು ಚೆನ್ನೈ ಎದುರು ಗೆದ್ದು ನಾಕೌಟ್ ಪ್ರವೇಶಿಸಿತ್ತು. ಆ ಸೋಲಿನ ಮುಯ್ಯಿ ತೀರಿಸಿಕೊಳ್ಳಲು ಋತುರಾಜ್ ಬಳಗ ಸಿದ್ಧವಾಗಿದೆ.

ಮಹೇಂದ್ರಸಿಂಗ್ ಧೋನಿ —ಎಕ್ಸ್ ಚಿತ್ರ

ಋತುರಾಜ್ ಗಾಯಕವಾಡ

ರಜತ್ ಪಾಟೀದಾರ್

ಬಲಾಬಲ

ಪಂದ್ಯ	33
ಬೆಂಗಳೂರು ಜಯ	11
ಚೆನ್ನೈ ಗೆಲುವು	21
ಫಲಿತಾಂಶವಿಲ್ಲ	01

ಹೋದ ವರ್ಷ ಮುಖಾಮುಖಿ

- ಚೆನ್ನೈ ಸೂಪರ್ ಕಿಂಗ್ಸ್ 6 ವಿಕೆಟ್‌ಗಳ ಜಯ (ಚೆಪಾಕ್, ಚೆನ್ನೈ)
- ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 27 ರನ್ ಜಯ (ಬೆಂಗಳೂರು)

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಶಾರ್ದೂಲ್ ಠಾಕೂರ್ ಪರಿಣಾಮಕಾರಿ ಬೌಲಿಂಗ್ • ಪೂರನ್, ಮಾರ್ಷ್ ಬ್ಯಾಟಿಂಗ್ ಪ್ರತಾಪ

ಸನ್‌ರೈಸರ್ಸ್‌ಗೆ ಸೋಲುಣಿಸಿದ ಲಖನೌ

ಲಖನೌ ಸೂಪರ್ ಜೈಂಟ್ಸ್ ತಂಡದ ಮಧ್ಯಮವೇಗಿ ಶಾರ್ದೂಲ್ ಠಾಕೂರ್ —ಎಎಫ್‌ಪಿ ಚಿತ್ರಗಳು

ಹೈದರಾಬಾದ್ (ಪಿಟಿಐ): ಶಾರ್ದೂಲ್ ಠಾಕೂರ್ (34ಕ್ಕೆ4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಳಿಕ ನಿಕೋಲಸ್ ಪೂರನ್ (70; 26ಎ, 4x6, 6x6) ಅವರ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ಗುರುವಾರ ಐಪಿಎಲ್‌ನಲ್ಲಿ ಮೊದಲ ಜಯ ದಾಖಲಿಸಿತು.

ಉಪ್ಪಳದ ರಾಜೀವ್‌ಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಿಷಭ್ ಪಂತ್ ನಾಯಕತ್ವದ ಲಖನೌ ತಂಡವು ಐದು ವಿಕೆಟ್‌ಗಳಿಂದ ಸನ್‌ರೈಸರ್ಸ್ ತಂಡವನ್ನು ಅದರ ತವರಿನಲ್ಲೇ ಸೋಲಿಸಿತು. ತನ್ನ ಮೊದಲ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಒಂದು ವಿಕೆಟ್‌ನಿಂದ ಪರಾಭವಗೊಂಡಿದ್ದ ಲಖನೌ ತಂಡ ಗೆಲುವಿನ ಹಳಿಗೆ ಮರಳಿತು.

ಟಾಸ್ ಗೆದ್ದ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬೌಲರ್‌ಗಳನ್ನು ದಂಡಿಸಿ, ಬೃಹತ್ ಮೊತ್ತ ಗಳಿಸುವುದನ್ನೇ ‘ಹವ್ಯಾಸ’ ಮಾಡಿಕೊಂಡಿರುವ ಸನ್‌ರೈಸರ್ಸ್ ಬ್ಯಾಟರ್‌ಗಳನ್ನು ಲಖನೌ ತಂಡದ ಮಧ್ಯಮವೇಗಿ ಶಾರ್ದೂಲ್ ಕಟ್ಟಿಹಾಕಿದರು. ಆದರೂ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 190 ರನ್‌ಗಳ ಉತ್ತಮ ಮೊತ್ತ ಕಲೆ ಹಾಕಿತು.

ಸವಾಲಿನ ಗುರಿಯನ್ನು ಬೆನ್ನತ್ತಿದ ಲಖನೌ ತಂಡವು ಆರಂಭದಲ್ಲೇ ಏಡನ್ ಮರ್ಕರಂ (1 ರನ್) ಅವರನ್ನು ಕಳೆದುಕೊಂಡಿತು. ಆರಂಭಿಕ ಆಟಗಾರ ಮಿಚೆಲ್ ಮಾರ್ಷ್ (52;31ಎ, 4x7, 6x2) ಮತ್ತು ಪೂರನ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 116 ರನ್ (43ಎ) ಸೇರಿಸಿ ತಂಡದ ಗೆಲುವಿಗೆ ಉತ್ತಮ ಅಡಿಪಾಯ ಹಾಕಿದರು.

ನಂತರ 44 ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್‌ಗಳು ಉರುಳಿದರೂ ಡೇವಿಡ್ ಮಿಲ್ಲರ್ (ಔಟಾಗದೇ 13; 7ಎ) ಮತ್ತು ಅಬ್ದುಲ್ ಸಮದ್ (ಔಟಾಗದೇ 22; 8ಎ) ಅವರು ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 29 ರನ್ ಸೇರಿಸಿ ಗೆಲುವಿನ ದಡ ಸೇರಿಸಿದರು. ‘ದುಬಾರಿ’ ಆಟಗಾರ ಪಂತ್ (15) ಈ ಪಂದ್ಯದಲ್ಲೂ ನಿರಾಸೆ ಮೂಡಿಸಿದರು. ಇನ್ನೂ 23 ಎಸೆತ ಬಾಕಿ ಇರುವಂತೆ 5 ವಿಕೆಟ್‌ಗೆ 193 ರನ್ ಗಳಿಸಿ ಲಖನೌ ತಂಡ ಜಯ ಸಾಧಿಸಿತು.

ನಿಕೋಲಸ್ ಪೂರನ್

ಹೆಡ್ ಬೀಸಾಟ: ಇದಕ್ಕೂ ಮೊದಲು ಯಥಾಪ್ರಕಾರ ಹೈದರಾಬಾದ್‌ನ ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್ (47;28ಎ, 4X5, 6X3) ಬೀಸಾಟ ನಡೆಸಿದರು. ಇನ್ನೊಂದು ಬದಿಯಲ್ಲಿ ಒಂದು ಬೌಂಡರಿ ಹೊಡೆದು ಆಟ ಆರಂಭಿಸಿದ ಅಭಿಷೇಕ್ ಶರ್ಮಾ ಕೂಡ ಹೆಡ್ ಜೊತೆ ಮಿಂಚುವ ಭರವಸೆ ಮೂಡಿಸಿದ್ದರು. ಅದರೆ ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಠಾಕೂರ್ ಎಸೆತವನ್ನು ಆಡುವ ಭರದಲ್ಲಿ ಅಭಿಷೇಕ್ ಅವರು ಪೂರನ್‌ಗೆ ಕ್ಯಾಚ್ ಆದರು. ನಂತರದ ಎಸೆತದಲ್ಲಿ ಇಶಾನ್ ಕಿಶನ್ ಅವರ ಕ್ಯಾಚ್ ಪಡೆಯುವಲ್ಲಿ ವಿಕೆಟ್‌ಕೀಪರ್ ಪಂತ್ ಯಶಸ್ವಿಯಾದರು. ಮೊದಲ ಪಂದ್ಯದಲ್ಲಿ ಇಶಾನ್ ಶತಕ ಗಳಿಸಿದ್ದರು.

ಸತತ ಎರಡು ವಿಕೆಟ್ ಪತನದಿಂದ ಅಂಜದ ಹೆಡ್ ಮತ್ತು ಅವರೊಂದಿಗೆ ಸೇರಿಕೊಂಡ ನಿತೀಶ್ ರೆಡ್ಡಿ (32; 28ಎ, 4X2) ರನ್ ಗಳಿಕೆಗೆ ಒತ್ತು ನೀಡಿದರು. 3ನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು. ಮಧ್ಯಮವೇಗಿ ಪ್ರಿನ್ಸ್ ಯಾದವ್ ಎಸೆತವನ್ನು ಬೀಸಿಹೊಡೆಯುವ ಯತ್ನದಲ್ಲಿ ಹೆಡ್ ಕ್ಲೀನ್‌ಬೌಲ್ಡ್ ಆದರು. ಹೆನ್ರಿಚ್ ಕ್ಲಾಸ್ (26; 17ಎ, 4X2, 6X1), ಹೊಸ ಪ್ರತಿಭೆ ಅನಿಕೇತ್ ವರ್ಮಾ (36; 13ಎಸೆತ) ತಂಡದ ಮೊತ್ತ ಹೆಚ್ಚಿಸುವ ಪ್ರಯತ್ನ ಮಾಡಿದರು. ಅದರಲ್ಲೂ ಅನಿಕೇತ್ 5 ಸಿಕ್ಸರ್‌ಗಳನ್ನು ಸಿಡಿಸಿ ಗಮನ ಸೆಳೆದರು.

ತನ್ನ ಮೊದಲ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ 286 ರನ್ ಗಳಿಸಿದ್ದ ಸನ್‌ರೈಸರ್ಸ್ ತಂಡವು ಮತ್ತೆ ದ್ವಿಶತಕದ ಗಡಿ ದಾಟುವ ಭರವಸೆ ಮೂಡಿಸಿತ್ತು. ಆದರೆ ಕೊನೆಯ ಆರು ಓವರ್‌ಗಳಲ್ಲಿ 5 ವಿಕೆಟ್‌ಗಳು ಪತನಗೊಂಡವು. ಈ ನಡುವೆ ನಾಯಕ ಪ್ಯಾಟ್ ಕಮಿನ್ಸ್ ಕೇವಲ 4 ಎಸೆತಗಳಲ್ಲಿ 18 ರನ್ ಗಳಿಸಿದರು. 450ರ ಸ್ಟ್ರೈಕ್ ರೇಟ್‌ನಲ್ಲಿ ಅವರು ಈ ರನ್‌ಗಳನ್ನು ಗಳಿಸಿದರು. ಅದರಲ್ಲಿ 3 ಸಿಕ್ಸರ್ ಗಳಿದ್ದವು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 190 (ಟ್ರಾವಿಸ್ ಹೆಡ್ 47, ನಿತೀಶ್ ರೆಡ್ಡಿ 32, ಹೆನ್ರಿಚ್ ಕ್ಲಾಸೆನ್ 26, ಅನಿಕೇತ್ ವರ್ಮಾ 36, ಪ್ಯಾಟ್ ಕಮಿನ್ಸ್ 18, ಹರ್ಷಲ್ ಪಟೇಲ್ ಔಟಾಗದೇ 12, ಶಾರ್ದೂಲ್ ಠಾಕೂರ್ 34ಕ್ಕೆ4). **ಲಖನೌ ಸೂಪರ್ ಜೈಂಟ್ಸ್:** 16.1 ಓವರ್‌ಗಳಲ್ಲಿ 5 ವಿಕೆಟ್‌ಗೆ 193 (ಮಿಚೆಲ್ ಮಾರ್ಷ್ 52, ನಿಕೋಲಸ್ ಪೂರನ್ 70, ಅಬ್ದುಲ್ ಸಮದ್ ಔಟಾಗದೇ 22; ಪ್ಯಾಟ್ ಕಮಿನ್ಸ್ 29ಕ್ಕೆ 2, ಹರ್ಷಲ್ ಪಟೇಲ್ 28ಕ್ಕೆ 1).
ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ 5 ವಿಕೆಟ್‌ಗಳ ಗೆಲುವು. **ಪಂದ್ಯದ ಆಟಗಾರ:** ಶಾರ್ದೂಲ್ ಠಾಕೂರ್

ಮೊಯಿನ್ ಅಲಿ ಆಟಕ್ಕೆ ಅಜಿಂಕ್ಯ ಶ್ಲಾಘನೆ

ಗುವಾಹಟಿ (ಪಿಟಿಐ): ‘ಹಾಲಿ ಚಾಂಪಿಯನ್’ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಈ ಬಾರಿಯ ಐಪಿಎಲ್‌ನಲ್ಲಿ ಮೊದಲ ಜಯ ಸಾಧಿಸಿದೆ. ಟೂರ್ನಿಯ ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಸೋತಿದ್ದ ತಂಡವು ಎರಡನೇಯ ಪಂದ್ಯದಲ್ಲಿ ಗೆಲುವಿನ ಹಾದಿ ಕಂಡುಕೊಂಡಿತು. ರಾಜಸ್ಥಾನ ರಾಯಲ್ಸ್ ತಂಡವನ್ನು ಮಣಿಸಿತು.

ಈ ಪಂದ್ಯದಲ್ಲಿ ಕಣಕ್ಕಿಳಿದ ಹನ್ನೊಂದರ ಬಳಗದಲ್ಲಿ ಸ್ಪಿನ್, ಆಲ್‌ರೌಂಡರ್ ಮೊಯಿನ್ ಅಲಿ ಅವರನ್ನು ಕೊನೆಯ ಕ್ಷಣದಲ್ಲಿ ಆಯ್ಕೆ ಮಾಡಲಾಗಿತ್ತು. ಅದು ತಂಡಕ್ಕೆ ಫಲ ನೀಡಿತು. ಇಂಗ್ಲೆಂಡ್ ಆಟಗಾರ ಅಲಿ ಅವರು ಹಾಕಿದ ಒಂದು ಸ್ಪೆಲ್ ರಾಜಸ್ಥಾನ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಲು ಕಾರಣವಾಯಿತು. ಮೊಯಿನ್ ಮತ್ತು ವರುಣ್ ಚಕ್ರವರ್ತಿ ಸ್ಪಿನ್ ಮೋಡಿಯ ಮುಂದೆ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 9ಕ್ಕೆ151 ರನ್ ಗಳಿಸಿತ್ತು. ಈ ಗುರಿಯನ್ನು ಕೆಕೆಆರ್ ಬ್ಯಾಟರ್‌ಗಳು 17.3 ಓವರ್‌ಗಳಲ್ಲಿಯೇ ಮುಟ್ಟಿದರು. ಆರಂಭಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಅಜೇಯ 97 ರನ್ ಗಳಿಸಿದರು. ತಂಡವು 8 ವಿಕೆಟ್‌ಗಳಿಂದ ಜಯಿಸಿತು.

ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ತಂಡದ ನಾಯಕ ಅಜಿಂಕ್ಯ ರಹಾನೆ, ‘ಮೊಯಿನ್ ಅವರು ತಮಗೆ ಲಭಿಸಿದ ಅವಕಾಶದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದರು. ಅವರು ತುಂಬಾ ನುರಿತ ಆಟಗಾರ. ಅವರ ಆಟದಿಂದ ನಮಗೆಲ್ಲ ಸಂತಸವಾಗಿದೆ’ ಎಂದರು.

‘ಸುನಿಲ್ ನಾರಾಯಣ್ ಅವರ ಆರೋಗ್ಯ ಸರಿಯಿಲ್ಲದಿರುವುದು ಇವತ್ತು (ಮಂಗಳವಾರ) ಬೆಳಿಗ್ಗೆಯಷ್ಟೇ ತಿಳಿಯಿತು. ಆಗ ಅಲಿ ಸ್ಥಾನ ಪಡೆದರು. ವರುಣ್ ಮತ್ತು ಸುನಿಲ್ ಬಹಳ ಪರಿಣಾಮಕಾರಿ ಸ್ಪಿನ್ ಜೋಡಿಯಾಗಿದ್ದಾರೆ. ಸುನಿಲ್ ಅವರ ಕೊರತೆ ಕಾಡದಂತೆ ಮೊಯಿನ್ ಅಲಿ ಆಡಿದರು’ ಎಂದು ಹೇಳಿದರು.

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಆರ್‌ಸಿಬಿ	1	1	0	2	2.137
2	ಎಲ್‌ಎಸ್‌ಜಿ	2	1	1	2	0.963
3	ಪಿಬಿಕೆಎಸ್	1	1	0	2	0.550
4	ಸಿಎಸ್‌ಕೆ	1	1	0	2	0.493
5	ಡಿಸಿ	1	1	0	2	0.371
6	ಕೆಕೆಆರ್	2	1	1	2	-0.308
7	ಎಸ್‌ಆರ್‌ಎಚ್	2	1	1	2	-0.128
8	ಎಂಐ	1	0	1	0	-0.493
9	ಜಿಟಿ	1	0	1	0	-0.550
10	ಆರ್‌ಆರ್	2	0	2	0	-1.882

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 145 ರನ್

ಪರ್ಪಲ್ ಕ್ಯಾಪ್
ಶಾರ್ದೂಲ್ ಠಾಕೂರ್ (ಎಲ್‌ಎಸ್‌ಜಿ) 6 ವಿಕೆಟ್



ಮೊಯಿನ್ ಅಲಿ —ಎಕ್ಸ್ ಚಿತ್ರ

ಜಯನಗರದಲ್ಲಿ ‘ಉದಯಂ’ ಮಳಿಗೆ ಆರಂಭ

ಬೆಂಗಳೂರು: ಭಾರತದ ಗೌರವಾನ್ವಿತ, ವಿಶ್ವಾಸಾರ್ಹ ಮತ್ತು ಸಾಂಪ್ರದಾಯಿಕ ಪುರುಷರ ಉಡುಗೆಗಳ ವಿಶೇಷ ‘ಉದಯಂ’ ಕಾಟನ್ ಬ್ರ್ಯಾಂಡ್ ಶೋರೂಮ್ ಬೆಂಗಳೂರಿನ ಜಯನಗರದಲ್ಲಿ ಗುರುವಾರ ಆರಂಭಗೊಂಡಿದೆ.

ದಕ್ಷಿಣ ಭಾರತದಲ್ಲಿ ತನ್ನ ಚಿಲ್ಲರೆ ವ್ಯಾಪಾರದ ಹೆಜ್ಜೆ ಗುರುತನ್ನು ಬಲಪಡಿಸುವ ಉದ್ದೇಶದಿಂದ ಅದ್ಧೂರಿ ಮಳಿಗೆ ತೆರೆದಿರುವ ಸಂಸ್ಥೆ, ಈ ಸುಸಜ್ಜಿತ ನೂತನ ಶೋರೂಮ್‌ನಲ್ಲಿ ಟ್ರೆಂಡಿ ಸಂಪ್ರದಾಯಗಳಿಗೆ ಚಾಲನೆ ನೀಡುವ ಮೂಲಕ ಉದಯಂ ಕಾಟನ್ ಬ್ರ್ಯಾಂಡ್ ಮಹತ್ವದ ಮೈಲಿಗಲ್ಲನ್ನು ಸ್ಥಾಪಿಸಿದಂತಾಗಿದೆ.

ಜಯನಗರ ಕ್ಷೇತ್ರದ ಶಾಸಕ ಸಿ.ಕೆ. ರಾಮಮೂರ್ತಿ ಅವರು ಶೋರೂಮ್ ಉದ್ಘಾಟಿಸಿದರೆ, ಪ್ರಸಿದ್ಧ ಹಾಸ್ಯ ನಟ ಗಿಲ್ಲಿ ನಟ ಅವರು ವಿಶೇಷ ಅತಿಥಿ ಭಾಗವಹಿಸಿದ್ದರು. ಗೌರವಾನ್ವಿತ ಅತಿಥಿಗಳು ಮತ್ತು ಪ್ರತಿನಿಧಿಗಳನ್ನು ಉದಯಂ ಕಾಟನ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ಅರುಣ್ ಈಶ್ವರ್ ಅವರು ಸ್ವಾಗತಿಸಿದರು.

ನಂತರ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ಅರುಣ್ ಈಶ್ವರ್ ಅವರು ಉದಯಂ ಬ್ರ್ಯಾಂಡ್‌ನ ಮೈಲಿಗಲ್ಲು ಸಾಧನೆಯ ಕುರಿತು ಮಾತನಾಡಿದರು. "ಜಯನಗರದ ರೋಮಾಂಚಕ ಪ್ರದೇಶದಲ್ಲಿ ನಮ್ಮ ವಿಶೇಷ ಬ್ರ್ಯಾಂಡ್ ಶೋರೂಮ್ ಅನ್ನು ಪ್ರಾರಂಭಿಸಿರುವುದು ನಮಗೆ ಸಂತಸ ತಂದಿದೆ. ಗ್ರಾಹಕರಿಗೆ ಪ್ರೀಮಿಯಂ ಶಾಪಿಂಗ್ ಅನುಭವವನ್ನು ಕಲ್ಪಿಸುವ, ಉತ್ಪನ್ನಗಳ ವಿಸ್ತಾರ ಮತ್ತು ಆಳವನ್ನು ಪ್ರದರ್ಶಿಸುವ ಬದ್ಧತೆಗೆ ಈ ಶೋರೂಮ್ ಸಾಕ್ಷಿಯಾಗಿದೆ. ಉದಯಂ ಕಾಟನ್ ಕೇವಲ ಉತ್ಪನ್ನಗಳನ್ನು ಮಾತ್ರವಲ್ಲದೆ, ನಾಳೆಗಾಗಿ ರೂಪಿಸಲಾದ ಹಾಗೂ ಸಂಪ್ರದಾಯದಲ್ಲಿ ಬೇರೂರಿರುವ ಬ್ರ್ಯಾಂಡ್‌ನ ಅನುಭವವನ್ನು ನೀಡುತ್ತದೆ’.

ಭಾರತೀಯ ಸಂಪ್ರದಾಯವನ್ನು ನಾವೀನ್ಯತೆಯೊಂದಿಗೆ ಬೆಸೆಯುವ ಸೊಬಗು, ಗುಣಮಟ್ಟ ಮತ್ತು ಸಾಂಸ್ಕೃತಿಕ ದೃಢೀಕರಣವನ್ನು ಪ್ರತಿನಿಧಿಸುವ ಬ್ರ್ಯಾಂಡ್ ನಮ್ಮದಾಗಿದೆ. ಕರಕುಶಲತೆ ಮತ್ತು ಆಧುನಿಕ ಸೌಕರ್ಯಕ್ಕೆ ನಾವು ಬದ್ಧವಾಗಿದ್ದು, ಆಧುನಿಕ ಪುರುಷರಿಗೆ ಟ್ರೆಂಡಿ ಸಂಪ್ರದಾಯ ನೀಡುವ ಸಂಕೇತವಾಗಿ ನಮ್ಮ ಉತ್ಪನ್ನಗಳು ಗುರುತಿಸಿಕೊಂಡಿವೆ. ಕ್ಲಾಸಿಕ್ ಧೋತಿಗಳಿಂದ ಹಿಡಿದು ಸ್ಟೈಲಿಶ್ ಕುರ್ತಾಗಳವರೆಗಿನ ಉತ್ಪನ್ನಗಳು ನಮ್ಮಲ್ಲಿವೆ ಎಂದರು.

ಜಯನಗರ ಶೋರೂಮ್ ವಿಶೇಷ: ಜಯನಗರದ ನೂತನ ಮಳಿಗೆ ಉದಯಂ ಸಿಗ್ನೇಚರ್ ಉತ್ಪನ್ನಗಳ ವ್ಯಾಪಕ ಸಂಗ್ರಹವನ್ನು ಹೊಂದಿದ್ದು, ವಿವಿಧ ಟೆಕ್ಚರ್‌ಗಳ ಮತ್ತು ನೇಯ್ಗೆಗಳ ಪ್ರೀಮಿಯಂ- ಗುಣಮಟ್ಟದ ಧೋತಿಗಳನ್ನು ಇಲ್ಲಿ ಕಾಣಬಹುದು. ದೈನಂದಿನ ಉಡುಗೆಗಳ ಜೊತೆ ಹಬ್ಬಗಳು, ಮದುವೆ ಮತ್ತು ವಿಶೇಷ ದಿನಗಳಲ್ಲಿ ಧರಿಸುವ ಉತ್ಪನ್ನಗಳ ದೊಡ್ಡ ಸಂಗ್ರಹ ಕಾಣಬಹುದು. ಜತೆಯಲ್ಲಿ ವೆಲ್ಕ್ರೋ ಪಾಕೆಟ್ ಧೋತಿಗಳನ್ನು ಸಹ ಪ್ರಸ್ತುತಪಡಿಸುತ್ತಿದ್ದೇವೆ. ನಮ್ಮ ದೇಶೀಯ ಜೀವನಶೈಲಿಗೆ ಪೂರಕವಾದ ಬಿದಿರಿನ ಟವೆಲ್‌ಗಳು, ಮೃದು, ಸುಸ್ಥಿರ ಮತ್ತು ನೀರನ್ನು ಹೆಚ್ಚು ಹೀರಿಕೊಳ್ಳುವ ಹಾಗೂ ಪರಿಸರ ಪ್ರಜ್ಞೆಯ ಟವೆಲ್‌ಗಳು ಸಹ ಲಭ್ಯ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಜಯನಗರ ಉದಯಂ ಕಾಟನ್ ಶೋರೂಮ್ ಅನ್ನು ಶಾಸಕ ಸಿ.ಕೆ. ರಾಮಮೂರ್ತಿ ಉದ್ಘಾಟಿಸಿದರು. ಹಾಸ್ಯ ನಟ ಗಿಲ್ಲಿ ನಟ ಹಾಗೂ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಬಿ.ಆರ್. ಅರುಣ್ ಈಶ್ವರ್ ಇತರರು ಉಪಸ್ಥಿತರಿದ್ದರು.

ಏಷ್ಯನ್ ಕುಸ್ತಿ: ಮಾನ್ಸಿ, ಮುಸ್ಕಾನ್‌ಗೆ ಕಂಚು

ಬೆಳ್ಳಿ ಪದಕ ಗೆದ್ದ ರೀತಿಕಾ ಹೂಡ

ಅಮ್ಮಾನ್ (ಪಿಟಿಐ): ಭಾರತದ ಯುವ ಒಲಿಂಪಿಯನ್ ರೀತಿಕಾ ಹೂಡ, ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ ಮಹಿಳೆಯರ 76 ಕೆ.ಜಿ. ವಿಭಾಗದಲ್ಲಿ ಗುರುವಾರ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ನಿರೀಕ್ಷೆಗೂ ಮೀರಿ ಉತ್ತಮ ಪ್ರದರ್ಶನ ನೀಡಿದ್ದ 22 ವರ್ಷ ವಯಸ್ಸಿನ ರೀತಿಕಾ ಒಂದೂ ಪಾಯಿಂಟ್ ಬಿಟ್ಟುಕೊಡದೇ ಫೈನಲ್‌ಗೆ ಲಗ್ಗೆಯಿಟ್ಟಿದ್ದರು. ಆದರೆ, ಪ್ರಶಸ್ತಿ ಸುತ್ತಿನಲ್ಲಿ ಕಿರ್ಗಿಸ್ತಾನ್‌ನ ಐಪೆರಿ ಮೆಡೆಟ್ ಕೈಜಿ ವಿರುದ್ಧ ಪರಾಭವಗೊಂಡರು. ಪ್ಯಾರಿಸ್ ಒಲಿಂಪಿಕ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಇದೇ ಎದುರಾಳಿ ವಿರುದ್ಧ ಭಾರತದ ಸ್ಪರ್ಧಿ ಸೋತಿದ್ದರು.

ಒಂದು ಹಂತದಲ್ಲಿ 4–2 ಮುನ್ನಡೆ ಪಡೆದು ಗೆಲುವಿನ ಹಾದಿಯಲ್ಲಿದ್ದ ರೀತಿಕಾ ಅಂತಿಮ ಹಂತದಲ್ಲಿ ಮುಗ್ಗರಿಸಿದರು. ಕೊನೆಯ 10 ಸೆಕೆಂಡ್‌ಗಳ ಅಂತರದಲ್ಲಿ ಐಪೆರಿ ನಾಲ್ಕು ಅಂಕಗಳನ್ನು ಗೆದ್ದು ಚಿನ್ನದ ಪದಕಕ್ಕೆ ಮುತ್ತಿಕ್ಕಿದರು.

23 ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆದ ಭಾರತದ ಮೊದಲ ಮಹಿಳಾ ರೆಸ್ಲರ್ ಎನಿಸಿರುವ ರೀತಿಕಾ ಫೈನಲ್ ಪ್ರವೇಶಿಸುವ ಹಾದಿಯಲ್ಲಿ ಜಪಾನ್‌ನ ನೊಡೊಕ್ ಯಮಾಮೊಟೊ ಮತ್ತು ದಕ್ಷಿಣ ಕೊರಿಯಾದ ಸಿಯೋಯಿಯಾನ್ ಜಿಯೊಂಗ್ ಅವರನ್ನು ಸೋಲಿಸಿದ್ದರು.

ರೀತಿಕಾ ಹೂಡ —ಎಕ್ಸ್ ಚಿತ್ರ

ಜಿಯೊಂಗ್ ವಿರುದ್ಧ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಗೆದ್ದರು.

ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತದ ಅತಿ ಕಿರಿಯ ಕುಸ್ತಿಪಟು ಆಗಿರುವ ರೀತಿಕಾ ಎರಡನೇ ಪಂದ್ಯದಲ್ಲಿ 6–0 ಅಂತರದಿಂದ ಯಮಾಮೋಟೊ ವಿರುದ್ಧ ಜಯಶಾಲಿಯಾದರು. ಜಪಾನ್‌ನ ಕುಸ್ತಿಪಟು 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ವಿಜೇತೆಯಾಗಿದ್ದಾರೆ. 2023ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ರೀತಿಕಾ ಅವರು ಕಂಚಿನ ಪದಕ ಗೆದ್ದಿದ್ದರು.

ಮಾನ್ಸಿ ಲಾಥರ್, ಮುಸ್ಕಾನ್‌ಗೆ ಕಂಚು: 68 ಕೆ.ಜಿ ವಿಭಾಗದಲ್ಲಿ ಮಾನ್ಸಿ ಲಾಥರ್ ಕಂಚಿನ ಪದಕ ಗೆದ್ದರು. ಕಂಚಿನ ಪದಕದ ಸೆಣಸಾಟದಲ್ಲಿ ಕಜಕಸ್ತಾನದ ಇರಿನಾ ಕಝ್ಯುಲಿನಾ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಸೋಲಿಸಿದರು.

ಇದಕ್ಕೂ ಮೊದಲು ಮಾನ್ಸಿ, ಕೊರಿಯಾದ ಶೆಂಗ್ ಫೆಂಗ್ ಕೈ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಮಣಿಸಿದ್ದರು. ಜಪಾನ್‌ನ ಅಮಿ ಇಶಿ ಅವರಿಂದ ವಾಕ್ ಓವರ್ ಪಡೆದಿದ್ದರು. ಸೆಮಿಫೈನಲ್‌ನಲ್ಲಿ 1–10 ರಿಂದ ಚೀನಾದ ಝುಲು ಲಿ ಅವರಿಗೆ ಸೋತು, ಕಂಚಿನ ಪದಕಕ್ಕೆ ಸ್ಪರ್ಧಿಸಿದರು.

ಮುಸ್ಕಾನ್ (59 ಕೆ.ಜಿ ವಿಭಾಗ) 4–0ಯಿಂದ ಮಂಗೋಲಿಯಾದ ಅಲ್ಟ್‌ಜಿನ್ ತೊಗ್ಟೊಕ್ ಅವರನ್ನು ಮಣಿಸಿ ಕಂಚು ಗೆದ್ದರು. ಅವರು ಮೊದಲ ಪಂದ್ಯದಲ್ಲಿ ಫಿಲಿಪ್ಪೀನ್ಸ್‌ನ ಅರಿಯನ್ ಜಿ. ಕಾರ್ಪಿಯೊ ವಿರುದ್ಧ ಗೆದ್ದರು. ಆದರೆ, ಎಂಟರ ಘಟ್ಟದಲ್ಲಿ ಜಪಾನ್‌ನ ಸಕುರಾ ಒನಿಶಿ ಅವರಿಗೆ ಸೋತರು.

55 ಕೆ.ಜಿ. ವಿಭಾಗದಲ್ಲಿ ನಿಶು, ಕ್ವಾಲಿಫಿಕೇಷನ್ ಸೆಣಸಾಟದಲ್ಲಿ ಚೀನಾದ ಯುಕ್ಸುವಾನ್ ಲಿ ಅವರಿಗೆ ಮಣಿದರು. ಆದರೆ ಲಿ ಫೈನಲ್‌ವರೆಗೆ ತಲುಪಿರುವ ಕಾರಣ ನಿಶು ಅವರಿಗೆ ರೆಪೆಷಾಜ್ ಅವಕಾಶ ದೊರೆಯಿತು. ಇದರಲ್ಲಿ ಅವರು ವಿಯೆಟ್ನಾಮಿನ ಮಿ ಟ್ರಾಂಗ್ ಎನ್ಗುಯೆನ್ ಅವರನ್ನು ಸೋಲಿಸಿದ್ದು, ಕಂಚಿನ ಪದಕದ ಸುತ್ತಿಗೆ ತಲುಪಿದ್ದು, ಅಲ್ಲಿ ಮಂಗೋಲಿಯಾದ ಒಟ್ಗೊನ್‌ಟುಯಾ ಬಯಾನ್‌ಮುಂಕ್ ಎದುರು ಸೆಣಸಲಿದ್ದಾರೆ.

ಕೆಪಿಐಜಿ: ಹರಿಯಾಣಕ್ಕೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ಹರಿಯಾಣದ ಕ್ರೀಡಾಪಟುಗಳು, ಗುರುವಾರ ಮುಕ್ತಾಯಗೊಂಡ ಎರಡನೇ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್‌ನಲ್ಲಿ ಒಟ್ಟು 34 ಚಿನ್ನದ ಪದಕಗಳನ್ನು ಗೆದ್ದುಕೊಂಡು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದರು. ಈ ತಂಡ 36 ಬೆಳ್ಳಿ, 29 ಕಂಚಿನ ಪದಕಗಳನ್ನೂ ಬಾಚಿಕೊಂಡಿತು.

ತಮಿಳುನಾಡು (28 ಚಿನ್ನ), ಉತ್ತರ ಪ್ರದೇಶ (23 ಚಿನ್ನ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದವು. ಏಳು ದಿನಗಳ ಈ ಕೂಟದಲ್ಲಿ ಮೂರು ತಾಣಗಳಲ್ಲಿ ಪ್ಯಾರಾ ಅಥ್ಲೆಟಿಕ್ಸ್, ಅರ್ಚರಿ, ಬ್ಯಾಡ್ಮಿಂಟನ್ ಸೇರಿ ಒಟ್ಟು ಆರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. 1,300 ಮಂದಿ ಪಾಲ್ಗೊಂಡಿದ್ದರು.

ಒಟ್ಟು 18 ರಾಷ್ಟ್ರೀಯ ದಾಖಲೆಗಳಾದವು. ಅಥ್ಲೆಟಿಕ್ಸ್‌ನಲ್ಲಿ ದಾಖಲೆ ಸ್ಥಾಪಿಸಿದವರಲ್ಲಿ ರಾಜ್ಯದ ಶರತ್ ಮಾಕನಹಳ್ಳಿ ಶಂಕರಪ್ಪ ಒಳಗೊಂಡಿದ್ದಾರೆ.

ಥ್ರೋಬಾಲ್: ಕರ್ನಾಟಕ ತಂಡಕ್ಕೆ ಯಶವಂತ್, ಪೂಜಾ ನಾಯಕತ್ವ

ಬೆಂಗಳೂರು: ಯಶವಂತ್ ಮತ್ತು ಪೂಜಾ ಅವರು ಇದೇ 28ರಿಂದ 30wರವರೆಗೆ ಪುದುಚೇರಿಯಲ್ಲಿ ನಡೆಯಲಿರುವ 32ನೇ ಜೂನಿಯರ್ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್ ಷಿಪ್‌ನಲ್ಲಿ ಕ್ರಮವಾಗಿ ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡವನ್ನು ಮುನ್ನಡೆಸಲಿದ್ದಾರೆ.

ಕರ್ನಾಟಕ ಅಮೆಚೂರ್ ಥ್ರೋಬಾಲ್ ಸಂಸ್ಥೆಯು ಕರ್ನಾಟಕದ ತಂಡಗಳನ್ನು ಪ್ರಕಟಿಸಿದೆ.

ಬಾಲಕರ ತಂಡ: ಯಶವಂತ್ (ನಾಯಕ), ಭರತ್ ಜೆ. (ಉಪನಾಯಕ), ಕಾರ್ತಿಕ್ ಎಸ್, ತರುಣ್ ಎ, ಹರ್ಷವರ್ಧನ್ ಕೆ, ಹರ್ಷವರ್ಧನ್ ಆರ್, ಜೆ.ಜಯಂತ್ ರಾಜ್, ನಿತೇಶ್ ವಿ.ಎಸ್, ಸಂತೋಷ್ ಎಚ್, ಅನಿಲ್ ಕುಮಾರ್ ಬಿ, ಅಖಿಲ್ ಚಿಂತನ್ ಎಲ್, ಶ್ರೇಯಸ್ ಎಸ್, ದೀಕ್ಷಿತ್. ನಿತಿನ್ ಕುಮಾರ್ ಆರ್ (ಕೋಚ್), ನಿತೇಶ್ ಟಿ.ಎಸ್. (ಮ್ಯಾನೇಜರ್).

ಬಾಲಕಿಯರ ತಂಡ: ಪೂಜಾ (ನಾಯಕಿ), ಭಾವಿ ಎಸ್. ಜೈನ್ (ಉಪನಾಯಕಿ), ಪ್ರಿಯಾ ಎಂ, ರಕ್ಷಿತಾ ಜೆ.ವಿ, ಚೈತನ್ಯಾ ಕೆ.ಆರ್, ಅಬಿತಾ ಎ, ಅರ್ಲಿನ್ ಬೆಥಿಯಾ, ಪ್ರಿಯಾ ಪೈ, ಸೌಮ್ಯಾ ಎಂ, ದೀಕ್ಷಿತಾ ಸುತಾರ್, ಆಧ್ಯಾ ಎ, ಸಮರಾ ಎ, ಟಂ.ತಮನ್ನಾ. ಯೋಗಶ್ರೀ (ಕೋಚ್), ನಿರ್ಮಲಾ ಬೆನ್ನೂರ್ (ಮ್ಯಾನೇಜರ್).

ಬೆಂಗಳೂರಿನಲ್ಲಿ ಇಂಡಿಯನ್ ಗ್ರ್ಯಾನ್ ಪ್ರಿ ಅಥ್ಲೆಟಿಕ್ಸ್ ಇಂದು

ಪ್ರಜಾವಾಣಿ ವಾರ್ತೆ

ಜ್ಯೋತಿ ಯರ್ರಾಜಿ

ಬೆಂಗಳೂರು: ವೇಗದ ಓಟಗಾರರಾದ ಅಮ್ಲನ್ ಬೋರ್ಗೋಹೈನ್ ಮತ್ತು ಜ್ಯೋತಿ ಯರ್ರಾಜಿ ಅವರು ಶುಕ್ರವಾರ ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಕ್ರೀಡಾಂಗಣದಲ್ಲಿ ನಡೆಯಲಿರುವ ಪ್ರಥಮ ಇಂಡಿಯನ್ ಗ್ರ್ಯಾನ್ ಪ್ರಿ ಅಥ್ಲೆಟಿಕ್ಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಏಪ್ರಿಲ್ 21ರಿಂದ 24ರವರೆಗೆ ನಡೆಯಲಿರುವ 28ನೇ ರಾಷ್ಟ್ರೀಯ ಫೆಡರೇಷನ್ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಹಿನ್ನೆಲೆಯಲ್ಲಿ ಈ ಗ್ರ್ಯಾನ್‌ಪ್ರಿ ಕೂಟವು ಮಹತ್ವದ್ದಾಗಿದೆ. ಆದರೆ ದೇಶದ ಪ್ರಮುಖ ಅಥ್ಲೀಟ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಭಾಗವಹಿಸುತ್ತಿಲ್ಲ. ಬೆರಳೆಣಿಕೆಯಷ್ಟು ಪ್ರಮುಖರು ಕಣಕ್ಕಿಳಿಯುತ್ತಿದ್ದಾರೆ. ಅದರಲ್ಲಿ ಅಮ್ಲನ್ (ಪುರುಷರ 100 ಮೀ, 200 ಮೀ ಓಟ), ಜ್ಯೋತಿ (ಮಹಿಳೆಯರ 200 ಮೀ, 100 ಮೀ ಹರ್ಡಲ್ಸ್), ಜಿಗಿತ ವಿಭಾಗದ ಅಥ್ಲೀಟ್‌ಗಳಾದ ಮೊಹಮ್ಮದ್ ಅನೀಸ್ ಯಾಹ್ಯಾ ಮತ್ತು ಪ್ರವೀಣ ಚಿತ್ರವೇಲ್ (ಲಾಂಗ್ ಜಂಪ್) ಕಣದಲ್ಲಿದ್ದಾರೆ.

26 ವರ್ಷದ ವಯಸ್ಸಿನ ಅಮ್ಲನ್ ಅವರು ಅಸ್ಸಾಂ ರಾಜ್ಯದವರು. 100 ಮೀ ಓಟದಲ್ಲಿ 10.25ಸೆಕೆಂಡು ಮತ್ತು 200 ಮೀ ಓಟದಲ್ಲಿ 20.52 ಸೆಕೆಂಡುಗಳ ದಾಖಲೆಯನ್ನು 2022ರಲ್ಲಿ ಮಾಡಿದ್ದರು. ಈಚೆಗೆ ಡೆಹ್ರಾಡೂನ್‌ನಲ್ಲಿ ನಡೆದಿದ್ದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಅಮ್ಲನ್ ಕಂಚು (10.43ಸೆ) ಗೆದ್ದಿದ್ದರು.

ಮಹಿಳೆಯರ ಹರ್ಡಲ್ಸ್‌ನಲ್ಲಿ ಜ್ಯೋತಿ ಅವರು ಪ್ರಸ್ತುತ ಪ್ರಮುಖ ಅಥ್ಲೀಟ್ ಆಗಿದ್ದಾರೆ. ಆಂಧ್ರಪ್ರದೇಶದ ಜ್ಯೋತಿ ಇದೇ ವರ್ಷ ಟೋಕಿಯೊದಲ್ಲಿ ನಡೆಯುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಮೇಲೆ ಕಣ್ಣಿಟ್ಟಿದ್ದಾರೆ. ಅದಕ್ಕಾಗಿ ಸಿದ್ಧತೆ ನಡೆಸಿದ್ದಾರೆ. 100 ಮೀ ಹರ್ಡಲ್ಸ್‌ನಲ್ಲಿ ಅರ್ಹತಾ ಸಮಯವು 12.73 ಸೆಕೆಂಡುಗಳಾಗಿದೆ. ಜ್ಯೋತಿ 12.78 ಸೆ. ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ.

ಆತಿಥೇಯ ಕರ್ನಾಟಕ ತಂಡದಲ್ಲಿ ಒಟ್ಟು 30 ಅಥ್ಲೀಟ್‌ಗಳಿದ್ದಾರೆ. ಅದರಲ್ಲಿ ಓಟದ ವಿಭಾಗದಲ್ಲಿ ಎ.ಟಿ. ದಾನೇಶ್ವರಿ, ಎಸ್.ಎಸ್. ಸ್ನೇಹಾ, ಹೈಜಂಪ್ ಅಥ್ಲೀಟ್ ಅಭಿನಯಾ ಎಸ್ ಶೆಟ್ಟಿ ಮತ್ತು ಜೆಸಿ ಸಂದೇಶ್ ಪ್ರಮುಖರಾಗಿದ್ದಾರೆ.

ಒಂದು ದಿನದ ಈ ಕೂಟದಲ್ಲಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಕ್ರಮವಾಗಿ 10 ಸ್ಪರ್ಧೆಗಳು ನಡೆಯಲಿವೆ. ಟ್ರ್ಯಾಕ್‌ನಲ್ಲಿ 100 ಮೀ, 200 ಮೀ, 100 ಮೀ ಹರ್ಡಲ್ಸ್, 110 ಮೀ ಹರ್ಡಲ್ಸ್, 800 ಮೀ, 5000 ಮೀ; ಫೀಲ್ಡ್‌ನಲ್ಲಿ ಲಾಂಗ್ ಜಂಪ್, ಹೈಜಂಪ್, ಪೋಲ್‌ವಾಲ್ಟ್, ಶಾಟ್‌ಪಟ್, ಜಾವೆಲಿನ್ ಥ್ರೋ ನಡೆಯಲಿವೆ.

ಟಿಟಿ: ಸಂಜೀವ, ಶಶಿಧರಗೆ ಚಿನ್ನ

ಬೆಂಗಳೂರು: ಕರ್ನಾಟಕದ ಸಂಜೀವ ಜಿ. ಹಮ್ಮಣ್ಣವರ ಮತ್ತು ಶಶಿಧರ ಕುಲಕರ್ಣಿ ಅವರು ನವದೆಹಲಿಯ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಖೇಲೊ ಇಂಡಿಯಾ ಪ್ಯಾರಾ ಕ್ರೀಡಾಕೂಟದ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಪುರುಷರ ಸಿಂಗಲ್ಸ್‌ನ (ಕ್ಲಾಸ್ 7) ಫೈನಲ್‌ನಲ್ಲಿ ಸಂಜೀವ 13-11, 10-12, 12-10, 11-7ರಿಂದ ಉತ್ತರ ಪ್ರದೇಶದ ಶಿವಂ ಪಾಲ್ ಅವರನ್ನು ಮಣಿಸಿದರು. ಕ್ಲಾಸ್ 8 ಫೈನಲ್‌ನಲ್ಲಿ ಶಶಿಧರ ಅವರು 11-9, 11-6, 17-15ರಿಂದ ಮಧ್ಯಪ್ರದೇಶದ ಗಜಾನನ ಪರಮಾರ್ ಅವರನ್ನು ಸೋಲಿಸಿದರು. ರಾಜ್ಯದ ಅಜಯ್ ಜಿ.ವಿ. (ಕ್ಲಾಸ್ 8) ಮತ್ತು ಜಗನ್ನಾಥ್ ಎಚ್.ಎಂ. (ಕ್ಲಾಸ್ 3) ಸೆಮಿಫೈನಲ್‌ನಲ್ಲಿ ಸೋತ ನಂತರ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದ (ಕ್ಲಾಸ್ 8) ಫೈನಲ್‌ನಲ್ಲಿ ಸವಿತಾ ಅಜ್ಜನಕಟ್ಟಿ 11-8, 7-11, 10-12, 9-11ರಿಂದ ತೆಲಂಗಾಣದ ನಿಶಾ ಇನ್ನಾನಿ ವಿರುದ್ಧ ಸೋತು ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಕೊಡವ ಕೌಟುಂಬಿಕ ಹಾಕಿ ಟೂರ್ನಿಗೆ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮುದ್ದಂಡ ಕಪ್ ಕೊಡವ ಕುಟುಂಬಗಳ ಹಬ್ಬವು ಶುಕ್ರವಾರ ಆರಂಭವಾಗಲಿದೆ. ಇದು 25ನೇ ಆವೃತ್ತಿಯ ಟೂರ್ನಿಯಾಗಿದ್ದು ಒಂದು ತಿಂಗಳು ನಡೆಯಲಿದೆ.

ಇಲ್ಲಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಎರಡು ಮೈದಾನಗಳು ಹಾಗೂ ಪೊಲೀಸ್ ಕವಾಯತಿನ ಒಂದು ಮೈದಾನದಲ್ಲಿ 396 ತಂಡಗಳು ಆಡಲಿವೆ. ಇಷ್ಟು ದೊಡ್ಡ ಸಂಖ್ಯೆಯ ತಂಡಗಳು ಹಿಂದಿನ ಟೂರ್ನಿಗಳ ಭಾಗವಹಿಸಿರಲಿಲ್ಲ.

ಈ ಹಿಂದೆ ಟೂರ್ನಿಗಳನ್ನು ಆಯೋಜಿಸಿದ್ದ ಕುಟುಂಬಗಳ ಐನ್‌ಮನೆಗಳಿಗೆ ಕ್ರೀಡಾಜ್ಯೋತಿಯನ್ನು ಕೊಂಡೊಯ್ಯಲಾಗುತ್ತಿದೆ. ಈ ಜ್ಯೋತಿಯು ಶುಕ್ರವಾರ ಉದ್ಘಾಟನೆ ಸ್ಥಳ ತಲುಪಲಿದೆ. ಮಧ್ಯಾಹ್ನ 12.05ಕ್ಕೆ ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಉದ್ಘಾಟಿಸಲಿದ್ದಾರೆ.

ಕೊಡಗು ಜಿಲ್ಲಾಡಳಿತ ಹಾಗೂ ಆಯೋಜಕ ಕುಟುಂಬದ ನಡುವೆ ಮತ್ತು ಕೊಡವ ಹಾಕಿ ಅಕಾಡೆಮಿ ಇಲೆವೆನ್ ಮತ್ತು ಕರ್ನಾಟಕ ಇಲೆವೆನ್ ತಂಡಗಳ ನಡುವೆ ಪ್ರದರ್ಶನ ಪಂದ್ಯಗಳು ನಡೆಯಲಿವೆ.

ಈ ಬಾರಿ ಮಹಿಳೆಯರಿಗೆ ಪ್ರತ್ಯೇಕ ಹಾಕಿ ಟೂರ್ನಿ ನಡೆಯಲಿದ್ದು, ಇದಕ್ಕಾಗಿ 40 ತಂಡಗಳು ನೋಂದಣಿಯಾಗಿವೆ. ಮೈದಾನದಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚು ಮಂದಿ ಕುಳಿತುಕೊಳ್ಳಬಹುದಾದ ಗ್ಯಾಲರಿ ನಿರ್ಮಿಸಲಾಗಿದ್ದು, 35 ಮಳಿಗೆಗಳನ್ನು ಹಾಕಲಾಗಿದೆ. ಭಾರತ ಮಹಿಳಾ ಹಾಕಿ ತಂಡದ ನಾಯಕಿ ಲಾಲ್ ರೆಮ್ ಸಿಯಾಮಿ, ಒಲಿಂಪಿಯನ್ ಹಾಕಿಪಟು ಮನ್‌ಪ್ರೀತ್ ಸಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಡ್ರಾ ಪಂದ್ಯದಲ್ಲಿ ಡೆಕ್ಕನ್–ರೂಟ್ಸ್

ಬೆಂಗಳೂರು: ಎಫ್‌ಸಿ ಡೆಕ್ಕನ್ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್‌ನ ಪಂದ್ಯದಲ್ಲಿ 2–2ರಿಂದ ರೂಟ್ಸ್ ಎಫ್‌ಎಸ್ ತಂಡದೊಂದಿಗೆ ಡ್ರಾ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಡೆಕ್ಕನ್ ಪರ ವಿನಯ್ ಎಂ. (52ನೇ ನಿಮಿಷ) ಮತ್ತು ಹಿಜಾಮ್ ಎಸ್. ಸಿಂಗ್ (77ನೇ) ಗೋಲು ಗಳಿಸಿದರು. ರೂಟ್ಸ್ ಪರ ಸೀಗೌ ಲುನ್ ಹೆಂಗ್ನಾ (16ನೇ ಮತ್ತು 32ನೇ) ಎರಡು ಬಾರಿ ಚೆಂಡನ್ನು ಗುರಿ ಸೇರಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ವಿಜಯನಗರ ಎಫ್‌ಸಿ ತಂಡವು ಗೋಲುರಹಿತವಾಗಿ ಏಜೀಸ್ ಎಫ್‌ಸಿ ತಂಡದೊಂದಿಗೆ ಡ್ರಾ ಮಾಡಿಕೊಂಡಿತು.

ಜೈ ಭಾರತ್ ತಂಡಕ್ಕೆ ಜಯ: ಜೈ ಭಾರತ್ ನಗರ ಎಫ್‌ಸಿ ತಂಡವು 3–0 ಗೋಲುಗಳಿಂದ ಫ್ರೀಡಂ ತಂಡವನ್ನು ಮಣಿಸಿತು. ಜೈಭಾರತ್ ತಂಡದ ಕೆ.ಎಂ. ಮೊಹಮ್ಮದ್ ಶಮೀಂ (16ನೇ), ಮಹಮ್ಮದ್ ಡ್ಯಾನಿಶ್ (23ನೇ) ಮತ್ತು ಮೊಹಮ್ಮದ್ ರಬೀಹ್ ಕೆ.ಪಿ (40ನೇ) ಗೋಲು ಗಳಿಸಿದರು.

ಇಂಗ್ಲೆಂಡ್ ವೇಗಿ ಲಿವರ್ ಇನ್ನಿಲ್ಲ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡ 1970–71ರ ಆ್ಯಷಸ್ ಸರಣಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವೇಗದ ಬೌಲರ್ ಪೀಟರ್ ಲಿವರ್ (84) ಗುರುವಾರ ಇಲ್ಲಿ ನಿಧನರಾದರು.

17 ಟೆಸ್ಟ್ ಪಂದ್ಯಗಳನ್ನು ಆಡಿದ್ದ ಅವರು 41 ವಿಕೆಟ್ ಪಡೆದಿದ್ದರು. ಆಸ್ಟ್ರೇಲಿಯಾ ವಿರುದ್ಧ 1971ರ ಪ್ರಪ್ರಥಮ ಪಂದ್ಯ ಸೇರಿದಂತೆ 10 ಏಕದಿನ ಪಂದ್ಯಗಳನ್ನು ಆಡಿದ್ದರು. 1970–71ರಲ್ಲಿ ರೇ ಇಲಿಂಗ್‌ವರ್ತ್ ನೇತೃತ್ವದ ತಂಡದಲ್ಲಿ ಆ್ಯಷಸ್ ಪ್ರವಾಸ ಮಾಡಿದ್ದರು. 1975ರಲ್ಲಿ ಮೆಲ್ಬರ್ನ್‌ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ 38 ರನ್ನಿಗೆ 6 ವಿಕೆಟ್ ಪಡೆದಿದ್ದು ಅವರ ಜೀವನಶ್ರೇಷ್ಠ ಸಾಧನೆ.

ಹೆಲ್ಮೆಟ್ ಇಲ್ಲದೇ ಆಡುತ್ತಿದ್ದ ಅಂದಿನ ದಿನಗಳವು. 1975ರ ಆಕ್ಲೆಂಡ್ ಟೆಸ್ಟ್ ಪಂದ್ಯದಲ್ಲಿ ಅವರ ಬೌನ್ಸರ್ ಒಂದು ನ್ಯೂಜಿಲೆಂಡ್‌ನ ಇವಾನ್ ಚಾಟ್‌ಫೀಲ್ಡ್ ಅವರ ತಲೆಗೆ ಬಡಿದಿತ್ತು. ಆ ಏಟಿಗೆ ಬಾಲಂಗೋಚಿ ಆಟಗಾರ ಚಾಟ್‌ಫೀಲ್ಡ್ ಅವರ ಎದೆಬಡಿತ ಕ್ಷಣಕಾಲ ನಿಂತರೂ, ವೈದ್ಯಕೀಯ ತುರ್ತು ದೊರೆತ ಕಾರಣ ಅವರು ಬದುಕುಳಿದಿದ್ದರು.

‘ಜೀವ ಉಳಿಸಿಕೊಳ್ಳಲು ಅವರು ನರಳಾಡುತ್ತಿದ್ದ ರೀತಿ ನೋಡಿದಾಗ ಆತನನ್ನು ಸಾಯಿಸಿದೆನೇನೊ ಎಂದು ನನಗೆ ವೇದನೆಯಾಯಿತು. ನನ್ನ ಮೇಲೆಯೇ ಜುಗುಪ್ಸೆ ಮೂಡಿತು. ನಾನು ಪೆವಿಲಿಯನ್‌ಗೆ ಮರಳುವಾಗ ಹಾದಿಯಲ್ಲಿ ನಿವೃತ್ತನಾಗಬೇಕೆಂದು ಯೋಚಿಸಿದ್ದೆ’ ಎಂದು ಲಿವರ್ ಹೇಳಿದ್ದರು. ನಂತರದ ದಿನಗಳಲ್ಲಿ ಈ ಆಕಸ್ಮಿಕಕ್ಕೆ ಹೊಣೆಯಲ್ಲ ಎಂದು ಚಾಟ್‌ಫೀಲ್ಡ್ ಅವರೇ ಲಿವರ್‌ಗೆ ಮನವರಿಕೆ ಮಾಡಿಕೊಟ್ಟರು.

301 ಪ್ರಥಮ ದರ್ಜೆ ಪಂದ್ಯಗಳನ್ನಾಡಿ 796 ವಿಕೆಟ್ ಕಬಳಿಸಿದ್ದ ಪೀಟರ್ ಅವರನ್ನು ಕಳೆದ ವರ್ಷ ಹಾಲ್ ಆಫ್ ಫೇಮ್‌ಗೆ ಸೇರ್ಪಡೆ ಮಾಡಲಾಗಿತ್ತು.

ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಅರ್ಹತಾ ಟೂರ್ನಿ: ‘ಬಿ’ ಗುಂಪಿನಲ್ಲಿ ಭಾರತ

ನವದೆಹಲಿ (ಪಿಟಿಐ): ಭಾರತ ತಂಡವು, ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿ ಅರ್ಹತಾ ಸುತ್ತಿನಲ್ಲಿ ‘ಬಿ’ ಗುಂಪಿನಲ್ಲಿದೆ. ಗುರುವಾರ ‘ಡ್ರಾ’ ನಡೆದಿದ್ದು, ಭಾರತದ ಜೊತೆ ಥಾಯ್ಲೆಂಡ್, ಮಂಗೋಲಿಯಾ, ತಿಮೋರ್ ಲೆಸ್ತೆ ಮತ್ತು ಇರಾಕ್ ತಂಡಗಳೂ ಇದೇ ಗುಂಪಿನಲ್ಲಿವೆ.

ಕ್ವಾಲಾಲಂಪುರದ ಎಎಫ್‌ಸಿ ಹೌಸ್‌ನಲ್ಲಿ ‘ಡ್ರಾ’ ಪ್ರಕ್ರಿಯೆ ನಡೆಯಿತು. ಥಾಯ್ಲೆಂಡ್, ಜೂನ್ 23 ರಿಂದ ಜುಲೈ 5ರವರೆಗೆ ನಡೆಯುವ ‘ಬಿ’ ಗುಂಪಿನ ಅರ್ಹತಾ ಪಂದ್ಯಗಳ ಆತಿಥ್ಯ ವಹಿಸಲಿದೆ. ಸಿಂಗಲ್ ರೌಂಡ್‌ರಾಬಿನ್ ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ. ಗುಂಪಿನ ವಿಜೇತರು ಟೂರ್ನಿಯ ಫೈನಲ್‌ಗೆ ಅರ್ಹತೆ ಪಡೆಯಲಿದ್ದಾರೆ. ಫೈನಲ್ ಮಾರ್ಚ್ 1 ರಿಂದ 26ರವರೆಗೆ ಆಸ್ಟ್ರೇಲಿಯಾದ ಆತಿಥ್ಯದಲ್ಲಿ ಅಲ್ಲಿನ ಮೂರು ನಗರಗಳಲ್ಲಿ ನಡೆಯಲಿವೆ. ತಂಡಗಳನ್ನು, ಮಾರ್ಚ್ 6ರಂದು ಪ್ರಕಟಿಸಲಾಗಿದ್ದ ಫಿಫಾ ರ‍್ಯಾಂಕಿಂಗ್‌ಗೆ ಅನುಗುಣವಾಗಿ ಐದು ಗುಂಪುಗಳಲ್ಲಿ ವಿಂಗಡಿಲಾಗಿದೆ.

2022ರಲ್ಲಿ ಚೀನಾ ಚಾಂಪಿಯನ್, ದಕ್ಷಿಣ ಕೊರಿಯಾ ರನ್ನರ್ ಅಪ್ ಆಗಿತ್ತು. ಎಎಫ್‌ಸಿ ಏಷ್ಯನ್ ಕಪ್‌ನಲ್ಲಿ ಮೊದಲ ಆರು ಸ್ಥಾನ ಗಳಿಸುವ ತಂಡಗಳು, ಬ್ರೆಜಿಲ್‌ನಲ್ಲಿ 2027ರಲ್ಲಿ ನಡೆಯಲಿರುವ ಫಿಫಾ ಮಹಿಳಾ ವಿಶ್ವಕಪ್‌ಗೆ ಅರ್ಹತೆ ಪಡೆಯಲಿವೆ.

#Terms and Conditions apply. #The Instant Cashback Offer of ₹5100 is available on purchase of OBD2A Honda2wheelers models which includes Activa 110, Activa 125, Dio 110, Dio 125, Shine 100, SP 160, Hornet 2.0, CB 200 X and Livo 110. #The Instant Cashback is valid until stocks last or 31st March 2025, whichever is earlier. #The offer may be modified or withdrawn at any time without prior intimation. #The scheme is offered by Authorised Main Dealers and Associate Dealers and can be availed on purchase of above mentioned models from Authorised Main Dealers and Associate Dealers. *Loan approval is at the sole discretion of financiers, and additional documents may be required. *Interest rates, down payments, and tenure depend on the applicant's credit profile. *Customers can either choose Low ROI or 0 processing/documentation fees offered by authorised main dealers and associate dealers and can be availed on purchase of Activa 110cc & Activa 125cc from authorised main dealers and authorized dealers. *The offers are applicable in Tamil Nadu, Telangana, Karnataka, Kerala, Andhra Pradesh and Union Territory of Puducherry only. *Offers may change or be withdrawn without prior notice. Additional 5% Cashback Offer up to a maximum of Rs. 5000 available on all Honda2wheelers models for EMI transactions made using HDFC Bank & IDFC FIRST Bank credit cards through Pine Labs machines only which is valid on one transaction per card/order during the offer period and is valid till 31st March 2025. The scheme is available in selected outlets only. Product shown in the picture may vary from actual product available in the market. Accessories shown in the picture are not part of standard equipment.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: **Ananda Honda** - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda** - **ANEKAL:** 080-27830234, 9880417779; **City Honda** - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda** - **DOMLUR:** 49656565, 9342432156; **INDIRANAGAR:** 9342432157; **Dhruvdesh Honda** - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; **Raja Honda** - **KORAMANGALA:** 08067329000,9035310055; **Prime Honda** - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda** - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda** - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda** - **KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda** - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda** - **DODDABALLAPURA:** 7022620885; **NELAMANAGALA:** 080-27722333, 7022008894; **Wings Honda** - **HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda** - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda** - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda** - **GOWRIBIDANUR:** 9900007422/33; **SIDLAGHATTA:** 9611596113; **Century Honda** - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda** - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda** - **PAVAGADA:** 9535941215; **Annapoorna Honda** - **MADHUGIRI:** 9886627429; **Vignesh Honda** - **TIPTUR:** 9886711161; **TURUVEKERE:** 9448214014; **Sri Srinivasa Honda** - **CHIKKANAYAKANAHALLI:** 8722522221; **Prestige Honda** - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda** - **BIDADI:** 9945966771, 9164871007; **Springs Honda** - **KENGERI:** 9513771114; **Nideesh Honda** - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in